info@buntsanghablr.com
buntsanghabangalore@yahoo.in

# ಸ್ನೇಹ ಚಿಂತನೆ

ಮಾಸ ಪತ್ರಿಕೆ

ಸಂಚಿಕೆ ಬೆಲೆ ರೂ. 1/–

ಆಗಸ್ಟ್ 2026
ಸಂಪುಟ 22 ಸಂಚಿಕೆ 08



ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–II– ಮಾನ್ಸೂನ್ ಫೆಸ್ಟ್ 2026



ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–II– ವಿದ್ಯಾರ್ಥಿಗಳ ಪದಗ್ರಹಣ ಕಾರ್ಯಕ್ರಮ



ಬಂಟರ ಸಂಘ ಬೆಂಗಳೂರು ಮತ್ತು ಚಿನ್ಮಯ ಮಿಷನ್ ಸಂಯುಕ್ತ ಆಶ್ರಯದಲ್ಲಿ ನಡೆದ ಗೀತಾಜ್ಞಾನಯಜ್ಞ



Inter-School KISA "Best out of waste" Competition

**ಸಂಬಂಧಗಳು ಉಳಿದರೆ ಸಮಾಜ ಉಳಿಯುತ್ತದೆ**

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

# 324, Bunts' Sangha Complex, Chord Road,
Vijayanagar, Bengaluru - 560040.
P : 080-23399323 / 23399636 | E : info@buntsanghablr.com


ಬಂಟರ ಸಂಘ, ಬೆಂಗಳೂರು
ಚುನಾವಣೆ 2026-'29
TEAM
Dr. DEEPAK SHETTY
ಇದು ನಿಮ್ಮ ಟೀಮ್!
01 DR.DEEPAK SHETTY
PRESIDENT
01 MADHUKAR SHETTY.M
VICE PRESIDENT
02 SOUMYAPRIYA HEGDE
VICE PRESIDENT
ELECTION DATE
20
SEPT 2026
9AM TO 5PM
01 AMARNATH SHETTY
HONORARY SECRETARY
02 SUREKHA SHETTY
JOINT SECRETARY
01 RAMITH B SHETTY
TREASURER
ಆಡಳಿತಕ್ಕೆ ಬೇಕಾದ ಸಮರ್ಥ ಟೀಮ್
ಅಭಿವೃದ್ಧಿಗೆ ಬೇಕಾದ ಸಮಗ್ರ ದೃಷ್ಟಿಯ ಥೀಮ್
ಎರಡನ್ನೂ ಹೊಂದಿರುವ ಏಕೈಕ ತಂಡ
ಡಾ.ದೀಪಕ್ ಶೆಟ್ಟಿ ಟೀಮ್
ಸಂಪೂರ್ಣ ತಂಡಕ್ಕೆ ನಿಮ್ಮೆಲ್ಲರ ಅಮೂಲ್ಯ
ಮತದ ಬೆಂಬಲ ಇರಲಿ ಎಂದು ವಿನಂತಿಸುವ
ಎಂ.ಬಿ ಉಮೇಶ್ ಶೆಟ್ಟಿ ಮಂದಾರ್ತಿ
ಸಂಸ್ಥಾಪಕರು,
ಅಭಯ ಸೇವಾ ಫೌಂಡೇಶನ್ ಬೆಂಗಳೂರು

ADVT.

VOL - 22
AUGUST - 2026
ISSUE - 08

# ಸ್ನೇಹ ಚಿಂತನೆ

Monthly Magazine Published by
BUNTS' SANGHA BANGALORE

**ಸಾಹಿತ್ಯ ಪ್ರಕಾಶನ ಸಮಿತಿ**
ಚೇರ್‌ಪರ್ಸನ್ ಮತ್ತು ಗೌರವ ಸಂಪಾದಕರು:
ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ
**ಸಹ ಸಂಪಾದಕರು:**
ಶ್ರೀ ದೀಪಕ್ ಜೆ. ಶೆಟ್ಟಿ
**ಗೌರವ ಸಲಹೆಗಾರರು:**
ಶ್ರೀ ಎಂ. ಮುರಲೀಧರ ಹೆಗ್ಡೆ
ಶ್ರೀ ಬಾಲಕೃಷ್ಣ ಶೆಟ್ಟಿ (ಎಬಿ ಶೆಟ್ಟಿ)
ಡಾ. ದೀಪಕ್ ಶೆಟ್ಟಿ
**ಸಂಪಾದಕೀಯ ಮಂಡಳಿ**
ಶ್ರೀಮತಿ ನಿರ್ಮಲ ಸಿ. ರೈ
ಶ್ರೀ ಪ್ರಸಾದ್ ಶೆಟ್ಟಿ ಸೀತಾನದಿ
ಶ್ರೀಮತಿ ಸ್ಮಿತಾ ಬಲ್ಲಾಳ್
ಶ್ರೀ ಸತೀಶ್ ಶೆಟ್ಟಿ ವಕ್ವಾಡಿ
ಶ್ರೀ ಸಂದೀಪ್ ಹೆಗ್ಗದ್ದೆ
ಶ್ರೀಮತಿ ಶ್ಯಾಮಲ ಶೆಟ್ಟಿ
**ಪತ್ರಿಕಾ ಸಲಹಾ ವಿಭಾಗ:**
ಸಮಾಜ ಸೇವೆ ವಿಭಾಗ: ಶ್ರೀ ಜಯರಾಮ ಶೆಟ್ಟಿ ನೂಜಾಡಿ
ಕಾನೂನು ಸಲಹೆಗಾರರು: ಶ್ರೀಮತಿ ಸುಪ್ರೀತಾ ಕೆ. ಶೆಟ್ಟಿ
ಆರೋಗ್ಯ ಮಾಹಿತಿ ವಿಭಾಗ: ಡಾ. ಶಾಲ್ಮಲೀ ಸುರೇಶ್
ಮನೋರಂಜನಾ ವಿಭಾಗ: ಶ್ರೀಮತಿ ರೇವತಿ ಶೆಟ್ಟಿ
ಶೈಕ್ಷಣಿಕ ವಿಭಾಗ: ಶ್ರೀಮತಿ ನಂದಿನಿ ನಾಗರಾಜ್ ಶೆಟ್ಟಿ
ಕ್ರೀಡಾ ವಿಭಾಗ: ಶ್ರೀ ನವೀನ್ ಶೆಟ್ಟಿ
**ಪೋಷಕ ಸದಸ್ಯರು:**
ಶ್ರೀಮತಿ ಮನೋರಮ ಚೌಟ
ಶ್ರೀಮತಿ ವೇದ ಎಸ್. ಶೆಟ್ಟಿ
ಶ್ರೀ ಬಿ. ಕುಸುಮಾಕರ ಶೆಟ್ಟಿ
ಶ್ರೀ ಆರ್.ಎಸ್. ಶೆಟ್ಟಿ
ಶ್ರೀಮತಿ ವಸಂತಿ ಪಿ. ಶೆಟ್ಟಿ
ಶ್ರೀ ಪ್ರಕಾಶ್ ಶೆಟ್ಟಿ
ಶ್ರೀ ಎ. ಜೆ. ಶೆಟ್ಟಿ
ಶ್ರೀಮತಿ ಗೀತ ಭಗವಾನ್‌ದಾಸ್ ರೈ
ಶ್ರೀ ಶ್ರೀನಿವಾಸ ಸೂಡ
**ಪ್ರಕಾಶಕರು:**
ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ

## ಒಳ ಪುಟಗಳಲ್ಲಿ.....

| | ಪುಟ |
|---|---|
| ಸಂಪಾದಕೀಯ | 2 |
| ಅಧ್ಯಕ್ಷರ ಮಾತು | 3 |
| ಗೌರವ ಕಾರ್ಯದರ್ಶಿಯವರ ವರದಿ | 4 |
| ಅಭ್ಯರ್ಥಿಗಳ ಅಂತಿಮ ಪಟ್ಟಿ | 5 |
| A Tryst with Destiny: My Char Dham Awakening | 36 |
| Report on : Parent Orientation, Music Day & Father's Day Celebration | 37 |
| ಬಿ.ಎಸ್.ಆರ್.ಎನ್.ಎಸ್.ವಿ ಸ್ಪೋರ್ಟ್ಸ್ ಫೆಸ್ಟಿವಲ್: ಕ್ರಿಕೆಟ್ ಪಂದ್ಯಾವಳಿ ಯಶಸ್ವಿ ಸಮಾಪನ | 39 |
| ಬಂಟರ ಸಂಘ ಆರ್. ಎನ್. ಎಸ್. ವಿದ್ಯಾನಿಕೇತನ 2026–27ನೇ ಸಾಲಿನ ಅಂತರ್ ಶಾಲಾ–ಕಾಲೇಜು ಕ್ರೀಡೋತ್ಸವದ ವೈಭವ | 42 |
| ಬಂಟರ ಸಂಘ ವಿಜಯನಗರದಲ್ಲಿ ಗೀತಾಜ್ಞಾನಯಜ್ಞ ಭಗವದ್ಗೀತೆಯ ಬೆಳಕಿನಲ್ಲಿ ಕರ್ಮದ ರಹಸ್ಯ | 43 |
| ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ ವಿದ್ಯಾರ್ಥಿನಿಯರ ವಸತಿ ನಿಲಯ ಮತ್ತು ಭೋಜನ ಶಾಲೆಯ ಉದ್ಘಾಟನಾ ಸಮಾರಂಭ | 45 |
| Bunts' Sangha R.N.S. Evening Degree College REPORT ON "SWAGATHA - THE CLASS OF ROOKIES' INCOMING PARTY 2026" | 48 |
| Bunts' Sangha R.N.S. Vidyaniketan - II LUMORA 2026 – A Celebration of Creativity, Talent and Culture | 49 |
| Bunts' Sangha R.N.S. Vidyaniketan CREATIVITY MEETS SUSTAINABILITY! | 50 |

### ಮುಖ ಪುಟ

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–II– ಮಾನ್ಸೂನ್ ಫೆಸ್ಟ್ 2026
ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–II– ವಿದ್ಯಾರ್ಥಿಗಳ ಪದಗ್ರಹಣ ಕಾರ್ಯಕ್ರಮ
ಬಂಟರ ಸಂಘ ಬೆಂಗಳೂರು ಮತ್ತು ಚಿನ್ಮಯ ಮಿಷನ್ ಸಂಯುಕ್ತ ಆಶ್ರಯದಲ್ಲಿ ನಡೆದ ಗೀತಾಜ್ಞಾನಯಜ್ಞ
Inter-School KISA "Best out of waste" Competition

ಈ ಸಂಚಿಕೆಯಲ್ಲಿ ಪ್ರಕಟವಾದ ಜಾಹೀರಾತು ಮತ್ತು ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಚಂದಾದಾರರು ಮತ್ತು ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ – ಸಂಪಾದಕ ಮಂಡಳಿ

# ಸಂಪಾದಕೀಯ



**ಸಂಬಂಧಗಳು ಉಳಿದರೆ ಸಮಾಜ ಉಳಿಯುತ್ತದೆ**

**ಪ್ರಿಯ ಓದುಗ ಬಂಧುಗಳೇ,**

ಕೆಲವು ಪಯಣಗಳಿಗೆ ಅಂತ್ಯವಿರುತ್ತದೆ. ಆದರೆ ಆ ಪಯಣದಲ್ಲಿ ಬೆಸೆದುಕೊಂಡ ಸಂಬಂಧಗಳಿಗೆ ಅಂತ್ಯವಿರುವುದಿಲ್ಲ.

ಹಲವಾರು ವರ್ಷಗಳಿಂದ ಭಜನಾ ಸೇವಕನಾಗಿ, ಧಾರ್ಮಿಕ ಮುಖಂಡನಾಗಿ ಹಾಗೂ ವಿವಿಧ ಸಂಘ–ಸಂಸ್ಥೆಗಳ ಮೂಲಕ ಸಮಾಜ ಸೇವೆ ಮಾಡುವ ಅವಕಾಶ ನನಗೆ ದೊರೆತಿದೆ. ಮಾಡಿದ ಸೇವೆಯನ್ನು ಎಂದಿಗೂ ದೊಡ್ಡದಾಗಿ ಹೇಳಿಕೊಳ್ಳುವ ಮನಸ್ಸು ನನ್ನದಲ್ಲ. ಏಕೆಂದರೆ ಸೇವೆ ಎನ್ನುವುದು ತೋರಿಸಿಕೊಳ್ಳುವುದಕ್ಕಲ್ಲ; ಮನಸ್ಸಿನ ತೃಪ್ತಿಗಾಗಿ ಮಾಡುವ ಕಾರ್ಯ.

ಆದರೆ 'ಸ್ನೇಹ ಚಿಂತನೆ'ಯ ಸಂಪಾದಕನಾಗಿ ಕಳೆದ ಎರಡು ವರ್ಷಗಳು ನನ್ನ ಸಮಾಜ ಸೇವೆಯ ಪಯಣದಲ್ಲಿ ಒಂದು ವಿಶಿಷ್ಟ ಅಧ್ಯಾಯ. ಇದು ಕೇವಲ ಒಂದು ಜವಾಬ್ದಾರಿಯನ್ನು ನಿರ್ವಹಿಸಿದ ಅವಧಿಯಲ್ಲ; ನಮ್ಮ ಸಮಾಜವನ್ನು ಹತ್ತಿರದಿಂದ ಅರಿತು, ಅದರ ಆಶಯ, ಅಂತರಂಗ, ಸಾಧನೆ, ಸವಾಲು ಮತ್ತು ಸಾಧ್ಯತೆಗಳನ್ನು ಅರ್ಥಮಾಡಿಕೊಳ್ಳಲು ದೊರೆತ ಅಮೂಲ್ಯ ಅವಕಾಶ.

ಈ ಎರಡು ವರ್ಷಗಳಲ್ಲಿ 'ಸ್ನೇಹ ಚಿಂತನೆ'ಯನ್ನು ಕೇವಲ ಒಂದು ಪತ್ರಿಕೆಯಾಗಿ ನೋಡದೆ, ನಮ್ಮ ಸಮಾಜದ ಕನ್ನಡಿ ಮತ್ತು ಚಿಂತನೆಯ ವೇದಿಕೆಯಾಗಿ ರೂಪಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ.

ಸಮಾಜದ ಒಳ್ಳೆಯ ಕಾರ್ಯಗಳಿಗೆ ಪ್ರೋತ್ಸಾಹ ನೀಡುವುದು, ಅಗತ್ಯವಿದ್ದಾಗ ಆರೋಗ್ಯಕರ ವಿಮರ್ಶೆಗೆ ಅವಕಾಶ ನೀಡುವುದು, ಪರ–ವಿರೋಧದ ಅಭಿಪ್ರಾಯಗಳಿಗೆ ಸಮಾನ ಗೌರವ ನೀಡುವುದು, ಸಂಘದ ಚಟುವಟಿಕೆಗಳನ್ನು ಸಮಾಜದ ಮುಂದೆ ಪರಿಚಯಿಸುವುದು ಹಾಗೂ ನಮ್ಮ ಯುವಪೀಳಿಗೆಗೆ ಪ್ರೇರಣೆ ನೀಡುವ ವಿಚಾರಗಳಿಗೆ ವೇದಿಕೆ ಕಲ್ಪಿಸುವುದು – ಇವೆಲ್ಲವೂ ನನ್ನ ಸಂಪಾದಕೀಯ ಜವಾಬ್ದಾರಿಯ ಭಾಗವಾಗಿತ್ತು.

ಪ್ರಶಂಸೆ ಬಂದಾಗ ಅದನ್ನು ಸ್ವೀಕರಿಸುವಷ್ಟು, ವಿಮರ್ಶೆ ಬಂದಾಗ ಅದನ್ನು ಸಹನೆಯಿಂದ ಕೇಳುವುದೂ ಸಂಪಾದಕನ ಜವಾಬ್ದಾರಿ ಎಂಬುದನ್ನು ಈ ಪಯಣ ನನಗೆ ಕಲಿಸಿತು.

ಯಾವುದೇ ವಿಚಾರವನ್ನು ಬರೆಯುವಾಗ ವ್ಯಕ್ತಿಗಿಂತ ವಿಚಾರಕ್ಕೆ ಆದ್ಯತೆ ನೀಡಲು, ಭಿನ್ನಾಭಿಪ್ರಾಯವನ್ನು ವೈಮನಸ್ಸಾಗಿ ಪರಿವರ್ತಿಸದಂತೆ ನೋಡಿಕೊಳ್ಳಲು ಮತ್ತು ನಮ್ಮ ಸಂಘ–ಸಮಾಜದ ಗೌರವಕ್ಕೆ ಧಕ್ಕೆ ಬಾರದಂತೆ ಎಚ್ಚರಿಕೆ ವಹಿಸಲು ಸದಾ ಪ್ರಯತ್ನಿಸಿದ್ದೇನೆ.

ನನ್ನ ಬದುಕಿನಲ್ಲಿ ಭಜನೆ ಮತ್ತು ಧರ್ಮಕ್ಕೆ ವಿಶೇಷ ಸ್ಥಾನವಿದೆ. ನನ್ನ ಪಾಲಿಗೆ ಧರ್ಮವೆಂದರೆ ಕೇವಲ ದೇವರ ಆರಾಧನೆಯಲ್ಲ; ನಮ್ಮ ನಡೆ–ನುಡಿಗಳಲ್ಲೂ ಧರ್ಮವನ್ನು ಉಳಿಸಿಕೊಳ್ಳುವುದು.

ನಾವು ನಮ್ಮ ತಾಯಿಯನ್ನು ಹೇಗೆ ಗೌರವಿಸಿ ಕಾಪಾಡುತ್ತೇವೆಯೋ, ಅದೇ ರೀತಿ ನಮ್ಮ ಬಂಟ ಸಮಾಜದ ಸಂಘವನ್ನೂ ತಾಯಿಯಂತೆ ಕಾಣಬೇಕು. ಆ ತಾಯಿಗೆ ವಂಚನೆ, ಅಪವಾದ ಅಥವಾ ನೋವು ಉಂಟಾಗದಂತೆ ನೋಡಿಕೊಳ್ಳುವುದು ಕೂಡ ಒಂದು ಮಹತ್ತರ ಸಮಾಜ ಸೇವೆ.

ಸಮಾಜ ಸೇವೆ ಮಾಡುತ್ತಾ ಸಮಾಜದ ಮನಸ್ಸಿಗೇ ನೋವು ಕೊಟ್ಟರೆ, ಆ ಸೇವೆಯ ಸಾರ್ಥಕತೆ ಏನು?

ಈ ಎರಡು ವರ್ಷಗಳ ಸೇವೆಗೆ ಅವಕಾಶ ನೀಡಿದ ನಮ್ಮ ಬಂಟರ ಸಂಘದ ತಾಯಿಗೆ ಶಿರಬಾಗಿ ನಮಿಸುತ್ತೇನೆ. ಹಾಗೆಯೇ ಈ ಜವಾಬ್ದಾರಿಯನ್ನು ನಿರ್ವಹಿಸಲು ಅವಕಾಶ, ಶಕ್ತಿ ಮತ್ತು ಮಾರ್ಗದರ್ಶನ ನೀಡಿದ ಸಂಘದ ಎಲ್ಲಾ ಹಿರಿಯರಿಗೂ ಗೌರವಪೂರ್ವಕವಾಗಿ ನಮಿಸುತ್ತೇನೆ.

ಶ್ರೀ ವರಸಿದ್ಧಿ ವಿನಾಯಕನ ಪಾದಕಮಲಗಳಿಗೆ ಭಕ್ತಿಪೂರ್ವಕವಾಗಿ ಶಿರಬಾಗಿ ನಮಿಸುತ್ತೇನೆ.

'ಸ್ನೇಹ ಚಿಂತನೆ'ಯ ಸಂಪಾದಕೀಯ ಜವಾಬ್ದಾರಿಗೆ ಇಂದು ವಿರಾಮ. ಆದರೆ ಸಮಾಜದೊಂದಿಗಿನ ನನ್ನ ಪಯಣಕ್ಕೆ ಎಂದಿಗೂ ವಿರಾಮವಿಲ್ಲ. ಹೆಸರು ಉಳಿಯುವುದಕ್ಕಿಂತ ಹೆಜ್ಜೆ ಗುರುತು ಉಳಿಯಲಿ. ಸೇವೆ ತೋರಿಸಿಕೊಳ್ಳುವುದಕ್ಕಿಂತ, ಸೇವೆಯ ಫಲ ಸಮಾಜಕ್ಕೆ ಕಾಣಲಿ. ಪದವಿ ಮುಗಿಯಬಹುದು; ಆದರೆ ಸಮಾಜದ ಮೇಲಿನ ಜವಾಬ್ದಾರಿ ಎಂದಿಗೂ ಮುಗಿಯದು.

ಸಂಬಂಧಗಳನ್ನು ಕಾಪಾಡೋಣ – ಸಮಾಜವನ್ನು ಕಟ್ಟೋಣ.
ಚಿಂತನೆಯನ್ನು ಬೆಳೆಸೋಣ – ಸಮಾಜವನ್ನು ಬಲಪಡಿಸೋಣ.
ನಮ್ಮ ನಂತರವೂ ನಮ್ಮ ಒಳ್ಳೆಯ ಹೆಜ್ಜೆ ಗುರುತುಗಳು ಉಳಿಯಲಿ.

ಪ್ರೀತಿ, ಗೌರವ ಮತ್ತು ಕೃತಜ್ಞತೆಯೊಂದಿಗೆ,

**ರವೀಂದ್ರ ಶೆಟ್ಟಿ ಹಟ್ಟಿಯಂಗಡಿ**
**ಸಂಪಾದಕರು**

# ಅಧ್ಯಕ್ಷರ ಮಾತು



**ಪ್ರೀತಿಯ ಬಂಟ ಬಾಂಧವರೇ,**

**ಸಮುದಾಯ ಬಾಂಧವರಿಗೆ 80ನೇ ಸ್ವಾತಂತ್ರ್ಯ ದಿನಾಚರಣೆ ಹಾಗೂ ಗೌರಿ – ಗಣೇಶ ಹಬ್ಬದ ಹಾರ್ದಿಕ ಶುಭಾಶಯಗಳು.**

**‘ಸಮಾಜದಿಂದ ನಾವು ಪಡೆಯುವುದಷ್ಟೇ ನಮ್ಮ ಯಶಸ್ಸಲ್ಲ, ನಾವು ಪಡೆದ ಜ್ಞಾನ, ಅನುಭವ, ಅವಕಾಶ, ಹಣ ಮತ್ತು ಗೌರವವನ್ನು ಸಮಾಜದ ಅಗತ್ಯವಿರುವವರಿಗೆ ಮರಳಿ ನೀಡುವುದರಲ್ಲಿಯೇ ನಿಜವಾದ ಜೀವನದ ಸಾರ್ಥಕತೆ ಅಡಗಿದೆ’.**

**ಸಂಕಲ್ಪದ ವಿದ್ಯಾನಿಧಿ ಯೋಜನೆ** – ದಿನಾಂಕ 19.07.2026 ರಂದು ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ಶಾಲೆಯಲ್ಲಿ ನಡೆದ ವಿದ್ಯಾರ್ಥಿನಿಯರ ವಸತಿ ನಿಲಯ ಮತ್ತು ಭೋಜನ ಶಾಲೆಯ ಉದ್ಘಾಟನಾ ಸಮಾರಂಭದ ವೇದಿಕೆಯಲ್ಲಿ, ಸಮಾಜದ ಶೈಕ್ಷಣಿಕ ಪ್ರಗತಿ ಮತ್ತು ವಿದ್ಯಾರ್ಥಿಗಳ ಉಜ್ವಲ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು **‘ಸಂಕಲ್ಪ ವಿದ್ಯಾನಿಧಿ ಯೋಜನೆ’**ಯನ್ನು ಅನುಷ್ಠಾನಗೊಳಿಸಲಾಯಿತು. ಶಿಕ್ಷಣವು ಪ್ರತಿಯೊಂದು ಕುಟುಂಬದ ಬದುಕನ್ನು ಬೆಳಗಿಸುವ ಶಕಿಯಾಗಿದ್ದು, ಆರ್ಥಿಕ ಸಂಕಷ್ಟದಿಂದ ಯಾವುದೇ ಕುಟುಂಬದ ಪ್ರತಿಭಾವಂತ ವಿದ್ಯಾರ್ಥಿಯ ವಿದ್ಯೆಗೆ ತೊಂದರೆಯಾಗಬಾರದು ಎನ್ನುವ ಉದಾತ್ತ ಆಶಯದೊಂದಿಗೆ ಈ ಯೋಜನೆ ರೂಪುಗೊಂಡಿದೆ. ಇಂದು ನಾವು ಶಿಕ್ಷಣಕ್ಕಾಗಿ ನೀಡುವ ಒಂದು ನೆರವು, ನಾಳೆ ಒಬ್ಬ ವಿದ್ಯಾರ್ಥಿಯ ಬದುಕನ್ನೇ ಬದಲಾಯಿಸುವ ಮಹತ್ತರ ಶಕಿಯಾಗಬಹುದು. ಈ ಕಾರ್ಯಕ್ರಮಕ್ಕೆ ನಮ್ಮ ಸಂಘದ ಹಿರಿಯರು, ದಾನಿಗಳು ಹಾಗೂ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಈ ಮಹತ್ವಾಕಾಂಕ್ಷೆಯ ಯೋಜನೆಗೆ ದೇಣಿಗೆ ನೀಡುವ ಬಗ್ಗೆ ಉತ್ತಮ ಸ್ಪಂದನೆ ದೊರೆತಿರುವುದು ಸಂತಸದ ವಿಷಯವಾಗಿದೆ. ಪ್ರತಿಯೊಬ್ಬರೂ ತಮ್ಮ ಕೈಲಾದ ಮಟ್ಟಿಗೆ ಈ ಪುಣ್ಯ ಕಾರ್ಯಕ್ಕೆ ಕೈಜೋಡಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಕೊಡುಗೆ ನೀಡಲು ಇಚ್ಛಿಸುವ ದಾನಿಗಳು ಹಾಗೂ ಸದಸ್ಯರು ಹೆಚ್ಚಿನ ಮಾಹಿತಿಗಾಗಿ ಸಂಘದ ಕಛೇರಿಯನ್ನು ಸಂಪರ್ಕಿಸಬಹುದು.

ನಮ್ಮ ಸಂಘದ ಸದಸ್ಯರಿಗೆ ಹೆಚ್ಚಿನ ಅನುಕೂಲ ಕಲ್ಪಿಸುವ ಉದ್ದೇಶದಿಂದ ಸದಸ್ಯತ್ವದ ಮಾಹಿತಿಯನ್ನು **‘ಮೊಬೈಲ್ ಆ್ಯಪ್’** ಮೂಲಕ ಡಿಜಿಟಲ್ ರೂಪದಲ್ಲಿ ಲಭ್ಯವಾಗುವಂತೆ ಮಾಡಲಾಗಿದೆ. ಸದಸ್ಯರೆಲ್ಲರೂ ಈ ಆ್ಯಪ್‌ನ್ನು ಡೌನ್ಲೋಡ್ ಮಾಡಿಕೊಂಡು ಉಪಯೋಗಿಸುವ ಮೂಲಕ ತಮ್ಮ ಮೂಲ ಜವಾಬ್ದಾರಿಯನ್ನು ಪೂರೈಸಬೇಕಾಗಿದೆ. ಈ ಆ್ಯಪ್‌ನ ಬಗ್ಗೆ ಈ ಸಂಚಿಕೆಯ ಮುಂದಿನ ಪುಟಗಳಲ್ಲಿ ವಿವರಿಸಿದಂತೆ ಎಲ್ಲಾ ಸದಸ್ಯರು ತಮ್ಮ ಸರಿಯಾದ ವಿಳಾಸ, ಇತ್ತೀಚಿನ ಭಾವಚಿತ್ರ ಮತ್ತು ಇತರ ಮಾಹಿತಿಗಳನ್ನು ನವೀಕರಿಸುವ ಮೂಲಕ ಸಂಘಕ್ಕೆ ಸಹಕರಿಸುವಂತೆ ಕೋರಿಕೆ.

ನಿಮ್ಮ ಅಮೂಲ್ಯ ಸಮಯವನ್ನು ಸಮಾಜಕ್ಕೆ ಮೀಸಲಿಟ್ಟು, ನಿಮ್ಮ ಜ್ಞಾನ, ಅನುಭವ ಮತ್ತು ಸಾಮರ್ಥ್ಯವನು ಸಂಘದ ಒಳಿತಿಗೆ ಧಾರೆ ಎರೆಯುವ ಮೂಲಕ ನಮ್ಮ ಮುಂದಿನ ಪೀಳಿಗೆಗೆ ಇನ್ನಷ್ಟು ಬಲಿಷ್ಠ, ಸುಸಂಘಟಿತ ಮತ್ತು ಅಭಿವೃದ್ಧಿಶೀಲ ಸಮಾಜವನ್ನು ಕಟ್ಟಿಕೊಡೋಣ ಎಂದು ಈ ಮೂಲಕ ತಮ್ಮಲ್ಲರಲ್ಲಿ ವಿನಮ್ರವಾಗಿ ಮನವಿ ಮಾಡಿಕೊಳ್ಳುತ್ತೇನೆ.

2026–29 ನೇ ಸಾಲಿನ ಚುನಾವಣೆಯ ಬಗ್ಗೆ ಯಾವುದೇ ಸದಸ್ಯರು ವೈಯಕ್ತಿಕ ಹಿತಾಸಕ್ತಿಗಿಂತ ಸಂಘದ ಹಾಗೂ ಎಲ್ಲಾ ಸದಸ್ಯರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು, ಸೌಹಾರ್ದಯುತವಾಗಿ, ಪಾರದರ್ಶಕವಾಗಿ ಹಾಗೂ ಉತ್ತಮ ರೀತಿಯಲ್ಲಿ ನಡೆಯುವಂತೆ ಸಹಕರಿಸಬೇಕೆಂದು ತಮ್ಮಲ್ಲಿ ವಿನಮ್ರವಾಗಿ ವಿನಂತಿಸಿಕೊಳ್ಳುತ್ತೇನೆ. ಸಮಾಜದ ಸೇವಾ ಮನೋಭಾವವನ್ನು ಮತ್ತಷ್ಟು ಗಟ್ಟಿಗೊಳಿಸಿ, ವೈಯಕ್ತಿಕ ಹಿತಾಸಕ್ತಿಗಿಂತ ಸಮಾಜದ ಹಿತಾಸಕ್ತಿಗೆ ಆದ್ಯತೆ ನೀಡಿ, ಸಂಘದ ಶ್ರೇಯೊಭಿವೃದ್ಧಿಗಾಗಿ ಒಗ್ಗಟ್ಟಿನಿಂದ ಕಾರ್ಯ ನಿರ್ವಹಿಸಲಿ ಎಂಬ ಆಶಯದೊಂದಿಗೆ, ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ಎಲ್ಲಾ ಅಭ್ಯರ್ಥಿಗಳಿಗೂ ನನ್ನ ಶುಭ ಹಾರೈಕೆಗಳು.

ಕೆಲವು ಅನಿವಾರ್ಯ ಕಾರಣಗಳಿಂದ ಹಾಗೂ ನ್ಯಾಯಾಲಯದಿಂದ ತಡೆಯಾಜ್ಞೆ ಬಂದ ಹಿನ್ನಲೆಯಲ್ಲಿ, ಚುನಾವಣಾ ಪ್ರಕ್ರಿಯೆಯನ್ನು ಕಾನೂನಾತ್ಮಕವಾಗಿ ಮತ್ತು ನಿಯಮಾನುಸಾರವಾಗಿ ಮುಂದುವರಿಸುವ ನಿಟ್ಟಿನಲ್ಲಿ, ದಿನಾಂಕ 16.08.2026 ರಂದು ನಿಗದಿಯಾಗಿದ್ದ ಚುನಾವಣೆಯು ದಿನಾಂಕ 20.09.2026, ಭಾನುವಾರ ಹಾಗೂ 19.09.2026 ರಂದು ಮಹಾಸಭೆಯು ನಡೆಯಲಿದ್ದು, ಈಗಾಗಲೇ ಎಲ್ಲಾ ಸದಸ್ಯರಿಗೂ ಮಹಾಸಭೆ ಸೂಚನಾ ಪತ್ರವನ್ನು ತಲುಪಿಸಲಾಗಿದೆ. ಚುನಾವಣೆ ಮುಂದೂಡಿಕೆಯ ಕುರಿತು ಈ ಸಂದರ್ಭದಲ್ಲಿ ಉಂಟಾದ ಅನಾನುಕೂಲತೆಗಾಗಿ ಹೃತ್ಪೂರ್ವಕವಾಗಿ ಕ್ಷಮೆಯಾಚಿಸುತ್ತಾ, ತಮ್ಮೆಲ್ಲರ ಸಹಕಾರವನ್ನು ಕೋರುತ್ತಿದ್ದೇವೆ.

**ಇಂತಿ ತಮ್ಮ ಪ್ರೀತಿಯ**

**ಸಿಎ. ಅಶೋಕ್ ಶೆಟ್ಟಿ ಎಂ.**

**ಅಧ್ಯಕ್ಷರು**

# ಗೌರವ ಕಾರ್ಯದರ್ಶಿಯವರ ವರದಿ



**ಮಾನ್ಯರೇ,**

**ಸರ್ವರಿಗೂ 80ನೇ ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳು.**

ಮಾನ್ಯ ಸದಸ್ಯರೇ,

ಸುಮಾರು 69 ವರ್ಷಗಳ ಇತಿಹಾಸವಿರುವ ಹೆಮ್ಮೆಯ ಸಂಘ ನಮ್ಮ ಬೆಂಗಳೂರು ಬಂಟರ ಸಂಘ. ಬೆಂಗಳೂರಿನಲ್ಲಿ ನೆಲೆಸಿರುವಂತಹ ಬಂಟ ಬಾಂಧವರ ಕಷ್ಟಗಳಿಗೆ ಸ್ಪಂದಿಸಲು, ನೆರವಾಗಲು ನಮ್ಮ ಹಿರಿಯರು ಸ್ಥಾಪಿಸಿದಂತಹ ಸಂಸ್ಥೆಯ ಘನತೆ, ಗೌರವವನ್ನು ಕಾಪಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಯಾವುದೇ ಸಮಾಜ, ಸಂಘಟನೆ ಅಥವಾ ಸಂಸ್ಥೆಯ ಬೆಳವಣಿಗೆಗೆ ಉತ್ತಮ ನಾಯಕತ್ವ ಅತ್ಯಗತ್ಯ. ಚುನಾವಣೆ ಎಂಬುದು ಸಂಘದ ಭವಿಷ್ಯವನ್ನು ರೂಪಿಸುವ ಜವಾಬ್ದಾರಿಯುತ ನಿರ್ಧಾರವಾಗಿದೆ. 2026–29ನೇ ಸಾಲಿನ ಆಡಳಿತ ಮಂಡಳಿ ಆಯ್ಕೆ ಚುನಾವಣೆಯನ್ನು ದಿನಾಂಕ 20.09.2026ರಂದು ಬೆಳಿಗ್ಗೆ 9.00ರಿಂದ ಸಂಜೆ 5.00 ಗಂಟೆಯವರೆಗೆ ಬಂಟರ ಸಂಘದ ಆವರಣದಲ್ಲಿ ಹಾಗೂ ಮೂಲ್ಕಿ ಸುಂದರ್‌ರಾಮ್ ಶೆಟ್ಟಿ ಮೆಮೋರಿಯಲ್ ಎಂ.ಎಸ್.ಆರ್.ಎಸ್ ನಗರ ಟ್ರಸ್ಟ್‌ನಲ್ಲಿ ಏಕಕಾಲದಲ್ಲಿ ಆಯೋಜಿಸಲಾಗಿದೆ. ದೂರದೃಷ್ಟಿಯುಳ್ಳ, ಕ್ರಿಯಾಶೀಲ, ಎಲ್ಲರನ್ನೂ ಜೊತೆಯಾಗಿ ಕೊಂಡೊಯ್ಯುವ, ಸಮರ್ಥ, ಪ್ರಾಮಾಣಿಕ ಮತ್ತು ಸೇವಾ ಮನೋಭಾವ ಹೊಂದಿರುವ ವ್ಯಕ್ತಿಗಳನ್ನು ಆಯ್ಕೆ ಮಾಡುವುದರಿಂದ ಸಂಘದ ಸಮಗ್ರ ಬೆಳವಣಿಗೆ ಸಾಧ್ಯ. ಆದ್ದರಿಂದ ಪ್ರತಿಯೊಬ್ಬ ಸದಸ್ಯರೂ ಕೂಡ ಮತದಾನದ ಹಕ್ಕನ್ನು ಜವಾಬ್ದಾರಿಯಿಂದ ಚಲಾಯಿಸಿ, ಸಮಾಜದ ಉಜ್ವಲ ಭವಿಷ್ಯಕ್ಕಾಗಿ ಸೂಕ್ತ ನಾಯಕತ್ವವನ್ನು ಆಯ್ಕೆ ಮಾಡಬೇಕಾಗಿ ವಿನಂತಿ.

ಈ ಬಾರಿಯೂ ಅತ್ಯಂತ ಪಾರದರ್ಶಕವಾಗಿ ಚುನಾವಣೆಯನ್ನು ನಡೆಸಲು ಬೇಕಾದಂತಹ ಎಲ್ಲಾ ಸಿದ್ಧತೆಗಳನ್ನು ಮಾಡಲಾಗಿದೆ. ಪ್ರತಿಯೊಬ್ಬ ಸದಸ್ಯರೂ ಚುನಾವಣಾ ನಿಯಮಾವಳಿಗಳನ್ನು ಗೌರವಿಸಿ, ಚುನಾವಣಾ ಪ್ರಕ್ರಿಯೆಯ ಯಶಸ್ಸಿಗೆ ಸದಸ್ಯರೆಲ್ಲರ ಸಹಕಾರವನ್ನು ಈ ಮೂಲಕ ಬಯಸುತ್ತೇನೆ.

ದಿನಾಂಕ 19.09.2026ರಂದು ಬಂಟರ ಸಂಘದ ಆರ್.ಎನ್.ಎಸ್. ವಿದ್ಯಾನಿಕೇತನ–I, ವಿಜಯನಗರದ ಶಾಲೆಯ ಆವರಣದಲ್ಲಿ ಮಹಾಸಭೆಯು ನಡೆಯಲಿದ್ದು, ಸದಸ್ಯರೆಲ್ಲರೂ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಲಹೆ ಸೂಚನೆಗಳನ್ನು ನೀಡಬೇಕಾಗಿ ವಿನಂತಿ.

ಸಂಘದ ಸದಸ್ಯರಿಗಾಗಿ ನೂತನವಾಗಿ ಅನಾವರಣಗೊಳಿಸಲಾದ ಮೊಬೈಲ್ ಆ್ಯಪನ್ನು ಸದಸ್ಯರೆಲ್ಲರೂ ಗೂಗಲ್ ಪ್ಲೆಸ್ಟೋರ್‌ನಿಂದ ಅಥವಾ ಸ್ಕ್ಯಾನರ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಬಳಸಬೇಕಾಗಿ ವಿನಂತಿ. ಈ ಆ್ಯಪ್ ಮೂಲಕ ತಮ್ಮ ವಿಳಾಸ ನವೀಕರಣ, ಸಂಘದ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿಗಳನ್ನೂ ಸಹ ಸುಲಭವಾಗಿ ಪಡೆದುಕೊಳ್ಳಬಹುದಾಗಿದೆ. ಮುಂಬರುವ ಚುನಾವಣೆಯಲ್ಲಿ ಸದಸ್ಯತ್ವ ಕಾರ್ಡ್ ಇಲ್ಲದಿದ್ದರೆ, ಮೊಬೈಲ್ ಆ್ಯಪ್‌ನಲ್ಲಿ ತಮ್ಮ ಸದಸ್ಯತ್ವ ಮಾಹಿತಿ ತೋರಿಸಿದರೆ ಮತದಾನ ಮಾಡಲು ಅನುವು ಮಾಡಿಕೊಡಲಾಗುವುದು.

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–I ಮತ್ತು II ಶಾಲೆಗಳಲ್ಲಿ ಮಕ್ಕಳು ಕಲಿಕೆಯ ಜೊತೆಗೆ ವಿವಿಧ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿ ತಮ್ಮ ಪತಿಭೆಗಳನ್ನು ಪ್ರದರ್ಶಿಸುತ್ತಿದ್ದಾರೆ. ವಿದ್ಯಾರ್ಥಿಗಳ ಪ್ರತಿಭೆಗಳನ್ನು ಗುರುತಿಸಿ ಅವರಿಗೆ ಸೂಕ್ತ ವೇದಿಕೆ ಹಾಗೂ ಅವಕಾಶಗಳನ್ನು ಕಲ್ಪಿಸುವ ಮೂಲಕ ಅವರ ಭವಿಷ್ಯದ ಬೆಳವಣಿಗೆಗೆ ಉತ್ತೇಜನ ನೀಡಲಾಗುತ್ತಿದೆ. ಶಾಲಾ ಶಿಕ್ಷಕರಿಗೆ ವಿವಿಧ ತರಬೇತಿಗಳನ್ನು ನೀಡಲಾಗುತ್ತಿದ್ದು, ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಪ್ರಾಶಸ್ತ್ಯ ನೀಡಲಾಗುತ್ತಿದೆ.

ದಿನಾಂಕ 02.08.2026ರಿಂದ 09.08.2026ರವರೆಗೆ ಪ್ರತೀ ದಿನ ಸಂಜೆ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನದಲ್ಲಿ ಸ್ವಾಮಿ ಗಹನಾನಂದರವರು ನಡೆಸಿ ಕೊಟ್ಟ ಗೀತಾ ಜ್ಞಾನ ಯಜ್ಞ ಕಾರ್ಯಕ್ರಮವು ಆಧ್ಯಾತ್ಮಿಕ ಬಂಧುಗಳ ಮೆಚ್ಚುಗೆಗೆ ಪಾತ್ರವಾಯಿತು.

ಪ್ರಾರ್ಥನಾ ಮಂದಿರ ಸಮಿತಿಯ ವತಿಯಿಂದ ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದಲ್ಲಿ ವರ್ಷಂಪ್ರತಿಯಂತೆ ಈ ವರ್ಷವೂ ಗಣೇಶ ಚತುರ್ಥಿಯನ್ನು ದಿನಾಂಕ 14.09.2026ರಂದು ಶ್ರದ್ಧಾ ಭಕ್ತಿಯಿಂದ ಆಚರಿಸಲಾಗುವುದು. ಸದಸ್ಯರೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಯಾವುದೇ ಒಂದು ಸಂಸ್ಥೆಗಳನ್ನು ಮುನ್ನಡೆಸುವಾಗ ಹಲವಾರು ಸವಾಲುಗಳು ಬರುತ್ತದೆ. ಅಭಿಪ್ರಾಯಗಳಲ್ಲಿ ಭಿನ್ನತೆ ಉಂಟಾದಂತಹ ಸಂದರ್ಭದಲ್ಲಿ ಪರಸ್ಪರ ಚರ್ಚೆ, ಸಹನೆ ಮತ್ತು ಒಮ್ಮತದ ಮೂಲಕ ಸಮಸ್ಯೆಗಳನ್ನು ಪರಿಹರಿಸಬಹುದು. ಸಂಘದ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಸಂಸ್ಥೆಯ ಹಿತಾಸಕ್ತಿಯನ್ನು ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.

ಇಂತಿ ತಮ್ಮ ಪ್ರೀತಿಯ
**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

## ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಮಂಡಳಿಯ ಚುನಾವಣೆ 2026–2029
## ದಿನಾಂಕ : 20.09.2026, ಬೆಳಿಗ್ಗೆ 9.00 ರಿಂದ ಸಂಜೆ 5.00 ಘಂಟೆಯವರೆಗೆ

### ಅಭ್ಯರ್ಥಿಗಳ ಅಂತಿಮ ಪಟ್ಟಿ

**ಅಧ್ಯಕ್ಷ ಸ್ಥಾನಕ್ಕೆ**

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | |
|---|---|---|
| 01 |  **ದೀಪಕ್ ಶೆಟ್ಟಿ** ಸದಸ್ಯತ್ವ ಸಂಖ್ಯೆ: 5615/ಸಿ.ಎಲ್ | ಕಾರ್ಯಕಾರಿ ಸಮಿತಿ ಸದಸ್ಯ – 2014–16<br>ಕಾರ್ಯಕಾರಿ ಸಮಿತಿ ಸದಸ್ಯ – 2016–18<br>ಖಜಾಂಚಿ – 2018–22 |
| 02 |  **ಕಾಂತಿ ಶೆಟ್ಟಿ** ಸದಸ್ಯತ್ವ ಸಂಖ್ಯೆ: 5741/ಎಲ್.ಎಂ. | ಕಾರ್ಯಕಾರಿ ಸಮಿತಿ ಸದಸ್ಯೆ – 2014–16<br>ಜೊತೆ ಕಾರ್ಯದರ್ಶಿ – 2016–18<br>ಮಹಿಳಾ ಉಪಾಧ್ಯಕ್ಷೆ – 2024–26 |
| 03 |  **ನಾಗರಾಜ ಶೆಟ್ಟಿ** ಸದಸ್ಯತ್ವ ಸಂಖ್ಯೆ: 11998/ಸಿ.ಎಲ್ | ಸದಸ್ಯ |

## ಪ್ರಥಮ ಉಪಾಧ್ಯಕ್ಷ ಸ್ಥಾನಕ್ಕೆ

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | |
|---|---|---|
| 01 | <br>**ಮಧುಕರ ಎಂ. ಶೆಟ್ಟಿ**<br>ಸದಸ್ಯತ್ವ ಸಂಖ್ಯೆ: 3920/ ಸಿ.ಎಲ್. | ಕಾರ್ಯಕಾರಿ ಸಮಿತಿ ಸದಸ್ಯ – 2006–08<br>ಕಾರ್ಯಕಾರಿ ಸಮಿತಿ ಸದಸ್ಯ – 2012–14<br>ಜೊತೆ ಕಾರ್ಯದರ್ಶಿ – 2010–12<br>ಗೌರವ ಕಾರ್ಯದರ್ಶಿ – 2018–22 |
| 02 | <br>**ಸುಧಾಕರ್ ಶೆಟ್ಟಿ ಎಸ್.**<br>ಸದಸ್ಯತ್ವ ಸಂಖ್ಯೆ : 2701/ ಎಲ್.ಎಂ. | ಕಾರ್ಯಕಾರಿ ಸಮಿತಿ ಸದಸ್ಯ –2022–2024 |

## ದ್ವಿತೀಯ ಉಪಾಧ್ಯಕ್ಷೆ (ಮಹಿಳೆ) ಸ್ಥಾನಕ್ಕೆ

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | |
|---|---|---|
| 01 | <br>**ಜಯಶ್ರೀ ಸಿ. ರೈ**<br>ಸದಸ್ಯತ್ವ ಸಂಖ್ಯೆ: 1761/ಸಿ.ಎಲ್. | ಕಾರ್ಯಕಾರಿ ಸಮಿತಿ ಸದಸ್ಯೆ – 2018–22<br>ಕಾರ್ಯಕಾರಿ ಸಮಿತಿ ಸದಸ್ಯೆ – 2022–24<br>ಜೊತೆ ಕಾರ್ಯದರ್ಶಿ – 2024–26 |
| 02 | <br>**ಸೌಮ್ಯಪ್ರಿಯ ಹೆಗ್ಡೆ**<br>ಸದಸ್ಯತ್ವ ಸಂಖ್ಯೆ: 2418 / ಸಿ.ಎಲ್ | ಕಾರ್ಯಕಾರಿ ಸಮಿತಿ ಸದಸ್ಯೆ – 2014–16<br>ಜೊತೆ ಕಾರ್ಯದರ್ಶಿ – 2018–22 |

## ಗೌರವ ಕಾರ್ಯದರ್ಶಿ ಸ್ಥಾನಕ್ಕೆ

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | |
|---|---|---|
| 01 | <br>**ಅಮರನಾಥ್ ಶೆಟ್ಟಿ**<br>ಸದಸ್ಯತ್ವ ಸಂಖ್ಯೆ : 5279/ಸಿ.ಎಲ್. | ಕಾರ್ಯಕಾರಿ ಸಮಿತಿ ಸದಸ್ಯ – 2014–16<br>ಕಾರ್ಯಕಾರಿ ಸಮಿತಿ ಸದಸ್ಯ – 2016–18<br>ಖಜಾಂಚಿ – 2022–24 |
| 02 | <br>**ಸಂದೀಪ್ ಶೆಟ್ಟಿ ಬಿ.**<br>ಸದಸ್ಯತ್ವ ಸಂಖ್ಯೆ: 3493/ಸಿ.ಎಲ್ | ಕಾರ್ಯಕಾರಿ ಸಮಿತಿ ಸದಸ್ಯ – 2022–24 |

## ಜಂಟಿ ಕಾರ್ಯದರ್ಶಿ ಸ್ಥಾನಕ್ಕೆ

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | |
|---|---|---|
| 01 | <br>**ಗೀತಾ ಶೆಟ್ಟಿ**<br>ಸದಸ್ಯತ್ವ ಸಂಖ್ಯೆ: 14489/ ಸಿ.ಎಲ್. | ಕಾರ್ಯಕಾರಿ ಸಮಿತಿ ಸದಸ್ಯೆ – 2024–26 |
| 02 | <br>**ಸುರೇಖಾ ಶೆಟ್ಟಿ**<br>ಸದಸ್ಯತ್ವ ಸಂಖ್ಯೆ: 10076/ಸಿ.ಎಲ್ | ಕಾರ್ಯಕಾರಿ ಸಮಿತಿ ಸದಸ್ಯೆ – 2018–2022 |

## ಖಜಾಂಚಿ ಸ್ಥಾನಕ್ಕೆ

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | |
|---|---|---|
| 01 | <br>**ರಮಿತ್ ಬಿ. ಶೆಟ್ಟಿ**<br>ಸದಸ್ಯತ್ವ ಸಂಖ್ಯೆ : 3802/ಸಿ.ಎಲ್. | ಕಾರ್ಯಕಾರಿ ಸಮಿತಿ ಸದಸ್ಯ – 2016–18<br>ಕಾರ್ಯಕಾರಿ ಸಮಿತಿ ಸದಸ್ಯ – 2018–22 |
| 02 | <br>**ಉಮೇಶ್ ಕುಮಾರ್ ಶೆಟ್ಟಿ**<br>ಸದಸ್ಯತ್ವ ಸಂಖ್ಯೆ: 11469/ ಸಿ.ಎಲ್. | ಕಾರ್ಯಕಾರಿ ಸಮಿತಿ ಸದಸ್ಯ – 2022–24<br>ಕಾರ್ಯಕಾರಿ ಸಮಿತಿ ಸದಸ್ಯ – 2024–26 |

## ಕಾರ್ಯಕಾರಿ ಸಮಿತಿ ಸ್ಥಾನಕ್ಕೆ

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | |
|---|---|---|
| 01 | <br>**ಅನಿತಾ ಪಿ. ಭಂಡಾರಿ**<br>ಸದಸ್ಯತ್ವ ಸಂಖ್ಯೆ: 1997/ ಸಿ.ಎಲ್. | ಸದಸ್ಯೆ |
| 02 | <br>**ಅರುಣ್ ಕುಮಾರ್ ಶೆಟ್ಟಿ ಹೆಚ್.**<br>ಸದಸ್ಯತ್ವ ಸಂಖ್ಯೆ: 4457/ ಸಿ.ಎಲ್. | ಸದಸ್ಯ |

## ಕಾರ್ಯಕಾರಿ ಸಮಿತಿ ಸ್ಥಾನಕ್ಕೆ

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | |
|---|---|---|
| 03 | <br>**ಚಂದ್ರಶೇಖರ ಶೆಟ್ಟಿ ಸಿ.ಎ.**<br>ಸದಸ್ಯತ್ವ ಸಂಖ್ಯೆ: 6545/ ಸಿ.ಎಲ್. | ಸದಸ್ಯ |
| 04 | <br>**ಹೀರಾ ಅನೂಪ್ ಹೆಗ್ಡೆ**<br>ಸದಸ್ಯತ್ವ ಸಂಖ್ಯೆ : 11813/ಸಿ.ಎಲ್. | ಸದಸ್ಯೆ |
| 05 | <br>**ಕೀರ್ತನ್ ಶೆಟ್ಟಿ**<br>ಸದಸ್ಯತ್ವ ಸಂಖ್ಯೆ : 8487/ ಎಲ್.ಎಂ | ಕಾರ್ಯಕಾರಿ ಸಮಿತಿ ಸದಸ್ಯ – 2022–24 |
| 06 | <br>**ಕಿರಣ್ ಕುಮಾರ್ ಶೆಟ್ಟಿ ಎಂ.**<br>ಸದಸ್ಯತ್ವ ಸಂಖ್ಯೆ: 3158/ಸಿ.ಎಲ್. | ಕಾರ್ಯಕಾರಿ ಸಮಿತಿ ಸದಸ್ಯ – 2022–24 |

## ಕಾರ್ಯಕಾರಿ ಸಮಿತಿ ಸ್ಥಾನಕ್ಕೆ

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | |
|---|---|---|
| 07 | <br>**ಕಿಶೋರ್ ಶೆಟ್ಟಿ ಸಿ.ಎ.**<br>ಸದಸ್ಯತ್ವ ಸಂಖ್ಯೆ: 13355/ ಸಿ.ಎಲ್ | ಕಾರ್ಯಕಾರಿ ಸಮಿತಿ ಸದಸ್ಯ – 2022–24 |
| 08 | <br>**ಮಾಲತಿ ಜೆ. ಶೆಟ್ಟಿ**<br>ಸದಸ್ಯತ್ವ ಸಂಖ್ಯೆ : 4016/ಸಿ.ಎಲ್. | ಕಾರ್ಯಕಾರಿ ಸಮಿತಿ ಸದಸ್ಯೆ – 2022–24 |
| 09 | <br>**ನಿತ್ಯರಂಜನ್ ಶೆಟ್ಟಿ**<br>ಸದಸ್ಯತ್ವ ಸಂಖ್ಯೆ: 11284/ಸಿ.ಎಲ್. | ಸದಸ್ಯ |
| 10 | <br>**ಪ್ರಸಾದ್ ಕುಮಾರ್ ಶೆಟ್ಟಿ**<br>ಸದಸ್ಯತ್ವ ಸಂಖ್ಯೆ: 4071/ಸಿ.ಎಲ್. | ಸದಸ್ಯ |

## ಕಾರ್ಯಕಾರಿ ಸಮಿತಿ ಸ್ಥಾನಕ್ಕೆ

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | |
|---|---|---|
| 11 |  **ಪ್ರಶಾಂತ್ ಶೆಟ್ಟಿ ಎಸ್.** ಸದಸ್ಯತ್ವ ಸಂಖ್ಯೆ: 3916/ಸಿ.ಎಲ್.. | ಕಾರ್ಯಕಾರಿ ಸಮಿತಿ ಸದಸ್ಯ – 2024–26 |
| 12 |  **ಪ್ರತಾಪ್ ಶೆಟ್ಟಿ** ಸದಸ್ಯತ್ವ ಸಂಖ್ಯೆ : 11911/ಸಿ.ಎಲ್. | ಕಾರ್ಯಕಾರಿ ಸಮಿತಿ ಸದಸ್ಯ – 2024–26 |
| 13 |  **ರಾಮ್‌ದಾಸ್ ಶೆಟ್ಟಿ ಕೆ.ಎಸ್.** ಸದಸ್ಯತ್ವ ಸಂಖ್ಯೆ : 10782/ಸಿ.ಎಲ್. | ಸದಸ್ಯ |
| 14 |  **ಶಕುಂತಲ ಶೆಟ್ಟಿ** ಸದಸ್ಯತ್ವ ಸಂಖ್ಯೆ : 9869/ಸಿ.ಎಲ್ | ಕಾರ್ಯಕಾರಿ ಸಮಿತಿ ಸದಸ್ಯೆ – 2024–26 |

## ಕಾರ್ಯಕಾರಿ ಸಮಿತಿ ಸ್ಥಾನಕ್ಕೆ

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | |
|---|---|---|
| 15 |  **ಸುರೇಂದ್ರ ಶೆಟ್ಟಿ ಹೆಚ್.** ಸದಸ್ಯತ್ವ ಸಂಖ್ಯೆ : 4308/ಸಿ.ಎಲ್. | ಕಾರ್ಯಕಾರಿ ಸಮಿತಿ ಸದಸ್ಯ – 2024–26 |
| 16 |  **ಉಮೇಶ್ ಪೂಂಜ ಡಿ.** ಸದಸ್ಯತ್ವ ಸಂಖ್ಯೆ : 3469 / ಸಿ.ಎಲ್. | ಕಾರ್ಯಕಾರಿ ಸಮಿತಿ ಸದಸ್ಯ – 2024–26 |



## Congratulations

**ಶ್ರೀ ಸುನಿಲ್ ಭಂಡಾರಿ**

ಕರ್ನಾಟಕ ಲೆಕ್ಕಪರಿಶೋಧಕರ ಸಂಘದ 54ನೇ ಅಧ್ಯಕ್ಷರಾಗಿ, ನಮ್ಮ ಸಮಾಜದ ಹಾಗೂ ಬೆಂಗಳೂರು ಬಂಟರ ಸಂಘದ ಗೌರವಾನ್ವಿತ ಸದಸ್ಯರಾದ ಶ್ರೀ ಸುನಿಲ್ ಭಂಡಾರಿಯವರು ಆಯ್ಕೆಯಾಗಿರುವುದು ನಮ್ಮೆಲ್ಲರಿಗೂ ಅತ್ಯಂತ ಹೆಮ್ಮೆಯ ಹಾಗೂ ಸಂತಸದ ಸಂಗತಿಯಾಗಿದೆ. ದೇಶದ ಅತ್ಯಂತ ಹಳೆಯ ಮತ್ತು ಪ್ರತಿಷ್ಠಿತ ಲೆಕ್ಕಪರಿಶೋಧಕರ ಸಂಘಗಳಲ್ಲಿ ಒಂದಾಗಿರುವ ಕರ್ನಾಟಕ ಲೆಕ್ಕಪರಿಶೋಧಕರ ಸಂಘದ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿರುವುದು ಅವರ ವೃತ್ತಿಪರ ಬದ್ಧತೆ, ನಾಯಕತ್ವದ ಗುಣ ಹಾಗೂ ಸಮಾಜಮುಖಿ ಸೇವೆಗೆ ಸಂದ ಗೌರವವಾಗಿದೆ.

ಈ ಹೆಮ್ಮೆಯ ಸಂದರ್ಭದಲ್ಲಿ ಬೆಂಗಳೂರು ಬಂಟರ ಸಂಘದ ಪರವಾಗಿ ಶ್ರೀ ಸುನಿಲ್ ಭಂಡಾರಿಯವರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಇವರ ಅಧ್ಯಕ್ಷೀಯ ಅವಧಿಯಲ್ಲಿ ಸಂಘವು ಮತ್ತಷ್ಟು ಎತ್ತರಕ್ಕೆ ಬೆಳೆದು, ಲೆಕ್ಕಪರಿಶೋಧನಾ ವೃತ್ತಿಗೆ ಹೊಸ ದಿಕ್ಕು ಮತ್ತು ಶಕ್ತಿ ನೀಡಲಿ ಎಂದು ಹಾರೈಸುತ್ತೇವೆ. ಅವರ ಮುಂದಿನ ಎಲ್ಲಾ ಕಾರ್ಯಗಳು ಯಶಸ್ವಿಯಾಗಲಿ ಹಾಗೂ ನಮ್ಮ ಬಂಟ ಸಮುದಾಯದ ಕೀರ್ತಿಯನ್ನು ಇನ್ನಷ್ಟು ಬೆಳಗಿಸುವಂತಾಗಲಿ ಎಂದು ಹೃದಯಪೂರ್ವಕವಾಗಿ ಶುಭ ಕೋರುತ್ತೇವೆ.




# ಬಂಟರ ಸಂಘ, ಬೆಂಗಳೂರು

## ಚುನಾವಣೆ 2026-29

ELECTION DATE: 20TH SEPT 2026 | 9AM TO 5PM

ಕ್ರಮ ಸಂಖ್ಯೆ
**01**

# ಡಾ. ದೀಪಕ್ ಶೆಟ್ಟಿ

**ಮೆಕ್ಯಾನಿಕಲ್ ಇಂಜಿನಿಯರ್**
**ಎಂಬಿಎ | ಡಾಕ್ಟರೇಟ್ ಪದವಿ**

ತಂದೆ: ಶ್ರೀ ಹಿಮಕರ ಶೆಟ್ಟಿ ಶಿರೂರು (ನಿವೃತ್ತ ಶಿಕ್ಷಕರು)
ತಾಯಿ: ಶ್ರೀಮತಿ ವನಜಾ ಶೆಟ್ಟಿ ಬಾರ್ಕೂರು (ನಿವೃತ್ತ ಶಿಕ್ಷಕಿ)
ಮಾವ: ಶ್ರೀ ಚಂದ್ರಶೇಖರ ಶೆಟ್ಟಿ ಉದ್ದಾಲಗುಡ್ಡೆ (ಉದ್ಯಮಿ)
ಅತ್ತೆ: ಶ್ರೀಮತಿ ಸುಜಯಾ ಶೆಟ್ಟಿ ಉಪ್ಲಾಡಿ
ಪತ್ನಿ: ಶ್ರೀಮತಿ ಸುಮಾ ಡಿ. ಶೆಟ್ಟಿ ಉಪ್ಲಾಡಿ
ಮಕ್ಕಳು: ಇಬ್ಬರು ಪುತ್ರರು



**ಬಹುರಾಷ್ಟ್ರೀಯ ಕಂಪನಿಯಲ್ಲಿ ಜನರಲ್ ಮ್ಯಾನೇಜರ್ ಹುದ್ದೆ.**
**ಬಂಟರ ಸಂಘದ ಕೋಶಾಧಿಕಾರಿಯಾಗಿ ಪಾರದರ್ಶಕ ಆಡಳಿತ.**
**ಯುವ ವಿಭಾಗದ ಚೇರ್‌ಪರ್ಸನ್ ಆಗಿ & ಸಂಚಾಲಕರಾಗಿ ಯಶಸ್ವಿ ನಾಯಕತ್ವ.**

| | | | |
|---|---|---|---|
| ಕಾರ್ಯಾಧ್ಯಕ್ಷರು ಯಕ್ಷಧ್ರುವ ಪಟ್ಲ ಫೌಂಡೇಶನ್ | ಅಧ್ಯಕ್ಷರು ಕುಂದಾಪುರ ಕನ್ನಡ ಪ್ರತಿಷ್ಠಾನ, ಬೆಂಗಳೂರು | ಕಯ್ಯಾರ ಕಿಂಞಣ್ಣ ರೈ ಜನ್ಮಶತಮಾನೋತ್ಸವ ಕಾರ್ಯಕ್ರಮದ ಸಂಚಾಲಕತ್ವ | ಡಿಕೆ ಚೌಟರ ಅಮೃತ ಮಹೋತ್ಸವ ಕಾರ್ಯಕ್ರಮದ ಸಂಚಾಲಕತ್ವ |
| ದಿವಂಗತ ಸುಶೀಲ ಶೆಟ್ಟಿ ಸಂಸ್ಮರಣಾ ಕಾರ್ಯಕ್ರಮದ ಆಯೋಜನೆ | ದಿವಂಗತ ಶ್ರೀನಿವಾಸ ಆಳ್ವ ಸಂಸ್ಮರಣಾ ಕಾರ್ಯಕ್ರಮದ ಆಯೋಜನೆ | ಸಮಾಗಮ - ಬೆಂದೂರು ಟು ಬದಿಯಡ್ಕ ಕಾರ್ಯಕ್ರಮದ ಪರಿಕಲ್ಪನೆ ಮತ್ತು ಆಯೋಜನೆ | ಕಂಬಳ ಉಳಿಸಿ ಹೋರಾಟದ ಪ್ರಮುಖ ರೂವಾರಿ |
| | ಬಂಟರ ಸಂಘದಲ್ಲಿ ತುಳು ಲಿಪಿ ಕಾರ್ಯಾಗಾರದ ಪ್ರಧಾನ ಆಯೋಜನೆ | ಬಂಟರ ಸಂಘದಲ್ಲಿ ಕನ್ನಡ-ತುಳು ಪುಸ್ತಕ ಪ್ರದರ್ಶನ ರೂವಾರಿ | |

**ದೂರದೃಷ್ಟಿ ನಾಯಕತ್ವ - ಸಮರ್ಥ ಸಂಘಟಕ - ಹಿರಿಯ - ಕಿರಿಯರನ್ನು ಒಗ್ಗೂಡಿಸುವ ಆಡಳಿತಗಾರ**

**ಸಂಘ ಸಮುದಾಯದ ಭವಿಷ್ಯಕ್ಕಾಗಿ ನಿಮ್ಮ ಅಮೂಲ್ಯ ಮತ**

ADVT.


TEAM
Dr. DEEPAK SHETTY
ಇದು ನಿಮ್ಮ ಟೀಮ್!
ಬಂಟರ ಸಂಘ, ಬೆಂಗಳೂರು
ಚುನಾವಣೆ 2026-'29
ಡಾ. ದೀಪಕ್ ಶೆಟ್ಟಿ ತಂಡದಿಂದ ಉಪಾಧ್ಯಕ್ಷ ಸ್ಥಾನಕ್ಕೆ ಸಮರ್ಥ ಅಭ್ಯರ್ಥಿ
ಶ್ರೀ ಮಧುಕರ ಎಂ. ಶೆಟ್ಟಿ
01
ಕ್ರಮಸಂಖ್ಯೆ
ಯಶಸ್ವಿ ಹೋಟೆಲ್ ಉದ್ಯಮಿ • ಸಮಾಜಸೇವಕ
ಅಧ್ಯಕ್ಷರು :ಕರ್ನಾಟಕ ರಾಜ್ಯ ಹೋಟೆಲುಗಳ ಸಂಘ.
ನಿರ್ದೇಶಕರು:ಸ್ವಾತಿ ಗ್ರೂಪ್ ಆಫ್ ಹೊಟೇಲ್ಸ್
ತಂದೆ: ಶ್ರೀ ಮಹಾಬಲ ಕೋಟ
ತಾಯಿ: ಶ್ರೀಮತಿ ಕೃಷ್ಣಿ ಬ್ರಹ್ಮಾವರ
ಮಾವ: ಶ್ರೀ ಕೋಟ ಲಕ್ಷ್ಮಣ ಶೆಟ್ಟಿ
ಅತ್ತೆ: ಸುಮತಿ ಶೆಟ್ಟಿ ಪರ್ಕಳ
ಕರಾವಳಿ ಮೂಲದ ಯಶಸ್ವಿ ಉದ್ಯಮಿಯಾಗಿ, ಗುಣಮಟ್ಟದ ಆಹಾರೋದ್ಯಮದ ಮೂಲಕ ಜನರ ವಿಶ್ವಾಸ ಗಳಿಸಿರುವ ಮಧುಕರ ಎಂ. ಶೆಟ್ಟಿಯವರು, ಸಾವಿರಾರು ಮಂದಿಗೆ ಉದ್ಯೋಗಾವಕಾಶ ಕಲ್ಪಿಸಿ ಸಮಾಜಮುಖಿ ಉದ್ಯಮದ ಮಾದರಿಯಾಗಿದ್ದಾರೆ.
ಸಂಘದ ಸೇವಾ ಪಯಣ
* ಮೂರು ದಶಕಗಳಿಗಿಂತ ಹೆಚ್ಚು ಕಾಲ ಬಂಟರ ಸಂಘದ ವಿವಿಧ ಜವಾಬ್ದಾರಿಗಳಲ್ಲಿ ನಿಸ್ವಾರ್ಥ ಸೇವೆ.
* ಕಾರ್ಯಕಾರಿ ಸಮಿತಿ ಸದಸ್ಯರಾಗಿ ಸಮರ್ಥ ಕಾರ್ಯನಿರ್ವಹಣೆ.
* ಜೊತೆ ಕಾರ್ಯದರ್ಶಿಯಾಗಿ ಸಂಘದ ಬೆಳವಣಿಗೆಗೆ ಮಹತ್ವದ ಕೊಡುಗೆ.
* ಗೌರವ ಕಾರ್ಯದರ್ಶಿಯಾಗಿ ಯಶಸ್ವಿ ಹಾಗೂ ಪಾರದರ್ಶಕ ಆಡಳಿತ.
* ನೆಲ, ಜಲ, ನಾಡು-ನುಡಿ ಮತ್ತು ಸಮಾಜಮುಖಿ ಹೋರಾಟಗಳಲ್ಲಿ ಸಕ್ರಿಯ ಪಾಲ್ಗೊಳ್ಳುವಿಕೆ.
* ಸರಳತೆ, ಸ್ನೇಹಪರತೆ ಮತ್ತು ಎಲ್ಲರನ್ನು ಜೊತೆಯಾಗಿ ಕೊಂಡೊಯ್ಯುವ ನಾಯಕತ್ವ.
ಅರ್ಹ ಆಯ್ಕೆ ಮಧುಕರ ಎಂ. ಶೆಟ್ಟಿ
□ ಯಶಸ್ವಿ ಉದ್ಯಮಿ
□ ಮೂರು ದಶಕಗಳ ಸಂಘಟನಾ ಅನುಭವ
□ ಸಮಾಜಸೇವೆ ಮತ್ತು ಅಭಿವೃದ್ಧಿಗೆ ಬದ್ಧತೆ
□ ಪ್ರಾಮಾಣಿಕ ಹಾಗೂ ಜನಪರ ನಾಯಕತ್ವ
□ ಬಲಿಷ್ಠ ಬಂಟರ ಸಂಘದ ಭವಿಷ್ಯಕ್ಕಾಗಿ ಸಮರ್ಥ ಆಯ್ಕೆ
ಸೇವೆ • ಅನುಭವ • ನಾಯಕತ್ವ
ನಿಮ್ಮ ಅಮೂಲ್ಯ ಮತ ಮತ್ತು ಬೆಂಬಲವನ್ನು ಮಧುಕರ ಎಂ. ಶೆಟ್ಟಿಯವರಿಗೆ ನೀಡಿ. ಹೆಚ್ಚಿನ ಅಂತರದಿಂದ ಗೆಲ್ಲಿಸಬೇಕಾಗಿ ವಿನಂತಿ
ಟೀಮ್ ಡಾ. ದೀಪಕ್ ಶೆಟ್ಟಿ
ಇದು ನಿಮ್ಮ ಟೀಮ್
ಸಮಾಜದ ಅಭ್ಯುದಯಕ್ಕೆ ಸಮರ್ಥ ಆಯ್ಕೆ.
ಮತದಾನ ದಿನಾಂಕ
20 SEP 2026

ADVT.


NAGARAJA SHETTY
TEAM
ಬೆಂಗಳೂರು ಬಂಟರ ಸಂಘ
ಚುನಾವಣೆ 2026-2029
ಸೆಪ್ಟೆಂಬರ್ 20, 2026
ಉಪಾಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿ
ಲಯನ್ ಎಸ್. ಸುಧಾಕರ್ ಶೆಟ್ಟಿ
"ಸೇವೆ ನನ್ನ ಸಂಸ್ಕಾರ • ವಿಶ್ವಾಸ ನನ್ನ ಶಕ್ತಿ • ಬಂಟ ಸಮಾಜದ ಅಭಿವೃದ್ಧಿ ನನ್ನ ಸಂಕಲ್ಪ"
SL NO.2
ಆತ್ಮೀಯ ಬಂಟ ಬಂಧುಗಳೇ,
ನಾನು ಕಳೆದ ಹಲವು ವರ್ಷಗಳಿಂದ ಬೆಂಗಳೂರು ಬಂಟರ ಸಂಘದ ವಿವಿಧ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ಸಮಾಜದ ಸೇವೆ ಹಾಗೂ ಸಂಘದ ಬೆಳವಣಿಗೆಗೆ ನನ್ನ ಕೈಲಾದ ಕೊಡುಗೆಯನ್ನು ನೀಡುತ್ತಾ ಬಂದಿದ್ದೇನೆ.
42 ವರ್ಷಗಳ ಕಾಲ ವಿಜಯ ಬ್ಯಾಂಕ್‌ನಲ್ಲಿ ಪ್ರಾಮಾಣಿಕ ಸೇವೆ ಸಲ್ಲಿಸಿ ಗೌರವಯುತವಾಗಿ ನಿವೃತ್ತಿ ಹೊಂದಿರುವ ನಾನು, ನನ್ನ ಅನುಭವ, ನಾಯಕತ್ವ ಹಾಗೂ ಸಮಾಜಸೇವೆಯ ಮನೋಭಾವವನ್ನು ಬಂಟರ ಸಂಘದ ಮತ್ತಷ್ಟು ಅಭಿವೃದ್ಧಿಗೆ ಸಮರ್ಪಿಸಲು ಉಪಾಧ್ಯಕ್ಷ ಸ್ಥಾನಕ್ಕೆ ನಿಮ್ಮ ಆಶೀರ್ವಾದವನ್ನು ಕೋರುತ್ತಿದ್ದೇನೆ.
ನನ್ನ ಸೇವಾ ಪಯಣ
ಕರ್ನಾಟಕ ಪ್ರದೇಶ ಬ್ಯಾಂಕ್ ವರ್ಕರ್ಸ್ ಆರ್ಗನೈಜೇಷನ್ – ಮಾಜಿ ಅಧ್ಯಕ್ಷರು
ವಿಜಯ ಬ್ಯಾಂಕ್ ನೌಕರರ ಸಂಘ – ಮಾಜಿ ಆಧೀನ ಕಾರ್ಯದರ್ಶಿ
ಭಾರತದ ಬ್ಯಾಂಕ್ ವರ್ಕರ್ಸ್ ಆರ್ಗನೈಜೇಷನ್ – ಮಾಜಿ ಕಾರ್ಯದರ್ಶಿ
ಅಂತಾರಾಷ್ಟ್ರೀಯ ಲಯನ್ಸ್ ಸಂಸ್ಥೆ, ಜಿಲ್ಲೆ 317A – ಮಾಜಿ ವಲಯ ಅಧ್ಯಕ್ಷರು
ಬೆಂಗಳೂರು ಬಂಟರ ಸಂಘ – ಮಾಜಿ ಕನ್ವೀನರ್, ವಧು–ವರಾನ್ವೇಷಣ ವಿಭಾಗ
ಬೆಂಗಳೂರು ಬಂಟರ ಸಂಘ – ಎಕ್ಸಿಕ್ಯೂಟಿವ್ ಕಮಿಟಿ ಸದಸ್ಯರು (2022–2024)
ಮಂಗಳೂರು ವಿಜಯ ಮಂಗಳ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ – ನಿರ್ದೇಶಕರು
ಕನಸು ಫೌಂಡೇಶನ್ ಟ್ರಸ್ಟ್ – ನಿರ್ದೇಶಕರು
ತುಳು ಕೂಟ, ಬೆಂಗಳೂರು – ಕಾರ್ಯಕಾರಿ ಸಮಿತಿ ಸದಸ್ಯರು
ಕಂಬಳ ಸಮಿತಿ – ಕಾರ್ಯದರ್ಶಿಗಳಲ್ಲಿ ಒಬ್ಬರಾಗಿ ಸೇವೆ
ಬಂಟರ ವಿವಾಹ ವೇದಿಕೆ (WhatsApp Group) ಸ್ಥಾಪಿಸಿ, ವಿವಾಹ ಆಕಾಂಕ್ಷಿಗಳಿಗೆ ಸಂಪರ್ಕ ಕಲ್ಪಿಸುವ ಮೂಲಕ ಸುಮಾರು 22 ಯಶಸ್ವಿ ವಿವಾಹಗಳು ನೆರವೇರಲು ಸಹಕಾರ.
"ಬಂಟರು ನಾವೆಲ್ಲರೂ ನೆಂಟರು"
ಒಗ್ಗಟ್ಟಿನಿಂದ ಬೆಳೆಯೋಣ • ಸೇವೆಯಿಂದ ಗೆಲ್ಲೋಣ
ನನ್ನ ಪ್ರೇರಣಾ ಪುರುಷರಿಗೆ ಪ್ರಣಾಮ
"ಬಂಟರ ಸಮಾಜದ ಮೇರು ಪರ್ವತ, ಕಡಲ ತೀರದ ಪಾರ್ಥ, ನನ್ನ ಬದುಕಿನ ದಾರಿದೀಪರಾದ ಶ್ರೀಯುತ ಸುಂದರಾಮ್ ಶೆಟ್ಟಿಯವರಿಗೆ ನನ್ನ ಪ್ರಥಮ ನಮನ."
ಕುಟುಂಬ ಪರಿಚಯ
ನಾನು ಕುಂದಾಪುರದ ನೂಜಿ ಮನೆ ಜಗನ್ನಾಥ ಶೆಟ್ಟಿಯವರ ಪುತ್ರಿ ಶ್ರೀಮತಿ ಶಕುಂತಲಾ ಶೆಟ್ಟಿ ಅವರನ್ನು ವಿವಾಹವಾಗಿದ್ದು, ಕುಟುಂಬದ ಬೆಂಬಲದೊಂದಿಗೆ ಸಮಾಜ ಸೇವೆಯನ್ನು ನನ್ನ ಜೀವನದ ಧ್ಯೇಯವನ್ನಾಗಿ ಮಾಡಿಕೊಂಡಿದ್ದೇನೆ.
ನನ್ನ ಸಂಕಲ್ಪ
ಸಂಘದ ಪ್ರತಿಯೊಬ್ಬ ಸದಸ್ಯರ ವಿಶ್ವಾಸಕ್ಕೆ ಪಾತ್ರನಾಗಿ, ಯುವಜನತೆಗೆ ಹೆಚ್ಚಿನ ಅವಕಾಶಗಳು, ಹಿರಿಯರಿಗೆ ಗೌರವ, ಮಹಿಳೆಯರಿಗೆ ಸಬಲೀಕರಣ, ಮತ್ತು ಬಂಟ ಸಮಾಜದ ಸರ್ವಾಂಗೀಣ ಅಭಿವೃದ್ಧಿಗಾಗಿ ನಿರಂತರವಾಗಿ ಶ್ರಮಿಸುವುದು ನನ್ನ ಬದ್ಧತೆ.
ನಿಮ್ಮ ಅಮೂಲ್ಯ ಮತ – ನನ್ನ ಜವಾಬ್ದಾರಿ
ಆತ್ಮೀಯ ಬಂಧುಗಳೇ,
ಆಗಸ್ಟ್ 16ರಂದು ನಡೆಯುವ ಬೆಂಗಳೂರು ಬಂಟರ ಸಂಘದ ಚುನಾವಣೆಯಲ್ಲಿ, ತಾವು, ತಮ್ಮ ಕುಟುಂಬದವರು ಹಾಗೂ ತಮ್ಮ ಸ್ನೇಹಿತರು ತಮ್ಮ ಅಮೂಲ್ಯ, ಪ್ರೀತಿಯ ಮತ್ತು ಅಭಿಮಾನದ ಮತವನ್ನು ನೀಡಿ, ನನ್ನನ್ನು ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಿ ಆಶೀರ್ವದಿಸಬೇಕೆಂದು ಹೃತ್ಪೂರ್ವಕವಾಗಿ ವಿನಂತಿಸುತ್ತೇನೆ.
"ನಿಮ್ಮ ವಿಶ್ವಾಸವೇ ನನ್ನ ಶಕ್ತಿ... ನಿಮ್ಮ ಮತವೇ ಬಂಟ ಸಮಾಜದ ಉಜ್ವಲ ಭವಿಷ್ಯದತ್ತ ಒಂದು ಹೆಜ್ಜೆ."
ತಮ್ಮ ಪ್ರೀತಿಯ
ಲಯನ್ ಎಸ್. ಸುಧಾಕರ್ ಶೆಟ್ಟಿ
ಶೀನ ಶೆಟ್ಟಿ ಪರಾರಿ ನಿಲಯ ಗುರುಪುರ,
ಮಂಗಳೂರು

ADVT.

# ಬಂಟರ ಸಂಘದ ಚುನಾವಣೆ 2026-2029

## ಮನವಿ

*Please Elect*

**JAYASHRI C. RAI**

**ಜಯಶ್ರೀ ಸಿ. ರೈ**

ಸದಸ್ಯತ್ವ ಸಂಖ್ಯೆ : CL001761

FOR THE POST OF

**2nd VICE PRESIDENT**



S.L. No. 01
2nd VICE PRESIDENT CANDIDATE

**ಆತ್ಮೀಯ ಸಮಾಜ ಬಾಂಧವರೇ,**

ಬಂಟರ ಸಂಘ ಬೆಂಗಳೂರಿನ ಎಲ್ಲಾ ಸದಸ್ಯರಿಗೆ ನನ್ನ ನಮನಗಳು.

ಪ್ರತಿಷ್ಠಿತ ಬೆಂಗಳೂರು ಬಂಟರ ಸಂಘದ ನೂತನ ಆಡಳಿತ ಮಂಡಳಿಗೆ 2026-2029ನೇ ಸಾಲಿಗಾಗಿ ತಾ॥ 20.9.2026 ರಂದು ಜರಗುವ ಮಹತ್ವದ ಚುನಾವಣೆಯಲ್ಲಿ **"ಮಹಿಳಾ ಉಪಾಧ್ಯಕ್ಷೆ ಸ್ಥಾನ"**ಕ್ಕೆ ಹಿರಿಯ ಹಿತೈಷಿಗಳು, ಸ್ನೇಹಿತರು ಹಾಗೂ ಸಮಾಜ ಬಾಂಧವರ ಸೂಚನೆಯಂತೆ ಬಂಟರ ಸಮುದಾಯದ ಸೇವಾಕಾಂಕ್ಷಿಯಾಗಿ ಸ್ಪರ್ಧಿಸಲು ಇಚ್ಛಿಸಿರುತ್ತೇನೆ.

**ಕುಟುಂಬ ಪರಿಚಯ :**

ತಂದೆ : ದಿ॥ ಪಲ್ಲಮಜಲು ಗುತ್ತು ಪದ್ಮನಾಭ ಶೆಟ್ಟಿ

ತಾಯಿ : ಕಲ್ಲಾಜೆ ಗುತ್ತು ದಿ॥ ಚಂದ್ರಾವತಿ ಶೆಟ್ಟಿ, ಪುತ್ತೂರು

ಪತಿ : ದರ್ಬೆ ಚಂದ್ರಹಾಸ ರೈ (ಮಾಜಿ ಅಧ್ಯಕ್ಷರು ಬಂಟರ ಸಂಘ ಬೆಂಗಳೂರು - 2016-18)

ಮಗ : ಡಾ. ಗುರುಪ್ರಸಾದ್ ರೈ MS MCH ಹೃದಯ ತಜ್ಞರು ವೈದ್ಯರಾಗಿ KMC ಮಣಿಪಾಲ, ಪ್ರಚಲಿತ ಆದರ್ಶ ಹಾಸ್ಪಿಟಲ್, ಉಡುಪಿ)

ಸೊಸೆ : ಮಾನಂಬಳ್ಳಿ ದಿವ್ಯಾ ರೈ, ಕುಂದಾಪುರ

ಮೊಮ್ಮಕ್ಕಳು : ವಿಯಾನ್ ರೈ, ವೃದ್ಧಿ ರೈ, ಮಣಿಪಾಲ

1995 ರಲ್ಲಿ ಬೆಂಗಳೂರಿನಲ್ಲಿ ಆಯೋಜಿಸಿದ್ದ ವಿಶ್ವ ಬಂಟರ ಸಮ್ಮೇಳನ, ಪುನಃ ಮಂಗಳೂರಿನಲ್ಲಿ ನಡೆದ ವಿಶ್ವ ಬಂಟರ ಸಮ್ಮೇಳನ, ಸಂಘದ **ಸುವರ್ಣ ಸಂಭ್ರಮ** ಮತ್ತು ಮಹಿಳಾ ವಿಭಾಗದ **ರಜತ ಸಂಭ್ರಮ, ಮಿಲೇನಿಯಂ ಸ್ತ್ರೀ 2000** ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗಿ.

ನಿಮಗೆಲ್ಲಾ ತಿಳಿದಿರುವಂತೆ ನಾನು ಕಳೆದ 40 ವರ್ಷಗಳಿಂದ ಸಂಘದ ಜೊತೆ ನಿಕಟ ಸಂಪರ್ಕವನ್ನಿರಿಸಿಕೊಂಡು ಸಂಘದ ಮಹಿಳಾ ವಿಭಾಗ, ಕ್ರೀಡಾ ಚಟುವಟಿಕೆ, ಸಾಂಸ್ಕೃತಿಕ ಚಟುವಟಿಕೆ, ರಂಗತರಭೇತಿ, ಯಕ್ಷಗಾನ ವಿಭಾಗದಲ್ಲಿ ಸಕ್ರಿಯವಾಗಿ ನಿರಂತರ ಪಾಲ್ಗೊಳುವಿಕೆ ಹಾಗೂ ಬಹುಮುಖ ಕಾರ್ಯಕ್ರಮಗಳಲ್ಲಿ ನನ್ನನ್ನು ತೊಡಗಿಸಿ ಕೊಂಡಿರುತ್ತೇನೆ.

- **2010-12 – ಸಾಂಸ್ಕೃತಿಕ ಸಮಿತಿ, ಸಂಚಾಲಕರು**
- **2012-14 – ಮಹಿಳಾ ವಿಭಾಗ, ಸಂಚಾಲಕರು**
- **2018-22– ಕಾರ್ಯಕಾರಿಸಮಿತಿ ಸದಸ್ಯೆ, ಚೇರ್‌ಪರ್ಸನ್ ಮಹಿಳಾವಿಭಾಗ**
- **2022-24– ಕಾರ್ಯಕಾರಿಸಮಿತಿ ಸದಸ್ಯೆ, ಚೇರ್‌ಪರ್ಸನ್ ಸಾಂಸ್ಕೃತಿಕಸಮಿತಿ**
- **2024-26 – ಜಂಟಿ ಕಾರ್ಯದರ್ಶಿ**

ಸಹೃದಯಿ ಬಂಧುಗಳು ನಮ್ಮ ತಂಡವನ್ನು ಬೆಂಬಲಿಸಿ, ತಮ್ಮ ಅಮೂಲ್ಯವಾದ ಮತವನ್ನು ನೀಡಿ ನನ್ನನ್ನು ಬಹುಮತದಿಂದ ಆಯ್ಕೆ ಮಾಡಬೇಕಾಗಿ ಅತ್ಯಂತ ನಮ್ರತೆಯಿಂದ ವಿನಂತಿಸುತ್ತೇನೆ.

**ಸಮುದಾಯದ ಅಭಿವೃದ್ಧಿಗಾಗಿ ಸಮಗ್ರ ತಂಡದ ಆಯ್ಕೆ**



NAGARAJA SHETTY TEAM

ತಮ್ಮ ವಿಶ್ವಾಸಿ

**ಶ್ರೀಮತಿ. ಜಯಶ್ರೀ ಚಂದ್ರಹಾಸ್ ರೈ**

'ಮಹಿಳಾ ಉಪಾಧ್ಯಕ್ಷೆ ಸ್ಥಾನದ ಅಭ್ಯರ್ಥಿ'

Ph. : 9945999255

ADVT.




# ಬಂಟರ ಸಂಘ, ಬೆಂಗಳೂರು

## ಚುನಾವಣೆ 2026-'29

ಮಹಿಳಾ ಉಪಾಧ್ಯಕ್ಷೆ ಸ್ಥಾನಕ್ಕೆ ಅರ್ಹ ಅಭ್ಯರ್ಥಿ

# ಸೌಮ್ಯಪ್ರಿಯ ಹೆಗ್ಡೆ

W/o ಶ್ರೀ ಕಿಶೋರ್ ಹೆಗ್ಡೆ ಗಿಳಿಯಾರು, ಕಾನೂನು ಪದವಿಧರೆ
ಸಂಪರ್ಕ: 9611122127

**02** SL.NO.

**ಸೌಮ್ಯಪ್ರಿಯ ಹೆಗ್ಡೆ**
SoumyaPriya Hegde



VICE PRESIDENT

**ಮತದಾನ**
**20 SEP 2026**

**ಶ್ರೀಮತಿ ಸೌಮ್ಯಪ್ರಿಯ ಹೆಗ್ಡೆ ಅವರು ಸಂಘದಲ್ಲಿ ಸುಮಾರು ಮೂರು ದಶಕಗಳಿಂದ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ, ಸಂಘದ ಬೆಳವಣಿಗೆಗೆ ಮಹತ್ವದ ಕೊಡುಗೆ ನೀಡಿದ್ದಾರೆ.**

ಕಾನೂನು ಪದವೀಧರೆಯಾಗಿರುವ ಸೌಮ್ಯಪ್ರಿಯ ಹೆಗ್ಡೆ ಅವರು ಪ್ರತಿಷ್ಠಿತ ನ್ಯಾಯವಾದಿ ಗಿಳಿಯಾರು ಕುಶಲ ಹೆಗ್ಡೆ ಅವರ ಸೊಸೆಯಾಗಿದ್ದು, ಅವರ ಪುತ್ರ, ಎಂಜಿನಿಯರ್ ಶ್ರೀ ಕಿಶೋರ್ ಹೆಗ್ಡೆ ಅವರ ಪತ್ನಿಯಾಗಿದ್ದಾರೆ. ಅಡ್ವೊಕೇಟ್ ಮೇನಾಲ ಎ. ಶ್ರೀನಿವಾಸ ರೈ ಮತ್ತು ಪನ್ನೆಗುತ್ತು ದಿ. ದೇವಕಿ ರೈ ದಂಪತಿಯ ಪುತ್ರಿಯಾಗಿರುವ ಇವರು, ಹೈಕೋರ್ಟ್ ನ್ಯಾಯವಾದಿ ವಿಶ್ವಜಿತ್ ರೈ ಅವರ ಸಹೋದರಿಯೂ ಆಗಿದ್ದಾರೆ.

ಸುಮಾರು 30 ವರ್ಷಗಳಿಂದ ಬಂಟರ ಸಂಘದೊಂದಿಗೆ ನಂಟು ಹೊಂದಿರುವ ಸೌಮ್ಯಪ್ರಿಯ ಹೆಗ್ಡೆ ಅವರು ವಿವಿಧ ಹುದ್ದೆಗಳಲ್ಲಿ ಹಾಗೂ ಉಪಸಮಿತಿಗಳಲ್ಲಿ ಕಾರ್ಯನಿರ್ವಹಿಸುವ ಮೂಲಕ ಸಂಘದ ಬೆಳವಣಿಗೆಗೆ ಮಹತ್ವದ ಕೊಡುಗೆ ನೀಡಿದ್ದಾರೆ.

ಯಾವುದೇ ಜವಾಬ್ದಾರಿಯನ್ನು ವಹಿಸಿಕೊಂಡರೂ ಅದನ್ನು ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯಿಂದ ನಿರ್ವಹಿಸುವುದು ಅವರ ವಿಶೇಷತೆ.

### ಸಂಘದೊಂದಿಗಿನ ಸೇವಾ ಪಯಣ

ಶ್ರೀ ಡಿ.ಕೆ. ಚೌಟ ಅವರ ಅಧ್ಯಕ್ಷತೆಯ ಅವಧಿಯಲ್ಲಿ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಸಂಘಸೇವೆಗೆ ಹೆಜ್ಜೆ

2014–2016ರ ಅವಧಿಯಲ್ಲಿ ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷೆಯಾಗಿ (Cultural Chairperson) ಸೇವೆ.

2018–2021ರ ಅವಧಿಯಲ್ಲಿ ಜಂಟಿ ಕಾರ್ಯದರ್ಶಿಯಾಗಿ (Joint Secretary) ಸೇವೆ.

ಸದಸ್ಯತ್ವ ಸಮಿತಿಯ ಅಧ್ಯಕ್ಷೆಯಾಗಿ ಯಶಸ್ವಿ ಸದಸ್ಯತ್ವ ಅಭಿಯಾನ ನಡೆಸಿ, ಬೆಂಗಳೂರು ಬಂಟರ ಸಂಘದ ನೂತನ ಸದಸ್ಯರ ಡೈರೆಕ್ಟರಿ ಪ್ರಕಟಣೆಯಲ್ಲಿ ಪ್ರಮುಖ ಪಾತ್ರ.

ನಿರ್ವಹಣಾ ಸಮಿತಿಯ ಅಧ್ಯಕ್ಷೆಯಾಗಿ (Maintenance Committee Chairperson) ಸಂಘದ ನಿರ್ವಹಣೆ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಸದಸ್ಯರ ಅನುಕೂಲಕ್ಕಾಗಿ ಅನೇಕ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಣೆ.

ಯಕ್ಷಗಾನದ ಬಗ್ಗೆ ಅಪಾರ ಆಸಕ್ತಿ ಹೊಂದಿರುವ ಹವ್ಯಾಸಿ ಯಕ್ಷಗಾನ ಕಲಾವಿದೆ.

### ಯಾಕೆ ಸೌಮ್ಯಪ್ರಿಯ ಹೆಗ್ಡೆ ಅವರನ್ನು ಆಯ್ಕೆ ಮಾಡಬೇಕು?

ಮೂರು ದಶಕಗಳ ಅನುಭವಕ್ಕೆ ಗೌರವ ಮತ್ತು ನಿಸ್ವಾರ್ಥ ಸೇವೆಗೆ ಮಾನ್ಯತೆ.

ಸಮರ್ಥ ಮಹಿಳಾ ನಾಯಕತ್ವಕ್ಕೆ ಬೆಂಬಲ ಹಾಗೂ ಅಭಿವೃದ್ಧಿ ಮತ್ತು ಪಾರದರ್ಶಕ ಆಡಳಿತಕ್ಕೆ ಆದ್ಯತೆ.

ಸದಸ್ಯರ ವಿಶ್ವಾಸಕ್ಕೆ ಪಾತ್ರವಾಗಿರುವ ಬಲಿಷ್ಠ ನಾಯಕತ್ವ - ಬೆಂಗಳೂರು ಬಂಟರ ಸಂಘದ ಭವಿಷ್ಯದ ಉತ್ತಮ ಆಯ್ಕೆ.

ಸುಶಿಕ್ಷಿತೆ, ಅನುಭವಸಂಪನ್ನೆ ಹಾಗೂ ಜನಪರ ಕಾಳಜಿಯ ನಾಯಕಿಯಾದ ಸೌಮ್ಯಪ್ರಿಯ ಹೆಗ್ಡೆ ಅವರನ್ನು ಆಯ್ಕೆ ಮಾಡಿದರೆ ಬೆಂಗಳೂರು ಬಂಟರ ಸಂಘ ಹಾಗೂ ಅದರ ಸರ್ವಸದಸ್ಯರ ಹಿತಕ್ಕೆ ಮತ್ತಷ್ಟು ಬಲ ಸಿಗಲಿದೆ.

ADVT.


TEAM
Dr. DEEPAK SHETTY
ಇದು ನಿಮ್ಮ ಟೀಮ್!
ಬಂಟರ ಸಂಘ, ಬೆಂಗಳೂರು
ಚುನಾವಣೆ 2026-'29
ಡಾ. ದೀಪಕ್ ಶೆಟ್ಟಿ ತಂಡದಿಂದ ಗೌರವಕಾರ್ಯದರ್ಶಿ ಸ್ಥಾನಕ್ಕೆ ಸಮರ್ಥ ಅಭ್ಯರ್ಥಿ
ಶ್ರೀ ಅಮರನಾಥ ಶೆಟ್ಟಿ ಹೆಗ್ಗುಂಜೆ
01
ಕ್ರಮಸಂಖ್ಯೆ
ಕೈಗಾರಿಕೋದ್ಯಮಿ
ಅಧ್ಯಕ್ಷರು: ಪಟ್ಲ ಫೌಂಡೇಶನ್ ಘಟಕ ಬೆಂಗಳೂರು
ತಂದೆ: ದಿ. ರತ್ನಾಕರ ಶೆಟ್ಟಿ
ಚಾರ ದೊಡ್ಡಮನೆ
ತಾಯಿ : ದಿ. ಸುವರ್ಣಿ ಶೆಡ್ತಿ
ಹೆಗ್ಗುಂಜೆ ಚಾವಡಿ ಮನೆ
ಮಾವ : ಭೋಜ ರಾಜ ಶೆಟ್ಟಿ
ಬೈಂದೂರು ನಾಕಟ್ಟೆ ಮನೆ
ಅತ್ತೆ: ವೀಣಾ ಶೆಟ್ಟಿ
ಹೆಗ್ಗುಂಜೆ ಕಂಬಳಗದ್ದೆ ಮನೆ
ಮಡದಿ: ದಿವ್ಯಾ ಶೆಟ್ಟಿ
ಹೆಗ್ಗುಂಜೆ ಕಂಬಳ ಗದ್ದೆ ಮನೆ
ಶ್ರೀ ಕ್ಷೇತ್ರ ಮಂದಾರ್ತಿಯ ಸೇವಾ ಸಂಸ್ಕಾರದಲ್ಲಿ ಬೆಳೆದು ಸಮಾಜಸೇವೆಯನ್ನು ಜೀವನದ ಧ್ಯೇಯವಾಗಿಸಿಕೊಂಡವರು.
2014-2016 ಹಾಗೂ 2016-2018 ರ ಅವಧಿಯಲ್ಲಿ ಬಂಟರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಸೇವೆ.
ಸಮಾಜಸೇವಾ ಸಮಿತಿಯ ಕಾರ್ಯಾಧ್ಯಕ್ಷರಾಗಿ ಹಾಗೂ ವಿದ್ಯಾರ್ಥಿವೇತನ ಸಮಿತಿಯ ಗೌರವ ಸಲಹೆಗಾರರಾಗಿ ಗಮನಾರ್ಹ ಸೇವೆ.
2022-2024ರ ಅವಧಿಯಲ್ಲಿ ಬಂಟರ ಸಂಘದ ಖಜಾಂಚಿಯಾಗಿ ಅತ್ಯಂತ ಪ್ರಾಮಾಣಿಕತೆ, ಪಾರದರ್ಶಕತೆ ಮತ್ತು ನಿಷ್ಪಕ್ಷಪಾತತೆಯಿಂದ ಕಾರ್ಯನಿರ್ವಹಣೆ.
ಬಂಟರ ಸಂಘದ ಇತಿಹಾಸದಲ್ಲೇ ಮೊದಲ ಬಾರಿಗೆ ಸಂಪೂರ್ಣ ಕ್ಯಾಶ್‌ಲೆಸ್ ವ್ಯವಹಾರ ವ್ಯವಸ್ಥೆ ಜಾರಿಗೆ ತಂದ ಸಾಧನೆ.
ಸದಸ್ಯರ ನೋವು-ನಲಿವುಗಳಿಗೆ ಸದಾ ಸ್ಪಂದಿಸಿ, ಅಗತ್ಯ ಸಂದರ್ಭಗಳಲ್ಲಿ ನೆರವಿನ ಹಸ್ತ ಚಾಚಿದ ಸಮಾಜಮುಖಿ ವ್ಯಕ್ತಿತ್ವ.
ಸಂಘದ ಅಭಿವೃದ್ಧಿ , ಸದಸ್ಯರ ಹಿತಾಸಕ್ತಿ ಹಾಗೂ ಸುಸಂಘಟಿತ ಆಡಳಿತಕ್ಕೆ ಸದಾ ಬದ್ಧತೆ.
ಅಮರನಾಥ ಶೆಟ್ಟಿ ಅರ್ಹ ಆಯ್ಕೆ
• ಪ್ರಾಮಾಣಿಕ ಮತ್ತು ನಿಷ್ಪಕ್ಷಪಾತ ನಾಯಕತ್ವ
• ಪಾರದರ್ಶಕ ಹಣಕಾಸು ನಿರ್ವಹಣೆಯ ಅನುಭವ
• ಸೇವಾ ಮನೋಭಾವ ಮತ್ತು ಸದಸ್ಯರ ವಿಶ್ವಾಸ
• ಅಭಿವೃದ್ಧಿ ಮತ್ತು ಸುಸಂಘಟಿತ ಆಡಳಿತಕ್ಕೆ ಬದ್ಧತೆ
• ಬಲಿಷ್ಠ ಬಂಟರ ಸಂಘದ ಭವಿಷ್ಯಕ್ಕಾಗಿ ಸಮರ್ಥ ಆಯ್ಕೆ
ಮತದಾನ
20 SEP
2026
ಸಂಘ ಸಮುದಾಯದ ಭವಿಷ್ಯಕ್ಕಾಗಿ
ನಿಮ್ಮ ಅಮೂಲ್ಯ ಮತ ಮತ್ತು ಬೆಂಬಲವನ್ನು
ಶ್ರೀ ಅಮರನಾಥ ಶೆಟ್ಟಿ ಹೆಗ್ಗುಂಜೆ ಅವರಿಗೆ ನೀಡಬೇಕಾಗಿ ವಿನಂತಿ.

ADVT.

# ಬಂಟರ ಸಂಘ ಬೆಂಗಳೂರು
# BUNT'S SANGHA BANGALORE

## ಚುನಾವಣೆ - 2026-29

**"ಮರದ ಫಲ ಅದರ ಬೇರು ಹೇಳುತ್ತದೆ;
ವ್ಯಕ್ತಿಯ ಮೌಲ್ಯ ಅವನ ಸೇವೆ ಹೇಳುತ್ತದೆ."**

**ಸೇವೆಯ ಪರಂಪರೆಯನ್ನು ಮೌಲ್ಯವಾಗಿ ಬೆಳೆಸಿಕೊಂಡ ಕುಟುಂಬವೇ ಸಮಾಜದ ನಿಜವಾದ ಸಂಪತ್ತು.**



ಬೆಂಗಳೂರು ಬಂಟರ ಸಂಘ ಉದಯಿಸಿದ ಪ್ರಾರಂಭದಿಂದಲೂ ಸಂಘಕ್ಕೆ ತಮ್ಮ ಸೇವೆಯನ್ನು ಸಲ್ಲಿಸುತ್ತಾ ಬಂದಿರುವ ಕೆಲವೇ ಕೆಲವು ಕುಟುಂಬಗಳಲ್ಲಿ ಒಂದಾದ ಶ್ರೀ ಎಮ್. ವೇಣುಗೋಪಾಲ ಶೆಟ್ಟಿ ಮತ್ತು ದಿ. ಹೇಮಲತಾ ವಿ. ಶೆಟ್ಟಿ ದಂಪತಿಗಳ ಕುಟುಂಬವು ಸಂಘದ ಬೆಳವಣಿಗೆಯಲ್ಲಿ ಹಳೇಬೇರಿನಂತೆ ತಮ್ಮ ನಿಸ್ವಾರ್ಥ ಸೇವೆಯನ್ನು ಸಲ್ಲಿಸಿರುತ್ತಾರೆ.

ಶ್ರೀಯುತ ಎಮ್. ವೇಣುಗೋಪಾಲ ಶೆಟ್ಟಿಯವರು ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, ಜೊತೆ ಕಾರ್ಯದರ್ಶಿಯಾಗಿ, ಖಜಾಂಚಿಯಾಗಿ ಮತ್ತು ಗೌರವ ಕಾರ್ಯದರ್ಶಿಯಾಗಿ ತಮ್ಮ ಅಮೂಲ್ಯವಾದ ಸೇವೆ ಸಲ್ಲಿಸಿರುತ್ತಾರೆ. ತಮ್ಮ ಆಕರ್ಷಕ ವ್ಯಕ್ತಿತ್ವ ಹಾಗೂ ಪರೋಪಕಾರಿ ಮನೋಭಾವನೆಯಿಂದಾಗಿ ಎಲ್ಲರಿಂದಲೂ ಹೇಮಕ್ಕ, ಹೇಮಾಂಟಿ ಎಂದೇ ಕರೆಯಿಸಿಕೊಳ್ಳುತ್ತಿದ್ದ ಹೇಮಲತಾ ವಿ. ಶೆಟ್ಟಿಯವರು, ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, ಮಹಿಳಾ ಉಪಾಧ್ಯಕ್ಷೆಯಾಗಿ ಹಲವು ದಶಕಗಳ ಕಾಲ ಸಂಘಕ್ಕೆ ಸೇವೆ ಸಲ್ಲಿಸಿರುತ್ತಾರೆ.



ಇಂತಹ ಸಮಾಜಮುಖಿ ಚಿಂತನೆಯ ಕುಟುಂಬದಿಂದ ಬಂದ ಇವರ ಪುತ್ರ ಸಂದೀಪ್ ಶೆಟ್ಟಿಯವರೂ ಸಹ ಸಂಘದ ಹೊಸ ಚಿಗುರಿನಂತೆ ಸಂಘದ 2022-24ನೇ ಸಾಲಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಸಂಘಕ್ಕೆ ಸೇವೆ ಸಲ್ಲಿಸಿದವರು. ತಮ್ಮ ಪದವಿ ಶಿಕ್ಷಣದ ನಂತರ ಹಲವಾರು ವರ್ಷಗಳಿಂದ ಪ್ರತಿಷ್ಠಿತ ಸಾಫ್ಟ್‌ವೇರ್ ಕಂಪೆನಿಯೊಂದರಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಸಾಮಾಜಿಕ ಕಾಳಜಿಯನ್ನು ತನ್ನಲ್ಲಿ ಮೈಗೂಡಿಸಿಕೊಂಡಿರುವ ಇವರು ಸಮಾನಚಿತ್ತ ಸ್ನೇಹಿತರೊಡಗೂಡಿ ಹಲವಾರು ಸಹಾಯಾಪೇಕ್ಷಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನೀಡಿ ಸಮಾಜಪರ ಕೆಲಸದಲ್ಲೂ ತನ್ನನ್ನು ತೊಡಗಿಸಿಕೊಂಡವರು. ಹಿರಿಯರನ್ನು ಗೌರವದಿಂದ ಕಂಡು, ಕಿರಿಯರೊಂದಿಗೆ ಆತ್ಮೀಯ ಒಡನಾಟ ಹೊಂದಿರುವ, ಬಡವ ಬಲ್ಲಿದನೆಂಬ ಬೇಧವಿಲ್ಲದೆ ಎಲ್ಲರೊಂದಿಗೂ ಸೌಹಾರ್ದಯುತವಾಗಿ ಬೆರೆಯುವ ವ್ಯಕ್ತಿತ್ವದ ಇವರು ಮುಂಬರುವ 2026-29ನೇ ಸಾಲಿನ ಬಂಟರ ಸಂಘ ಬೆಂಗಳೂರು ಇದರ **ಗೌರವ ಕಾರ್ಯದರ್ಶಿ** ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದು, ತಮ್ಮೆಲ್ಲರ ಹಾರೈಕೆ ಮತ್ತು ಆಶೀರ್ವಾದವನ್ನು ಬಯಸುತ್ತಿದ್ದಾರೆ.



NAGARAJA SHETTY
TEAM
ಇದು ನಿಮ್ಮೆಲ್ಲರ ಟೀಂ!

ಕ್ರಮ. ಸಂ.
2

## ಬಂಟರ ಸಂಘ ಬೆಂಗಳೂರು

**ಚುನಾವಣೆ 2026-29**

ಗೌ|| ಕಾರ್ಯದರ್ಶಿ ಸ್ಥಾನಕ್ಕೆ ಅಭ್ಯರ್ಥಿ

# ಸಂದೀಪ್ ಶೆಟ್ಟಿ

ಗೌ|| ಕಾರ್ಯದರ್ಶಿಯನ್ನಾಗಿ ಚುನಾಯಿಸಬೇಕಾಗಿ
ವಿನಮ್ರ ವಿನಂತಿ

ದಿನಾಂಕ
20ನೇ SEPTEMBER 2026
SUNDAY
ಕ್ರ.ಸಂ. 2

| ಕ್ರಮ ಸಂಖ್ಯೆ | ಭಾವಚಿತ್ರ | ಹೆಸರು |
|---|---|---|
| 2 |  | SANDEEP SHETTY<br>ಸಂದೀಪ್ ಶೆಟ್ಟಿ |

Please Elect
**SANDEEP SHETTY**
As Hon. Secretary
Bunts' Sangha Bangalore. 2026-29

**ಒಗ್ಗಟ್ಟಿನ ಹೆಜ್ಜೆ – ಅಭಿವೃದ್ಧಿಯ ದಾರಿ**

ADVT.


ಬಂಟರ ಸಂಘ ಬೆಂಗಳೂರು
Bunts' Sangha Bangalore
ಚುನಾವಣೆ 2026-29
ಪ್ರೀತಿಯ ಬಂಟ ಬಂಧುಗಳೇ,
ನಾನು ಗೀತಾ ಶೆಟ್ಟಿ
ಜೊತೆ ಕಾರ್ಯದರ್ಶಿ ಅಭ್ಯರ್ಥಿ
ಬಂಟರ ಸಂಘ ಬೆಂಗಳೂರು ಚುನಾವಣೆ 2026-29
NAGARAJA SHETTY
TEAM
ಇದು ನಿಮ್ಮೆಲ್ಲರ ಟೀಂ!
ಗೀತಾ ಶೆಟ್ಟಿ
ಜೊತೆ ಕಾರ್ಯದರ್ಶಿ ಅಭ್ಯರ್ಥಿ
ನನ್ನ ಬದುಕಿನ ಪ್ರತಿಯೊಂದು ಹೆಜ್ಜೆಯಲ್ಲೂ ಸಮಾಜದೊಂದಿಗೆ ಬೆರೆತುಕೊಂಡು, ಜನರೊಂದಿಗೆ ಬೆರೆತು, ಸೇವೆಯ ಮೂಲಕ ನನ್ನನ್ನು ನಾನು ರೂಪಿಸಿಕೊಳ್ಳುವ ಅವಕಾಶವನ್ನು ಜೀವನ ನನಗೆ ನೀಡಿದೆ. ಆ ಸೇವಾ ಪಯಣದಲ್ಲೇ ಬಂಟರ ಸಂಘ ಬೆಂಗಳೂರು ನನ್ನ ಜೀವನದ ಅವಿಭಾಜ್ಯ ಅಂಗವಾಗಿದೆ.
ಕುಂದಾಪುರ ತಾಲೂಕಿನವರಾದ ಹಾಗೂ ಪ್ರಸ್ತುತ ಶಿವಮೊಗ್ಗದ ಅರಸಾಳುವಿನಲ್ಲಿ ವಾಸವಿರುವ ತಂದೆ ಅಜ್ಜಿ ಕಂಠದಮನೆ ಶಿವರಾಮ ಶೆಟ್ಟಿ, ತಾಯಿ ನೈಲಾಡಿ ಚಾವಡಿಮನೆ ನಾಗರತ್ನ ಶೆಟ್ಟಿ ಹಾಗೂ ಪತಿ ಮೂಡಬಿದ್ರೆ ರವಿಕಿರಣ್ ಶೆಟ್ಟಿ (BA LLB, MSWHR), ಸ್ವತಃ ನಾನು GeeRK Business Solutions ಮತ್ತು Geetha Associates ಕಂಪೆನಿಯ ಮಾಲೀಕರಾಗಿ ವೃತ್ತಿಯಲ್ಲಿ HR Auditor, Tax and Labour Consultant ಆಗಿ ಕಾರ್ಯನಿರ್ವಹಿಸುತ್ತಿದ್ದು ಪ್ರಸ್ತುತ ಬೆಂಗಳೂರಿನ ನಾಗರಭಾವಿಯಲ್ಲಿ ವಾಸವಾಗಿದ್ದೇನೆ.
ವೃತ್ತಿಯಲ್ಲಿ ಉದ್ಯಮಿ, ಸಮಾಜಸೇವೆಯಲ್ಲಿ ಸಕ್ರಿಯ ಕಾರ್ಯಕರ್ತೆ, ಭರತನಾಟ್ಯ ಮತ್ತು ಸಂಗೀತ ಕಲಾವಿದೆ, ಸಾಂಸ್ಕೃತಿಕ ಕ್ಷೇತ್ರದ ಅಭಿಮಾನಿ ಹಾಗೂ ಬಂಟರ ಸಂಘ ಬೆಂಗಳೂರಿನ ಹೆಮ್ಮೆಯ ಸದಸ್ಯೆ. ವಿವಿಧ ಸಾಮಾಜಿಕ ಚಟುವಟಿಕೆಗಳ ಮೂಲಕ ಸಂಘದೊಂದಿಗೆ ನಿರಂತರವಾಗಿ ಕೆಲಸ ಮಾಡುವ ಅವಕಾಶ ನನಗೆ ದೊರೆತಿದೆ.
ಆ ಅನುಭವವೇ ಇಂದು ಮತ್ತಷ್ಟು ಜವಾಬ್ದಾರಿಯುತ ಸೇವೆ ಸಲ್ಲಿಸುವ ಸಂಕಲ್ಪವನ್ನು ನೀಡಿದೆ.
ಜೊತೆ ಕಾರ್ಯದರ್ಶಿ ಹುದ್ದೆಗೆ ಸ್ಪರ್ಧಿಸುತ್ತಿರುವ ನಾನು, ಅನುಭವದ ಬಲ ಮತ್ತು ಯುವ ಚಿಂತನೆಯ ಛಲದೊಂದಿಗೆ ಸದಸ್ಯರ ಧ್ವನಿಗೆ ಸ್ಪಂದಿಸುವ, ಎಲ್ಲರನ್ನು ಒಗ್ಗೂಡಿಸಿಕೊಂಡು ವರ್ಷಗಳ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆಡಳಿತಾತ್ಮಕ ಅನುಭವದೊಂದಿಗೆ, ಹೊಸ ಉತ್ಸಾಹ ಮತ್ತು ಕಾರ್ಯಶೀಲತೆಯನ್ನು ಬಂಟರ ಸಂಘದ ಸೇವೆಗೆ ಸಮರ್ಪಿಸಲು ನಾನು ಬಯಸುತ್ತಿದ್ದೇನೆ.
ನಿಮ್ಮ ವಿಶ್ವಾಸ, ನಿಮ್ಮ ಪ್ರೋತ್ಸಾಹ ಮತ್ತು ನಿಮ್ಮ ಅಮೂಲ್ಯವಾದ ಮತವೇ ನನ್ನ ಶಕ್ತಿ.
ನನ್ನ ಅನುಭವ ಪಯಣ
>Founder - Kalaprapancha Cultural Academy
>Executive Committe Member (2024-26), Matrimonial Committes Chairperson, Youth wing committee member (2018-21)- Buntara Sangha Bengaluru
>President - Lions Club Bengaluru ELITE
>Joint Secretary - Karnataka Rajya Bakery Okkoota
>Ward President - Kannada Sahitya Parishat
>Motivational Speaker & Mental Health Coach
>HR Auditor, Labour Consultant, Health & Safety Advisor
ಅನುಭವದ ಬಲ, ಯುವ ಚಿಂತನೆಯ
ಜೊತೆ ಕಾರ್ಯದರ್ಶಿ ಸ್ಥಾನಕ್ಕೆ ಈ ಬಾರಿ
ಗೀತಾ ಶೆಟ್ಟಿ
ಬಂಟರ ಸಂಘ ಬೆಂಗಳೂರು
ಚುನಾವಣೆ 2026-29
NAGARAJA SHETTY
TEAM
ದಿನಾಂಕ
20ನೇ SEPTEMBER 2026
SUNDAY
ಕ್ರ.ಸಂ. 1
ಕ್ರಮ.ಸಂ.
1
ಜಂಟಿ ಕಾರ್ಯದರ್ಶಿ ಸ್ಥಾನಕ್ಕೆ ಅಭ್ಯರ್ಥಿ
ಗೀತಾ ಶೆಟ್ಟಿ
ಕ್ರಮ ಸಂಖ್ಯೆ
ಭಾವಚಿತ್ರ
ಹೆಸರು
1
GEETHA SHETTY
ಗೀತಾ ಶೆಟ್ಟಿ
Please Elect
GEETHA SHETTY
As Joint Secretary Bunts' Sangha Bangalore. 2026-29
ಜಂಟಿ ಕಾರ್ಯದರ್ಶಿಯನ್ನಾಗಿ ಚುನಾಯಿಸಬೇಕಾಗಿ
ವಿನಮ್ರ ವಿನಂತಿ
ಒಗ್ಗಟ್ಟಿನ ಹೆಜ್ಜೆ ಅಭಿವೃದ್ಧಿಯ ದಾರಿ

ADVT.


TEAM
Dr. DEEPAK SHETTY
ಇದು ನಿಮ್ಮ ಟೀಮ್!
ಬಂಟರ ಸಂಘ, ಬೆಂಗಳೂರು
ಚುನಾವಣೆ 2026-'29
ಜೊತೆ ಕಾರ್ಯದರ್ಶಿ ಸ್ಥಾನಕ್ಕೆ ಯೋಗ್ಯ ಅಭ್ಯರ್ಥಿ
ಶ್ರೀಮತಿ ಸುರೇಖಾ ಶೆಟ್ಟಿ
W/o ಡಾ.ಚಿತ್ರಾಕರ ಹೆಗ್ಡೆ
28 ವರ್ಷಗಳ ಶಿಕ್ಷಣ ಕ್ಷೇತ್ರದ ಅನುಭವ
ದೇಶದ ಪ್ರತಿಷ್ಠಿತ ಯುನಿವರ್ಸಿಟಿಯಲ್ಲಿ ರಿಜಿಸ್ಟ್ರಾರ್ ಜನರಲ್
02
SL.NO.
ಸುರೇಖಾ ಶೆಟ್ಟಿ
Surekha Shetty
2018-2022 ರ ಅವಧಿಯಲ್ಲಿ ಬಂಟರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯೆಯಾಗಿ ಸೇವೆ
ಪೋಲೀಸ್ ಸಬ್ ಇನ್ಸ್ಪೆಕ್ಟರ್ ನೇಮಕಾತಿಯ ತರಬೇತಿ ಶಿಬಿರದ ಆಯೋಜನೆ
ಸಂಘದ ಮಾನವ ಸಂಪನ್ಮೂಲ ಹಾಗೂ ಔದ್ಯೋಗಿಕ ಕೋಶದಲ್ಲಿ ಗಣನೀಯ ಸೇವೆ
RNS 2 ಸಂಸ್ಥೆಯ ಪ್ರಾರಂಭಿಕ ವರ್ಷದ ವಿದ್ಯಾರ್ಥಿಗಳ ದಾಖಲಾತಿ ಹೆಚ್ಚಳದಲ್ಲಿ ಮಹತ್ವದ ಪಾತ್ರ
ಬಡ ವಿದ್ಯಾರ್ಥಿಗಳು ಹಾಗೂ ಮಹಿಳೆಯರ ಸಬಲೀಕರಣಕ್ಕೆ ನಿರಂತರ ಕೊಡುಗೆ
ಉದ್ಯಮ ಮತ್ತು ಶಿಕ್ಷಣದ ನಡುವೆ ಸೇತುವೆಯಾಗಿ ಪ್ರಮುಖ ಪಾತ್ರ
CSR, ವಿದ್ಯಾರ್ಥಿ ಸೇವೆ ಹಾಗೂ ಮಹಿಳಾ ಸಬಲೀಕರಣದಲ್ಲಿ ವಿಶಿಷ್ಟ ನಾಯಕತ್ವ
CII, NHRD ಹಾಗೂ RNS ವಿದ್ಯಾನಿಕೇತನದೊಂದಿಗೆ ಸಕ್ರಿಯ ಸೇವೆ
ರಾಣಿ ಅಬ್ಬಕ್ಕ ಪ್ರಶಸ್ತಿ ಪುರಸ್ಕೃತೆ
ಶಿಕ್ಷಣ ತಜ್ಞೆ - ಅನುಭವಿ - ಸಮರ್ಥ ಆಡಳಿತಗಾರ್ತಿ
ಪ್ರಾಮಾಣಿಕ - ಸುಶಿಕ್ಷಿತ - ಸಮರ್ಥ - ಪಾರದರ್ಶಕ ಆಡಳಿತ
JOINT SECRETARY
ಮತದಾನ 20 SEP 2026

ADVT.


TEAM
Dr. DEEPAK SHETTY
ಬಂಟರ ಸಂಘ, ಬೆಂಗಳೂರು
ಚುನಾವಣೆ 2026-'29
ಖಜಾಂಚಿ ಸ್ಥಾನಕ್ಕೆ ಸಮರ್ಥ ಮತ್ತು ಸುಶಿಕ್ಷಿತ ಅಭ್ಯರ್ಥಿ
01
ಕ್ರಮಸಂಖ್ಯೆ
ರಮಿತ್ ಬಿ. ಶೆಟ್ಟಿ
ಬೆಂಗಳೂರಿನ ಪ್ರತಿಷ್ಠಿತ ಸಿವಿಲ್ ಇಂಜಿನಿಯರ್ ಕಂಪನಿಯಲ್ಲಿ
COO ಕಾರ್ಯನಿರ್ವಹಣೆ | 25+ ವರ್ಷಗಳ ವೃತ್ತಿಪರ ಅನುಭವ |
ಮ್ಯಾರಥಾನ್ ಓಟಗಾರ| ಸೈಕ್ಲಿಷ್ಟ್
ತಂದೆ: ದಿ. ಹೆಚ್. ಭಾಸ್ಕರ ಶೆಟ್ಟಿ (ನಿವೃತ್ತ ವಿಜಯ ಬ್ಯಾಂಕ್ ಮ್ಯಾನೇಜರ್)
ತಾಯಿ: ಶಾಂಭವಿ ಬಿ. ಶೆಟ್ಟಿ ಮೊಳಹಳ್ಳಿ
ಮಾವ: ಡಾ. ವಿಜಯ್ ಶೆಟ್ಟಿ ಉಪ್ಪೂರು
ಅತ್ತೆ: ಶ್ರೀಮತಿ ಜಯಭಾರತಿ ಶೆಟ್ಟಿ ಕಾವ್ರಾಡಿ
ಪತ್ನಿ: ಮಾನಸ ಆರ್. ಶೆಟ್ಟಿ ಕಾವ್ರಾಡಿ
1997ರಿಂದ ಬಂಟರ ಸಂಘ ಬೆಂಗಳೂರು ಯುವ ವಿಭಾಗದ ಸಕ್ರಿಯ ಸದಸ್ಯ
ವಿದ್ಯಾರ್ಥಿ ವೇತನ ಸಮಿತಿಯ ಅಧ್ಯಕ್ಷರು
ಮೂರು ದಶಕಗಳ ನಿಸ್ವಾರ್ಥ ಸಂಘಸೇವೆ- ಅತಿ ಹೆಚ್ಚು ದಾನಿಗಳನ್ನು ಸಂಪರ್ಕಿಸಿ ಹೆಚ್ಚಿನ ದತ್ತಿ ನಿಧಿ ಸ್ಥಾಪನೆಗೆ ಪ್ರಮುಖ ಪಾತ್ರ
ಅನೇಕ ವಿದ್ಯಾರ್ಥಿಗಳ ಶೈಕ್ಷಣಿಕ ನೆರವಿನ ರೂವಾರಿ
ಬಂಟರ ಸಂಘ RNS2 ಶೈಕ್ಷಣಿಕ ಸಂಸ್ಥೆಯ ನಿರ್ಮಾಣ ಕಾರ್ಯದಲ್ಲಿ ಪ್ರಮುಖ ಕೊಡುಗೆ
ಕೋವಿಡ್ ಅವಧಿಯಲ್ಲೂ ಸಂಘದ ಕಾರ್ಯಗಳಿಗೆ ನಿರಂತರ ಸೇವೆ
ಪಾರದರ್ಶಕ ಆಡಳಿತ, ಶಿಸ್ತು ಮತ್ತು ಪ್ರಾಮಾಣಿಕತೆಗೆ ಹೆಸರುವಾಸಿ
ಪ್ರಾಮಾಣಿಕ ಆಡಳಿತ - ಪಾರದರ್ಶಕ ಹಣಕಾಸು ನಿರ್ವಹಣೆ -
ಸೇವಾ ಮನೋಭಾವ - ಸುಸಂಘಟಿತ ಆಡಳಿತಕ್ಕೆ ಬದ್ಧತೆ - ಬಲಿಷ್ಠ ಬಂಟರ ಸಂಘದ ಭವಿಷ್ಯಕ್ಕಾಗಿ ಸಮರ್ಥ ಆಯ್ಕೆ
ಸಂಘ ಸಮುದಾಯದ ಭವಿಷ್ಯಕ್ಕಾಗಿ
ನಿಮ್ಮ ಅಮೂಲ್ಯ ಮತ ಮತ್ತು ಬೆಂಬಲವನ್ನು
ಶ್ರೀ ರಮಿತ್ ಬಿ. ಶೆಟ್ಟಿ ಅವರಿಗೆ ನೀಡಬೇಕಾಗಿ ವಿನಂತಿ.
ಮತದಾನ ದಿನಾಂಕ 20 SEP 2026

ADVT.

# ಬಂಟರ ಸಂಘದ ಚುನಾವಣೆ 2026-2029

## ಮನವಿ

*Please Elect*

**UMESH KUMAR SHETTY**

**ಉಮೇಶ ಕುಮಾರ್ ಶೆಟ್ಟಿ**

ಸದಸ್ಯತ್ವ ಸಂಖ್ಯೆ : CL011469

FOR THE POST OF

# TREASURER



S.L. No. 02

TREASURER CANDIDATE

**ಆತ್ಮೀಯ ಸಮಾಜ ಬಾಂಧವರೇ,**

ಬಂಟರ ಸಂಘ ಬೆಂಗಳೂರಿನ ಎಲ್ಲಾ ಸದಸ್ಯರಿಗೆ ನನ್ನ ನಮನಗಳು.

ಪ್ರತಿಷ್ಠಿತ ಬೆಂಗಳೂರು ಬಂಟರ ಸಂಘದ ನೂತನ ಆಡಳಿತ ಮಂಡಳಿಗೆ 2026-2029ನೇ ಸಾಲಿಗಾಗಿ ತಾ॥ 20.9.2026 ರಂದು ಜರಗುವ ಮಹತ್ವದ ಚುನಾವಣೆಯಲ್ಲಿ **'ಖಜಾಂಚಿ'** ಸ್ಥಾನಕ್ಕೆ ಹಿರಿಯ ಹಿತೈಷಿಗಳು ಹಾಗೂ ಸ್ನೇಹಿತರ ಸೂಚನೆಯಂತೆ ಬಂಟರ ಸಮುದಾಯದ ಸೇವಾಕಾಂಕ್ಷಿಯಾಗಿ ಸ್ಪರ್ಧಿಸಲು ಇಚ್ಛಿಸಿರುತ್ತೇನೆ.

**ಕುಟುಂಬ ಪರಿಚಯ :**

ತಂದೆ : ದಿ॥ ಸುರೇಶ ಶೆಟ್ಟಿ ಬಿದ್ಕಲ್‌ಕಟ್ಟೆ, ಹಾರ್ದಳ ಮಂಡಳ್ಳಿ

ತಾಯಿ : ಸರಸ್ವತಿ ಶೆಟ್ಟಿ ಕಾಳಾವರ ನಡುಬೆಟ್ಟು ಒಳಗಿನಮನೆ

ಪತ್ನಿ : ಸರಿತಾ ಶೆಟ್ಟಿ, ನೆಲ್ಲಿಬೆಟ್ಟು ಶೇಡಿಮನೆ, ಕುಂದಾಪುರ, (MBA, M.Tech)

ಮಗಳು : ದ್ರಿಶಾನಿ ಶೆಟ್ಟಿ, ನೆಲ್ಲಿಬೆಟ್ಟು ಹೆಬ್ರಿ

ಅಣ್ಣ : ಗಣೇಶ ಶೆಟ್ಟಿ ಆನಂದ ನಿಲಯ ನೇರಳಕಟ್ಟೆ

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರು, ಗೋವಿಂದರಾಜನಗರ ವಿಧಾನಸಭ ಕ್ಷೇತ್ರ ಮತ್ತು ತುಳುಕೂಟ ಬೆಂಗಳೂರು ಕಾರ್ಯಕಾರಿ ಸಮಿತಿ ಸದಸ್ಯರಾಗಿ ಸೇವೆ ಸಲ್ಲಿಸಿದ ಅನುಭದ ಹೊಂದಿದ್ದೇನೆ.

ನಿಮಗೆಲ್ಲಾ ತಿಳಿದಿರುವಂತೆ ನಾನು ಕಳೆದ 10 ವರ್ಷಗಳಿಂದ ಸಂಘದ ಜೊತೆ ನಿಕಟ ಸಂಪರ್ಕವನ್ನಿರಿಸಿಕೊಂಡು ಸಂಘದ ಬಹುಮುಖ ಕಾರ್ಯಕ್ರಮಗಳಲ್ಲಿ ನನ್ನನ್ನು ತೊಡಗಿಸಿ ಕೊಂಡಿರುತ್ತೇನೆ.

- ಕಾರ್ಯಕಾರಿ ಸಮಿತಿ ಸದಸ್ಯ - 2024-26 (ಚೇರ್‌ಪರ್ಸನ್, ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿ)
- ಕಾರ್ಯಕಾರಿ ಸಮಿತಿ ಸದಸ್ಯ - 2022-24 (ಚೇರ್‌ಪರ್ಸನ್, ಸೇವಾದಳ)
- ಸಂಚಾಲಕ ಪ್ರಾರ್ಥನ ಮಂದಿರ-2018- 22
- ಸದಸ್ಯ ಪ್ರಾರ್ಥನ ಮಂದಿರ - 2016-18
- ಸದಸ್ಯ ಕ್ರೀಡಾ ಸಮಿತಿ - 2016-18
- ನನ್ನ ಸಮಾಜ ಸೇವೆಯನ್ನು ಗುರುತಿಸಿ 2020- 2022 ಸಾಲಿನ **"ಆರ್ಯಭಟ ಅಂತರಾಷ್ಟ್ರೀಯ ಪ್ರಶಸ್ತಿ"** ಲಭಿಸಿದೆ.

ಸಹೃದಯಿ ಬಂಧುಗಳು ನಮ್ಮ ತಂಡವನ್ನು ಬೆಂಬಲಿಸಿ, ತಮ್ಮ ಅಮೂಲ್ಯವಾದ ಮತವನ್ನು ನೀಡಿ ನನ್ನನ್ನು ಬಹುಮತದಿಂದ ಆಯ್ಕೆ ಮಾಡಬೇಕಾಗಿ ಅತ್ಯಂತ ನಮ್ರತೆಯಿಂದ ವಿನಂತಿಸುತ್ತೇನೆ.



NAGARAJA SHETTY TEAM

ಸಮುದಾಯದ ಅಭಿವೃದ್ಧಿಗಾಗಿ ಸಮಗ್ರ ತಂಡದ ಆಚ್ಚೆ

ತಮ್ಮ ವಿಶ್ವಾಸಿ

**ಉಮೇಶ ಕುಮಾರ್ ಶೆಟ್ಟಿ,**

**ಖಜಾಂಚಿ ಸ್ಥಾನದ ಅಭ್ಯರ್ಥಿ**

Ph. : 9741220559

ADVT.




EXECUTIVE COMMITTEE CANDIDATE



**ಅನಿತಾ ಪಿ. ಭಂಡಾರಿ**
**ANITHA P BHANDARY**

**01**
**SL.NO.**

# ಬಂಟರ ಸಂಘ, ಬೆಂಗಳೂರು | ಚುನಾವಣೆ 2026-'29

ನಾನು ಇದೇ ಬರುವ **20.09.2026** ರಂದು ನಡೆಯಲಿರುವ ಬಂಟರ ಸಂಘದ 2026 - 2029 ನೆ ಸಾಲಿನ ಚುನಾವಣೆಯಲ್ಲಿ ಕಾರ್ಯಕಾರಿ ಸಮಿತಿ ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದೇನೆ.ನಾನು ಕಳೆದ 32 ವರುಷಗಳಿಂದ ಸಂಘದ ಸದಸ್ಯೆಯಾಗಿದ್ದು ನಿರಂತರವಾಗಿ ಸಂಘದ ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ನನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿರುತ್ತೇನೆ. ಇದರ ಜೊತೆಯಲ್ಲಿ ಕ್ರೀಡಾ ಹಾಗೂ ಮಹಿಳಾ ವಿಭಾಗದ ಉಪ ಸಮಿತಿ ಸದಸ್ಯೆಯಾಗಿ ಮತ್ತು ವಿವಾಹ ವೇದಿಕೆಯ ಸಂಚಾಲಕಿಯಾಗಿ ಸೇವೆಯನ್ನು ಸಲ್ಲಿಸಿರುತ್ತೇನೆ.

## ಕಿರು ಪರಿಚಯ

### ಹೆಸರು - ಅನಿತಾ ಪಿ ಭಂಡಾರಿ

( ಹಂದಾಡಿ ಪಳ್ತಮನೆ ದಿವಂಗತ ಭುಜಂಗ ಶೆಟ್ಟಿ ಮತ್ತು ಸೌಕೂರು ಭಂಡಾರ್‍ರಮನೆ ದಿವಂಗತ ಸುಶೀಲಾ ಶೆಟ್ಟಿಯವರ ಮಗಳು )

**ಪತಿ - ಕೊಳ್ಕೆಬೈಲು ಪ್ರಮೋದಚಂದ್ರ ಭಂಡಾರಿ, ಬಂಟರ ಸಂಘದ ಮಾಜಿ ಕೋಶಾಧಿಕಾರಿ**

(ದಿ.ಕಂದಾವರ ಕರುಣಾಕರ ಭಂಡಾರಿ ಮತ್ತು ಕೊಳ್ಕೆಬೈಲು ವಿಲಾಸಿನಿ ಕೆ.ಭಂಡಾರಿಯವರ ಪುತ್ರ)

ನಾನು ಶೈಕ್ಷಣಿಕವಾಗಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕುಮ್ರಗೋಡು ಇಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ, ಬ್ರಹ್ಮಾವರದ ನಿರ್ಮಲ ಪ್ರೌಢಶಾಲೆಯಲ್ಲಿ ಪ್ರೌಡಶಿಕ್ಷಣವನ್ನು ಪಡೆದ ನಂತರ, ಬ್ರಹ್ಮಾವರದ ಎಸ್‌ಎಂಎಸ್ ಕಾಲೇಜಿನಲ್ಲಿ ಪದವಿಪೂರ್ವ ಮತ್ತು ಪದವಿ ಶಿಕ್ಷಣವನ್ನು ಪಡೆದಿರುತ್ತೇನೆ

ತಾವೆಲ್ಲರೂ ಈ ಚುನಾವಣೆಯಲ್ಲಿ ನನ್ನನ್ನು ಮತ್ತು ದೀಪಕ್ ಶೆಟ್ಟಿಯವರ ಸಂಪೂರ್ಣ ತಂಡವನ್ನು ಆರಿಸಿ ಸಂಘಕ್ಕೆ ಸೇವೆಯನ್ನು ಸಲ್ಲಿಸುವ ಅವಕಾಶವನ್ನು ಮಾಡಿಕೊಡಬೇಕಾಗಿ ಪ್ರಾರ್ಥಿಸುತ್ತಿದ್ದೇನೆ.

- **ಅನಿತಾ ಪಿ ಭಂಡಾರಿ**
ಸೌಕೂರು ಭಂಡಾರ್‍ರಮನೆ

ADVT.




EXECUTIVE COMMITTEE CANDIDATE



**ಸಿಎ. ಚಂದ್ರಶೇಖರ ಶೆಟ್ಟಿ**
**CA. CHANDRASHEKARA SHETTY**

**03**
**SL.NO.**

# ಬಂಟರ ಸಂಘ, ಬೆಂಗಳೂರು | ಚುನಾವಣೆ 2026-'29

ನಾನು ಇದೇ ಬರುವ **20.09.2026** ರಂದು ನಡೆಯಲಿರುವ ಬಂಟರ ಸಂಘದ 2026 - 2029 ನೆ ಸಾಲಿನ ಚುನಾವಣೆಯಲ್ಲಿ ಕಾರ್ಯಕಾರಿ ಸಮಿತಿ ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದೇನೆ. ನಾನು ಬಂಟರ ಸಂಘದ ವಿವಿಧ ಉಪ ಸಮಿತಿಗಳಲ್ಲಿ 10 ವರ್ಷಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿದ್ದೇನೆ.

## ಕಿರು ಪರಿಚಯ

### ಹೆಸರು - ಸಿಎ. ಚಂದ್ರಶೇಖರ ಶೆಟ್ಟಿ

ಊರು – ಕಾವಡಿ ಬಡಾಮನೆ, ಬಾರ್ಕೂರು ಸಮೀಪ, ಬ್ರಹ್ಮಾವರ ತಾಲೂಕು, ಉಡುಪಿ ಜಿಲ್ಲೆ
ಪತ್ನಿ – ಪದ್ಮಶ್ರೀ ಶೆಟ್ಟಿ , ಯರುಕೋಣೆ ದೊಡ್ಮನೆ, ಬೈಂದೂರು ತಾಲೂಕು, ಉಡುಪಿ ಜಿಲ್ಲೆ
ಮಕ್ಕಳು – ಅಥರ್ವ್ ಶೆಟ್ಟಿ ಮತ್ತು ಅರ್ನಿಕಾ ಶೆಟ್ಟಿ

- ಪ್ರಾಥಮಿಕ ಶಿಕ್ಷಣವನ್ನು ಕಾವಡಿಯಲ್ಲಿ, ಪ್ರೌಢಶಾಲೆ ಮತ್ತು ಪಿಯುಸಿ ಶಿಕ್ಷಣವನ್ನು ಬಾರ್ಕೂರಿನ ನ್ಯಾಷನಲ್ ಜೂನಿಯರ್ ಕಾಲೇಜಿನಲ್ಲಿ ಹಾಗೂ ಪದವಿ ಶಿಕ್ಷಣವನ್ನು ಬ್ರಹ್ಮಾವರದ ಎಸ್‌ಎಂಎಸ್ ಕಾಲೇಜಿನಲ್ಲಿ ಪೂರ್ಣಗೊಳಿಸಿದ್ದೇನೆ.
- 2005ರಲ್ಲಿ ಚಾರ್ಟರ್ಡ್ ಅಕೌಂಟ್ಸ್ ಪದವಿ ಪಡೆದಿದ್ದೇನೆ. ಜೊತೆಗೆ ಮಾಹಿತಿ ವ್ಯವಸ್ಥೆಗಳ ಲೆಕ್ಕಪರಿಶೋಧನಾ ಡಿಪ್ಲೊಮಾ (DISA) ಕೋರ್ಸ್‌ನ್ನೂ ಪೂರ್ಣಗೊಳಿಸಿದ್ದೇನೆ.
- ಇನ್ಫೋಸಿಸ್‌ನಲ್ಲಿ ಮೂರು ವರ್ಷಗಳ ಕಾಲ ಕಾರ್ಯನಿರ್ವಹಿಸಿದ ನಂತರ, ಬೆಂಗಳೂರಿನಲ್ಲಿ ಸ್ವಂತ ಚಾರ್ಟರ್ಡ್ ಅಕೌಂಟೆನ್ಸಿ ವೃತ್ತಿಯನ್ನು ಆರಂಭಿಸಿದೆನು.
- ಕರ್ನಾಟಕದಾದ್ಯಂತ ನಾಲ್ಕು ಶಾಖೆಗಳನ್ನು ಹೊಂದಿರುವ BVC & CO. ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆಯ ಸ್ಥಾಪಕ ಪಾಲುದಾರನಾಗಿದ್ದೇನೆ
- ಕರ್ನಾಟಕ ರಾಜ್ಯ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಘದಲ್ಲಿ ಸಮಿತಿ ಸದಸ್ಯ, ಕಾರ್ಯದರ್ಶಿ ಮತ್ತು ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದೇನೆ.
- 2019–20ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಘದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದೇನೆ.

**- ಸಿಎ. ಚಂದ್ರಶೇಖರ ಶೆಟ್ಟಿ**

ADVT.

# ಬಂಟರ ಸಂಘ, ಬೆಂಗಳೂರು, ಚುನಾವಣೆ 2026–29

*Please Elect for the post of* - **EXECUTIVE COMMITTEE MEMBER CANDIDATE**

TEAM Dr. DEEPAK SHETTY

VOTE Team DR. Deepak Shetty

## ಅರುಣ್ ಕುಮಾರ್ ಶೆಟ್ಟಿ .ಹೆಚ್

## ARUN KUMAR SHETTY H.



**ಕುಟುಂಬದ ಕಿರುಪರಿಚಯ :**

ತಂದೆ : ದಿ|| ಮಹಾಬಲ ಶೆಟ್ಟಿ, ನಿವೃತ್ತ ಶಿಕ್ಷಕರು, ಹಲ್ಲೂರು ಕಾಸರಗೋಡು ಮನೆ, ಮಾಲಾಡಿ

ತಾಯಿ : ಜಲಜಾಕ್ಷಿ ಎಂ.ಶೆಟ್ಟಿ, ಹೆಗ್ಗುಂಜೆ ನಡುಬೆಟ್ಟು, ಕಂಬಳಗದ್ದೆ ಮನೆ

ಮಾವ : ಸುಬ್ಬಣ್ಣ ಎಸ್ ಶೆಟ್ಟಿ, ಐರೋಡಿ

ಅತ್ತೆ : ನಾಗರತ್ನ .ಎಸ್. ಶೆಟ್ಟಿ, ಹೆಮ್ಮುಂಜೆ, ನಾಡ

ಪತ್ನಿ : ವೀಣಾ ಎ ಶೆಟ್ಟಿ

ಮಕ್ಕಳು : ಡಾ.ಕೃಪಾ ಎ. ಶೆಟ್ಟಿ ಮತ್ತು ಮೇದಿನಿ ಎ. ಶೆಟ್ಟಿ

ಕ್ರಮ ಸಂಖ್ಯೆ **2**

**ಕಾರ್ಯಕಾರಿ ಸಮಿತಿ ಸದಸ್ಯ ಸ್ಥಾನದ ಅಭ್ಯರ್ಥಿ**

### ಆತ್ಮೀಯ ಸಮಾಜ ಬಾಂಧವರೇ,

- ಬೆಂಗಳೂರು ಬಂಟರ ಸಂಘದ ಆಡಳಿತ ಮಂಡಳಿಗೆ 2026-2029ನೇ ಸಾಲಿಗಾಗಿ ದಿನಾಂಕ 20.09.2026 ರಂದು ನಡೆಯಲಿರುವ ಚುನಾವಣೆಯಲ್ಲಿ ಹಿರಿಯರ ಆಶೀರ್ವಾದದೊಂದಿಗೆ ಕಾರ್ಯಕಾರಿ ಸಮಿತಿ ಸದಸ್ಯ ಸ್ಥಾನದ ಅಭ್ಯರ್ಥಿಯಾಗಿ ಸ್ಪರ್ದಿಸುತ್ತಿದ್ದು, ನಿಮ್ಮೆಲ್ಲರ ಬೆಂಬಲವನ್ನು ಬಯಸುತ್ತಿದ್ದೇನೆ.

  ಬಂಟರ ಸಂಘದಲ್ಲಿ ಕಳೆದ 23 ವರ್ಷಗಳಿಂದ ಸದಸ್ಯನಾಗಿ ಉಪ ಸಮಿತಿಯಲ್ಲಿ ಕೆಲಸ ಮಾಡಿದ ಅನುಭವ.

### ವೃತ್ತಿ ಅನುಭವ

- ಇಂಟರ್ ಸ್ಕೇಪ್ ಇಂಟೀರಿಯರ್ಸ್ ಸಂಸ್ಥೆ 1996 ರಲ್ಲಿ ಪ್ರಾರಂಭ,ಪೀಣ್ಯದಲ್ಲಿ ಕಾರ್ಖಾನೆ, ವೃತ್ತಿಯಲ್ಲಿ 30 ವರ್ಷಗಳ ಅನುಭವ, ಬಸವೇಶ್ವರನಗರ, ಬೆಂಗಳೂರಿನಲ್ಲಿ ವಾಸ.
- ಪ್ರತಿಷ್ಠಿತ ಗ್ರಾಹಕರುಗಳೊಂದಿಗೆ ಕೆಲಸ ಮಾಡಿದ ಅನುಭವ - ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರ, ಭಾರತೀಯ ಜನತಾ ಪಕ್ಷದ ಕಾರ್ಯಾಲಯಗಳು.

### ಇತರ ಸಾಮಾಜಿಕ ಸೇವೆಗಳು

- 2012 ರಲ್ಲಿ ಲಯನ್ಸ್ ಕ್ಲಬ್ ಇಂಟರ್ನ್ಯಾಷನಲ್ ನ ಸದಸ್ಯ, 2018-19ನೇ ಸಾಲಿನಲ್ಲಿ ಭಾರತದ ಅತ್ಯುತ್ತಮ ಪ್ರಾದೇಶಿಕ ಅಧ್ಯಕ್ಷರು ಎಂಬ ಬಿರುದು.2020 ರಲ್ಲಿ ಲಯನ್ಸ್ ಕ್ಲಬ್ ಆಫ್ ಬೆಂಗಳೂರು ಅನನ್ಯಾದ ಸ್ಥಾಪಕ ಅಧ್ಯಕ್ಷ,ಪ್ರಸ್ತುತ ಡಿಸ್ಟ್ರಿಕ್ಟ್ 317ಎ ನಲ್ಲಿಎಡಿಸಿಎಸ್ ಆಗಿ ಸೇವೆ.
- ಐಶ್ವರ್ಯಾ ಏರೋ ರಾಯಲ್ ಸೈಟ್ ಓನರ್ಸ್ ವೆಲ್ಫೇರ್ ಅಸೋಸಿಯೇಷನ್ ನಲ್ಲಿ ಖಜಾಂಚಿ, 2016-2019ರ ಅವಧಿಯಲ್ಲಿ ಕನ್ನಡ ಕರಾವಳಿ ವೇದಿಕೆಯಲ್ಲಿ ಗೌರವ ಕಾರ್ಯದರ್ಶಿಯಾಗಿ ಸೇವೆ.
- ತುಳುಕೂಟ ಬೆಂಗಳೂರು, ಇಸ್ಕಾನ್, ಕಾಸಿಯಾ, ಪಿಐಎ, ಕನ್ನಡ ಸಾಹಿತ್ಯ ಪರಿಷತ್, ಬ್ರಹ್ಮಾವರ ಸ್ಪೋರ್ಟ್ಸ್ ಕ್ಲಬ್ ಮತ್ತು ಬಿಆರ್‌ವಿ ಕ್ಲಬ್ ನ ಸದಸ್ಯ.

ಮುಂಬರುವ ಚುನಾವಣೆಯಲ್ಲಿ ತಮ್ಮೆಲ್ಲರ ಆಶೀರ್ವಾದ ಮತ್ತು ಬೆಂಬಲದೊಂದಿಗೆ ನಿಮ್ಮ ಅಮೂಲ್ಯವಾದ ಮತವನ್ನು ನೀಡಿ ನನ್ನನ್ನು ಆಯ್ಕೆಮಾಡಿ ಸಂಘದ ಅಭಿವೃದ್ಧಿಗಾಗಿ ಕೆಲಸ ಮಾಡಲು ಅವಕಾಶ ಕಲ್ಪಿಸಿಕೊಡಬೇಕೆಂದು ವಿನಂತಿಸುತ್ತೇನೆ.

| ಕ್ರಮ ಸಂಖ್ಯೆ | ಹೆಸರು | ಭಾವಚಿತ್ರ |
|---|---|---|
| 2 | ಅರುಣ್ ಕುಮಾರ್ ಶೆಟ್ಟಿ .ಹೆಚ್ |  |

*Our Aim : Holistic Development of our Community*

**ಅರುಣ್ ಕುಮಾರ್ ಶೆಟ್ಟಿ .ಹೆಚ್**

ಸಿವಿಲ್ ಇಂಜಿನಿಯರ್ ಮತ್ತು ಇಂಟೀರಿಯರ್ ಡಿಸೈನರ್

94481 31035

ADVT.



TEAM
Dr. DEEPAK SHETTY

EXECUTIVE COMMITTEE CANDIDATE



**ಹೀರಾ ಅನೂಪ್ ಹೆಗ್ಡೆ**
HEERA ANUP HEGDE

**04**
SL.NO.

# ಬಂಟರ ಸಂಘ, ಬೆಂಗಳೂರು | ಚುನಾವಣೆ 2026-'29

ನಾನು ಇದೇ ಬರುವ **20-09-2026** ರಂದು ನಡೆಯಲಿರುವ ಬಂಟರ ಸಂಘದ 2026-2029ನೇ ಸಾಲಿನ ಚುನಾವಣೆಯಲ್ಲಿ **ಕಾರ್ಯಕಾರಿ ಸಮಿತಿ** ಸದಸ್ಯೆ ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದೇನೆ.
ಕಳೆದ ಹಲವು ವರ್ಷಗಳಿಂದ ಸಂಘದ ವಿವಿಧ ಸಮಿತಿಗಳಲ್ಲಿ ಸೇವೆ ಸಲ್ಲಿಸಿರುವ ಅನುಭವದೊಂದಿಗೆ, ಮುಂದೆಯೂ ನಿಷ್ಠೆ, ಪ್ರಾಮಾಣಿಕತೆ ಮತ್ತು ಬದ್ಧತೆಯಿಂದ ಸಂಘದ ಅಭಿವೃದ್ಧಿಗಾಗಿ ಸೇವೆ ಸಲ್ಲಿಸುವ ಸಂಕಲ್ಪ ಹೊಂದಿದ್ದೇನೆ.

## ಕಿರು ಪರಿಚಯ

**ಹೆಸರು - ಹೀರಾ ಅನೂಪ್ ಹೆಗ್ಡೆ** ಕೆಂಜೂರು

ಪತಿ: ಅನೂಪ್ ಆರ್. ಹೆಗ್ಡೆ ಹಂದಾಡಿ ಪಳ್ತಮನೆ (ತೋನ್ಸೆ ಪಡುಮನೆ ದಿ. ರಘುರಾಮ ಹೆಗ್ಡೆ ಹಾಗೂ ಹಂದಾಡಿ ಪಳ್ತಮನೆ ಪ್ರೇಮಾ ಆರ್ ಹೆಗ್ಡೆ ಅವರ ಪುತ್ರ)
ತಂದೆ: ಬುಡ್ನಾರ್ ದಿ| ಸರ್ವೋತ್ತಮ ಶೆಟ್ಟಿ ,(ನಿವೃತ್ತ ಕನ್ನಡ ಪಂಡಿತರು, ಪೊಂಪೈ ಪ್ರೌಢ ಶಾಲೆ ಐಕಳ)
ತಾಯಿ: ದಿ| ತಾರಾ ಶೆಟ್ಟಿ , ಕೆಂಜೂರುಮನೆ, ಕೆಂಜೂರು

### ಶಿಕ್ಷಣ

- ಪ್ರಾಥಮಿಕ ಶಿಕ್ಷಣ – ಕೆಂಜೂರು ಪ್ರಾಥಮಿಕ ಶಾಲೆ
- ಪ್ರೌಢ ಶಿಕ್ಷಣ – ಸರ್ಕಾರಿ ಪ್ರೌಢಶಾಲೆ, ಕೊಕ್ಕರ್ಣೆ
- ಬಿ.ಕಾಂ – ಎಸ್ಎಂಎಸ್ ಕಾಲೇಜು, ಬ್ರಹ್ಮಾವರ
- ಸಿ.ಎ. (ಇಂಟರ್)

- ಸೇವಾ ಮನೋಭಾವವನ್ನು ಹೊಂದಿರುವ ನಾನು 90ರ ದಶಕದಲ್ಲಿ ಗ್ರಾಮ ಪಂಚಾಯತಿ ಪ್ರಾರಂಭವಾದಾಗ, 38ನೇ ಕಳ್ತೂರು-ಸಂತೆಕಟ್ಟೆ ಗ್ರಾಮ ಪಂಚಾಯಿತಿಯ ಮೊದಲ ಮಹಿಳಾ ಅಧ್ಯಕ್ಷೆಯಾಗಿ ಸೇವೆ ಸಲ್ಲಿಸಿದ್ದೇನೆ.
- ತದನಂತರ ಸುಮಾರು ಎರಡು ದಶಕಗಳ ಕಾಲ ವಿದೇಶದಲ್ಲಿನ ಬಹುರಾಷ್ಟ್ರೀಯ ಕಂಪನಿಯಲ್ಲಿ ಫೈನಾನ್ಸ್ ಮ್ಯಾನೇಜರ್ ಆಗಿ ಕಾರ್ಯನಿರ್ವಹಿಸಿದ್ದೇನೆ

### ಸಂಘದ ಸೇವೆ

- 2018-2022: ವಿವಾಹ ವೇದಿಕೆ ಉಪ ಸಮಿತಿ ಸದಸ್ಯೆ
- 2022-2024: ವಿದ್ಯಾರ್ಥಿವೇತನ ಸಮಿತಿ ಸಂಯೋಜಕಿ
- 2024-2026: ಖರೀದಿ ಸಮಿತಿ ಸಂಚಾಲಕಿ
- ಸಂಘದ "ಸಂಕಲ್ಪ " ಯೋಜನೆಯ ಅತ್ಯಂತ ಸಕ್ರಿಯ ಸದಸ್ಯೆ
- ಪ್ರಸ್ತುತ: ವಿಜಯ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ನಿರ್ದೇಶಕಿ
- ಕಳೆದೊಂದು ದಶಕದಿಂದ ಬಂಟರ ಸಂಘದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುತ್ತೇನೆ

ತಾವೆಲ್ಲರೂ ಈ ಚುನಾವಣೆಯಲ್ಲಿ ನನಗೆ ನಿಮ್ಮ ಅಮೂಲ್ಯವಾದ ಮತವನ್ನು ನೀಡಿ, ನನ್ನನ್ನು ಆಯ್ಕೆ ಮಾಡಿ, ಸಂಘಕ್ಕೆ ಮತ್ತಷ್ಟು ಸೇವೆ ಸಲ್ಲಿಸುವ ಅವಕಾಶವನ್ನು ಕಲ್ಪಿಸಿಕೊಡಬೇಕಾಗಿ ವಿನಮ್ರವಾಗಿ ಕೋರುತ್ತೇನೆ.

**- ಹೀರಾ ಅನೂಪ್ ಹೆಗ್ಡೆ**
**9611298055**

ADVT.



TEAM
Dr. DEEPAK SHETTY

EXECUTIVE COMMITTEE CANDIDATE



**ಮಾಲತಿ ಜೆ. ಶೆಟ್ಟಿ**
MALATHI J. SHETTY

**08**
SL.NO.

# ಬಂಟರ ಸಂಘ, ಬೆಂಗಳೂರು | ಚುನಾವಣೆ 2026-'29

ನಾನು ಇದೇ ಬರುವ **20-09-2026** ರಂದು ನಡೆಯಲಿರುವ ಬಂಟರ ಸಂಘದ 2026-2029ನೇ ಸಾಲಿನ ಚುನಾವಣೆಯಲ್ಲಿ ಕಾರ್ಯಕಾರಿ ಸಮಿತಿ ಸದಸ್ಯೆ ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದೇನೆ.
ಕಳೆದ ಹಲವು ವರ್ಷಗಳಿಂದ ಸಂಘದ ವಿವಿಧ ಸಮಿತಿಗಳಲ್ಲಿ ಸೇವೆ ಸಲ್ಲಿಸಿರುವ ಅನುಭವದೊಂದಿಗೆ, ಮುಂದೆಯೂ ನಿಷ್ಠೆ, ಪ್ರಾಮಾಣಿಕತೆ ಮತ್ತು ಬದ್ಧತೆಯಿಂದ ಸಂಘದ ಅಭಿವೃದ್ಧಿಗಾಗಿ ಸೇವೆ ಸಲ್ಲಿಸುವ ಸಂಕಲ್ಪ ಹೊಂದಿದ್ದೇನೆ.

## ಕಿರು ಪರಿಚಯ

**ಹೆಸರು - ಮಾಲತಿ ಜೆ. ಶೆಟ್ಟಿ**

ತಂದೆ : ದಿ|| ಜಗನ್ನಾಥ ಶೆಟ್ಟಿ , ಹೆಬ್ಬಾಡಿ ದೊಡ್ಡಮನೆ
ತಾಯಿ : ಪಾರ್ವತಿ ಶೆಟ್ಟಿ , ಮಾನಂಬಳ್ಳಿ, ನಾಗಯ್ಯ ಶೆಟ್ಟಿ ಮನೆ
ಪತಿ : ಜಯಶೀಲ ಶೆಟ್ಟಿ , ಬೆಳ್ವೆ ಪಟೇಲರ ಮನೆ
ಮಗ : ಆದಿತ್ಯ ಶೆಟ್ಟಿ

- 2022-24ನೇ ಸಾಲಿನ ಚೇರ್‌ಪರ್ಸನ್ ಲೇಡೀಸ್ ವಿಂಗ್ (ಮಹಿಳಾ ವಿಭಾಗದ ಅಧ್ಯಕ್ಷೆ) ಆಗಿ ಯೋಗ ದಿನಾಚರಣೆ ಯಶಸ್ವಿ ಆಯೋಜನೆ
- ನಿಮಗೆಲ್ಲ ತಿಳಿದಿರುವಂತೆ ನಾನು ಕಳೆದ 22 ವರ್ಷಗಳಿಂದ ಬೆಂಗಳೂರು ಬಂಟರ ಸಂಘದ ಅನೇಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುತ್ತೇನೆ.
- ಮಹಿಳೆಯರಿಗಾಗಿ ಅನೇಕ ವೈದ್ಯರ ಸಮಾಲೋಚನೆ ಒಳಗೊಂಡ ಉತ್ತಮ ಕಾರ್ಯಕ್ರಮಗಳನ್ನು ನಡೆಸಿದ್ದೇನೆ.
- ಮಹಿಳಾ ದಿನಾಚರಣೆಯನ್ನು ಅತ್ಯಂತ ಉತ್ತಮ ರೀತಿಯಿಂದ ಆಚರಿಸಿದ್ದೇನೆ
- ಸಾಂಸ್ಕೃತಿಕ ವಿಭಾಗ, ಮಹಿಳಾ ವಿಭಾಗ, ವಿವಾಹ ವೇದಿಕೆ ಹೀಗೆ ವಿವಿಧ ಉಪ ಸಮಿತಿಗಳಲ್ಲಿ ಸೇವೆ ಸಲ್ಲಿಸಿರುತ್ತೇನೆ.
- ಸಾಂಸ್ಕೃತಿಕ ವಿಭಾಗ, ಮಹಿಳಾ ವಿಭಾಗ, ವಿವಾಹ ವೇದಿಕೆ ಹೀಗೆ ವಿವಿಧ ಉಪ ಸಮಿತಿಗಳಲ್ಲಿ ಸೇವೆ ಸಲ್ಲಿಸಿರುತ್ತೇನೆ.
- Art of Living - ಸಂಸ್ಥೆಯ ಮೂಲಕ ಸಮಾಜದಲ್ಲಿ ಯೋಗ, ಧ್ಯಾನ, ಪ್ರಾಣಾಯಾಮಗಳ ಅರಿವು ಮೂಡಿಸುವ ಸ್ವಯಂ ಸೇವಕಿಯಾಗಿ ಗುರುತಿಸಿಕೊಂಡಿರುತ್ತೇನೆ.
- ಗೌರವಾನ್ವಿತ ಸಮಾಜ ಬಂಧುಗಳೇ, ಅಮೂಲ್ಯವಾದ ಮತವನ್ನು ನೀಡಿ ನನ್ನನ್ನು ಆಶೀರ್ವದಿಸಿ. ಸಂಘದ ಸೇವೆಗೆ ಅವಕಾಶ ಮಾಡಿಕೊಡಬೇಕಾಗಿ ವಿನಮ್ರವಾಗಿ ಪ್ರಾರ್ಥಿಸಿಕೊಳ್ಳುತ್ತೇನೆ.

**- ಮಾಲತಿ ಜೆ. ಶೆಟ್ಟಿ**

ADVT.

# ಬಂಟರ ಸಂಘದ ಚುನಾವಣೆ – 2026-2029

**ಆತ್ಮೀಯ ಸಮಾಜ ಬಾಂಧವರೇ,**

ಬಂಟರ ಸಂಘ ಬೆಂಗಳೂರಿನ ಎಲ್ಲಾ ಸದಸ್ಯರಿಗೂ ನನ್ನ ನಮನಗಳು.

ಪ್ರತಿಷ್ಠಿತ ಬೆಂಗಳೂರು ಬಂಟರ ಸಂಘದ ನೂತನ ಆಡಳತ ಮಂಡಳಿಗೆ 2026-2029ನೇ ಸಾಲಿಗಾಗಿ ತಾ॥ 20.09.2026 ರಂದು ಜರಗುವ ಮಹತ್ವದ ಚುನಾವಣೆಯಲ್ಲಿ **ಕಾರ್ಯಕಾರಿ ಸಮಿತಿ ಸದಸ್ಯ** ಸ್ಥಾನಕ್ಕೆ ಹಿರಿಯ ಹಿತೈಷಿಗಳು ಹಾಗೂ ಸ್ನೇಹಿತರ ಸೂಚನೆಯಂತೆ ಬಂಟರ ಸಮುದಾಯದ ಸೇವಾಕಾಂಕ್ಷಿಯಾಗಿ ಸ್ಪರ್ಧಿಸಲು ಇಚ್ಚಿಸಿರುತ್ತೇನೆ.

**ಕುಟುಂಬ ಪರಿಚಯ :**

**ತಂದೆ : ದಿ॥ ಶೇಕರ್ ಎಂ. ಶೆಟ್ಟಿ (ಅಧಿಕಾರಿಮನೆ, ಬ್ರಹ್ಮಾವರ)**
**ತಾಯಿ : ಶೀಲ ಎಸ್. ಶೆಟ್ಟಿ (ಮರ್ಜಿನಪಡುಮನೆ, ಬ್ರಹ್ಮಾವರ)**
**ಪತ್ನಿ : ಅಶ್ವಿನಿ (ಗುಡಿಬೆಟ್ಟು, ಅಂಪಾರು)**

**Education :** B.Com
**Profession :** Hotelier



ಆತ್ಮೀಯರೇ,

ನಿಮಗೆಲ್ಲ ತಿಳಿದಿರುವಂತೆ ನಾನು ಕಳೆದ ಹಲವಾರು ವರ್ಷಗಳಿಂದ ನಮ್ಮ ಸಂಘದ ಚಟುವಟಿಕೆಯಲ್ಲಿ ಸಕ್ರೀಯವಾಗಿ ನನ್ನನ್ನು ನಾನು ತೊಡಗಿಸಿ ಕೊಂಡಿರುತ್ತೇನೆ. ವಿವಿಧ ಉಪಸಮಿತಿಗಳಲ್ಲಿ ಕಾರ್ಯ ನಿರ್ವಹಿಸಿ, 2022-2024ನೇ ಸಾಲಿನ ಕಾರ್ಯಕಾರಿ ಸಮಿತಿ ಸದಸ್ಯನಾಗಿ ಪ್ರಾಥನಾ ಮಂದಿರ ಸಮಿತಿಯ ಚೇರ್‌ಪರ್ಸನ್ ಆಗಿ ಸೇವೆ ಸಲ್ಲಿಸಿದ ಅನನುಭವ ಹೊಂದಿದ್ದೇನೆ.

ಈ ಬಾರಿಯೂ ಕಾರ್ಯಕಾರಿ ಸಮಿತಿ ಸ್ಥಾನಕ್ಕೆ ಸ್ಪರ್ಧಿಸಿದ್ದು, ತಾವೆಲ್ಲರೂ ತಮ್ಮ ಅಮೂಲ್ಯವಾದ ಮತವನ್ನು ನೀಡಿ, ಸಂಘದ ಅಭಿವೃದ್ಧಿಗಾಗಿ ಇನ್ನಷ್ಟು ಆಸಕ್ತಿಯಿಂದ ಕಾರ್ಯ ನಿರ್ವಹಿಸಲು ಮತ್ತೊಮ್ಮೆ ಅವಕಾಶವನ್ನು ಕಲ್ಪಿಸಿ ಆಶೀರ್ವದಿಸಬೇಕೆಂದು, ವಿನಯ ಪೂರ್ವಕವಾಗಿ ವಿನಂತಿಸುತ್ತೇನೆ.

ತಮ್ಮ ವಿಶ್ವಾಸಿ
**ಕೀರ್ತನ್ ಶೆಟ್ಟಿ**
Ph. : 9986170124

Sl. No.
**05**

*Please Elect*




**KEERTHAN SHETTY**
**ಕೀರ್ತನ್ ಶೆಟ್ಟಿ**
ಸದಸ್ಯತ್ವ ಸಂಖ್ಯೆ : LM008487

FOR THE POST OF
**ಕಾರ್ಯಕಾರಿ ಸಮಿತಿ ಸದಸ್ಯ**
**EXECUTIVE COMMITTEE MEMBER**

ADVT.

## ಸಪ್ತ ಸಂಕಲ್ಪ

- ಸದಸ್ಯ ಕೇಂದ್ರಿತ ಸಂಘ
- ಮಹಿಳಾ ಸಶಕ್ತೀಕರಣ
- ಯುವಶಕ್ತಿಗೆ ಭರವಸೆಯ ಸಂಘ
- ಸಂಸ್ಕೃತಿ ಮತ್ತು ಪರಂಪರೆಯ ಸಂರಕ್ಷಣೆ
- ಪಾರದರ್ಶಕ ಮತ್ತು ಸ್ಪಂದನಶೀಲ ಆಡಳಿತ
- ಬಲಿಷ್ಠ ಹಣಕಾಸು ವ್ಯವಸ್ಥೆ
- ಒಗ್ಗಟ್ಟಿನ ಬಂಟ ಸಮುದಾಯ

## ಸಪ್ತ ಸೂತ್ರಗಳು

### ಮಹತ್ವಾಕಾಂಕ್ಷೀಯ ಆಶಯ

- Bunt Senior Citizen's Forum & Ex-Executive Committees Forum
- Bunts Chamber of Commerce
- Startup Connect Forum & Youth Leadership Forum
- Bunt Law Forum, Bunt CA Forum, Medical Forum, Engineers & Architects Forum
- Women Entrepreneurs Forum
- Education Changemakers Forum
- Regional Committees & Community Extension Forum



## KANTHI SHETTY

For the post of

**PRESIDENT**

**SL.No: 02**

### ಸಮರ್ಥ ಅಧ್ಯಕ್ಷೆ

| | |
|---|---|
| 2014-2016 | ಕಾರ್ಯಕಾರಿ ಸಮಿತಿ ಸದಸ್ಯೆ |
| 2016-2018 | ಜೊತೆ ಕಾರ್ಯದರ್ಶಿ |
| 2024-2026 | ಉಪಾಧ್ಯಕ್ಷೆ |

Choose Right. Vote Kanthi

**ಸುಧೀರ್ಘ 26 ವರ್ಷಗಳಿಂದ ಹೆಮ್ಮೆಯ ಬಂಟರ ಸಂಘದ ಸದಸ್ಯೆ**

ನನ್ನ ಕನಸು ಕೇವಲ ಆಡಳಿತ ನಡೆಸುವುದಲ್ಲ... ಪ್ರತಿಯೊಬ್ಬ ಸದಸ್ಯರು ಹೆಮ್ಮೆಪಡುವ, ಯುವಜನತೆ ಅವಕಾಶಗಳನ್ನು ಕಂಡುಕೊಳ್ಳುವ, ಮಹಿಳೆಯರು ನಾಯಕತ್ವದಲ್ಲಿ ಭಾಗವಹಿಸುವ, ಹಿರಿಯರ ಅನುಭವಕ್ಕೆ ಗೌರವ ದೊರೆಯುವ, ಮುಂದಿನ ತಲೆಮಾರಿಗೆ ಮಾರ್ಗದರ್ಶನ ನೀಡುವ ಬಲಿಷ್ಠ ಬಂಟರ ಸಂಘವನ್ನು ನಿರ್ಮಿಸುವುದು ನನ್ನ ಸಂಕಲ್ಪ.

## ಬದಲಾವಣೆಯ ಸಮಯ ಬಂದಿದೆ

## ನಿಮ್ಮ ಒಂದು ಮತ ನೈಜ ಅಭಿವೃದ್ಧಿಗಾಗಿ, ಕಾಂತಿ ಶೆಟ್ಟಿಯ ವಿಶ್ವಾಸಾರ್ಹ ನಾಯಕತ್ವಕ್ಕಾಗಿ, ನಮ್ಮೆಲ್ಲರ ಒಗ್ಗಟ್ಟಿಗಾಗಿ !

ಇದು ಕೇವಲ ಮೂರು ವರ್ಷಗಳ ಯೋಜನೆಯಲ್ಲ.. ಮುಂದಿನ ಹಲವು ದಶಕಗಳ ಬಂಟರ ಸಂಘವನ್ನು ರೂಪಿಸುವ ದೂರದೃಷ್ಟಿಯ ಸಂಕಲ್ಪ

VISION 2029

1. **ಕರ್ನಾಟಕದ ಅತ್ಯುತ್ತಮ ಸಮುದಾಯ ಸಂಸ್ಥೆ** -ಸೇವೆ, ಆಡಳಿತ ಮತ್ತು ಸಾಧನೆಯಲ್ಲಿ ಮಾದರಿಯಾಗುವ ಬಂಟರ ಸಂಘ.
2. **ಆಡಿಟ್ ವ್ಯವಸ್ಥೆಯ ಮತ್ತಷ್ಟು ಬಲವರ್ಧನೆ** - ಹಣಕಾಸು ನಿರ್ವಹಣೆಯಲ್ಲಿ ಉತ್ತಮ ಕ್ರಮಗಳ ಅನುಸರಣೆ
3. **ಶಿಕ್ಷಣದಲ್ಲಿ ಶ್ರೇಷ್ಠತೆಯ ಕೇಂದ್ರ** - ಉದ್ದೇಶ: ಸಮುದಾಯದ ಕಟ್ಟ ಕಡೆಯ ವ್ಯಕ್ತಿಯ ಶಿಕ್ಷಣಕ್ಕೆ ಬೆಂಬಲ. ಕುಂದು ಕೊರತೆಗಳ ನಿವಾರಣೆಗೆ ಕ್ರಮ. ಶೈಕ್ಷಣಿಕ ಬಲವರ್ಧನೆ
4. **ಪ್ರತಿಯೊಬ್ಬ ಬಂಟನಿಗೂ ಒಂದೇ ವೇದಿಕೆ** ಪ್ರತಿ ಕುಟುಂಬ, ಪ್ರತಿಯೊಬ್ಬ ಸದಸ್ಯ ಮತ್ತು ಪ್ರತಿಯೊಂದು ತಲೆಮಾರನ್ನು ಒಗ್ಗೂಡಿಸುವ ಸಂಘ.
5. **ಪರಂಪರೆಯ ಸಂರಕ್ಷಣೆ** - ಭವಿಷ್ಯದ ನಿರ್ಮಾಣ, ಬಂಟರ ಇತಿಹಾಸ, ಸಂಸ್ಕೃತಿ ಮತ್ತು ಮೌಲ್ಯಗಳನ್ನು ಮುಂದಿನ ಪೀಳಿಗೆಗೆ ಶಾಶ್ವತವಾಗಿ ಉಳಿಸುವುದು.
6. **ನಾಯಕತ್ವದ ಪೀಳಿಗೆ ನಿರ್ಮಾಣ** - ನಾಳೆಯ ಸಮರ್ಥ ಸಮಾಜ ನಾಯಕರನ್ನು ರೂಪಿಸುವ ಸಂಸ್ಥೆಯಾಗುವುದು.
7. **ವ್ಯಕ್ತಿಗಳಿಗಿಂತ ದೊಡ್ಡ ವ್ಯವಸ್ಥೆ** - ಯಾವ ನಾಯಕತ್ವ ಬಂದರೂ ನಿರಂತರವಾಗಿ ಬೆಳೆಯುವ ಬಲಿಷ್ಠ ಸಂಸ್ಥೆಯ ನಿರ್ಮಾಣ.

**ಬದಲಾವಣೆಯ ಸಮಯ ಬಂದಿದೆ | ನಿಮ್ಮ ಒಂದು ಮತ**

ವ್ಯಕ್ತಿಪೂಜೆಗಾಗಿ ಅಲ್ಲ, ಸಂಸ್ಥೆಯ ಬೆಳವಣಿಗೆಗಾಗಿ. ಇಂದಿಗಾಗಿ ಅಲ್ಲ, ಮುಂದಿನ ಪೀಳಿಗೆಗಾಗಿ. ಪ್ರಶ್ನಿಸುವ ಆಡಳಿತಕ್ಕಾಗಿ. ಉತ್ತರ ನೀಡುವ ನಾಯಕತ್ವಕ್ಕಾಗಿ.

**ಸಾರ್ವಜನಿಕ ಬದುಕಿನಲ್ಲಿ ಪ್ರಾಮಾಣಿಕತೆಗೆ ಧಕ್ಕೆಯಾಗುವಂತಹ ಯಾವುದೇ ಕಪ್ಪು ಚುಕ್ಕೆ ಇಲ್ಲದ ಪಯಣ ನನ್ನದು. ತಪ್ಪು ಮಾಡುವುದಿಲ್ಲ. ಮಾಡಲು ಬಿಡುವುದಿಲ್ಲ. ಅಧಿಕಾರಕ್ಕಾಗಿ ಬಂದಿಲ್ಲ. ನೂರಾರು ಸಂಕಲ್ಪದೊಂದಿಗೆ ಬಂದಿದ್ದೇನೆ. ಬಂಟರ ಸಂಘದ ಭದ್ರ ಭವಿಷ್ಯ!**

ADVT.

# ಬಂಟರ ಸಂಘ ಬೆಂಗಳೂರು

ಚುನಾವಣೆ 2026-29

## ಅಧ್ಯಕ್ಷ ಸ್ಥಾನಕ್ಕೆ

# ಕಾಂತಿ ಶೆಟ್ಟಿ



ಒಗ್ಗಟ್ಟಿನ ಬಂಟ ಸಮುದಾಯ
ಶೈಕ್ಷಣಿಕ ಅಭಿವೃದ್ಧಿ | ಪಾರದರ್ಶಕ ಆಡಳಿತ
ಯುವ ಸಬಲೀಕರಣ | ಮಹಿಳಾ ಸಶಕ್ತೀಕರಣ
ಆರ್ಥಿಕ ಬಲವರ್ಧನೆ

**ಪ್ರಿಯ ಬಂಟರ ಸಂಘದ ಸದಸ್ಯರೇ,**
ಬಂಟರ ಸಂಘ ಬೆಂಗಳೂರು ಕೇವಲ ಒಂದು ಸಂಘವಲ್ಲ... ಇದು ಸಾವಿರಾರು ಕುಟುಂಬಗಳ ಭಾವನೆ, ಪರಂಪರೆ, ಸಾಧನೆ ಮತ್ತು ಭವಿಷ್ಯದ ಕನಸುಗಳ ಪ್ರತೀಕ. ಹಿರಿಯರ ಮಾರ್ಗದರ್ಶನ, ಯುವಕರ ಉತ್ಸಾಹ, ಮಹಿಳೆಯರ ಪಾಲ್ಗೊಳ್ಳುವಿಕೆ ಮತ್ತು ಸದಸ್ಯರ ವಿಶ್ವಾಸದ ಅಡಿಪಾಯದ ಮೇಲೆ ಬಂಟರ ಸಂಘವು ಬೆಳೆದು ನಿಂತಿದೆ. ಈ ಸಮೃದ್ಧ ಪರಂಪರೆಯನ್ನು ಮತ್ತಷ್ಟು ಬಲಪಡಿಸಿ, ಮುಂದಿನ ಪೀಳಿಗೆಗೆ ಇನ್ನಷ್ಟು ಶಕ್ತಿಶಾಲಿ ಸಂಘವನ್ನು ನೀಡುವುದು ನಮ್ಮೆಲ್ಲರ ಜವಾಬ್ದಾರಿ.

ಈ ನಿಟ್ಟಿನಲ್ಲಿ, ಬಂಟರ ಸಂಘ ಬೆಂಗಳೂರು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುತ್ತಿರುವ ನಾನು, ಸಂಘದ ಅಭಿವೃದ್ಧಿಗಾಗಿ ಸ್ಪಷ್ಟವಾದ ದೃಷ್ಟಿಕೋನ ಮತ್ತು ಕಾರ್ಯಯೋಜನೆಯೊಂದಿಗೆ ನಿಮ್ಮ ಮುಂದೆ ಬಂದಿದ್ದೇನೆ.

ಮೂಲತಃ ಶಿರ್ವ ನಡಿಬೆಟ್ಟಿನ ಕುಟುಂಬದವಳಾದ ನಾನು ಉಡುಪಿ ಜಿಲ್ಲೆಯ ಕಾರ್ಕಳದಲ್ಲಿ ಜನಿಸಿ, ಪದವಿವರೆಗಿನ ವಿದ್ಯಾಭ್ಯಾಸವನ್ನು ಹುಟ್ಟೂರಿನಲ್ಲಿ ಮುಗಿಸಿರುತ್ತೇನೆ. ಪ್ರಸಕ್ತ ಬೆಂಗಳೂರಿನಲ್ಲಿ 'ಏರ್ ಕಾಮ್ ಸೊಲ್ಯೂಷನ್ಸ್ ಪ್ರೈ. ಲಿ., ಟೆಲಿಕಾಂ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕಿಯಾಗಿ ಸ್ವಂತ ಉದ್ಯಮಿಯಾಗಿರುತ್ತೇನೆ.

9845038393
9945038393

COMPLETE UPDATES
Scan this QR to join my whatsapp channel

## ಸಂಘಟನಾ, ವೃತ್ತಿಪರ ಹಾಗೂ ಸಾರ್ವಜನಿಕ ಜೀವನದ ಅನುಭವ

1. **2000ರಿಂದ** ಏರ್‌ಕಾಮ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ **ವ್ಯವಸ್ಥಾಪಕ ನಿರ್ದೇಶಕರಾಗಿ** ಯಶಸ್ವಿಯಾಗಿ ಕಾರ್ಯನಿರ್ವಹಣೆ.
2. **2012ರಿಂದ** – ಸಮಾಜಮುಖಿ ಚಟುವಟಿಕೆಗಳಲ್ಲಿ ತೊಡಗಿರುವ **'ನಮ್ಮ ಕುಟೀರ'** ಸ್ವಯಂಸೇವಾ ಸಂಸ್ಥೆಯ **ಸಂಸ್ಥಾಪಕ ಟ್ರಸ್ಟಿಯಾಗಿ** ಸೇವೆ.
3. **2014–2016 – ಕಾರ್ಯಕಾರಿ ಸಮಿತಿ ಸದಸ್ಯೆ**" ಹಾಗೂ **ವಿವಾಹ ವೇದಿಕೆ ಸಮಿತಿ ಅಧ್ಯಕ್ಷೆ**, ಬಂಟರ ಸಂಘ ಬೆಂಗಳೂರು.
4. **2016–2018 – ಜೊತೆ ಕಾರ್ಯದರ್ಶಿಯಾಗಿ** ಸೇವೆ ಸಲ್ಲಿಸಿದ್ದು **ಸದಸ್ಯತ್ವ ಮತ್ತು ವೆಬ್‌ಸೈಟ್ ಸಮಿತಿಯ ಅಧ್ಯಕ್ಷೆಯಾಗಿ** ಸಂಘದ ವಿಸ್ತರಣೆ ಮತ್ತು ಆಧುನೀಕರಣಕ್ಕೆ ಕೊಡುಗೆ.
5. **2016–2019** – ಕನ್ನಡ ಸಾಹಿತ್ಯ ಪರಿಷತ್ ರಾಜ್ಯ ಸಮಿತಿಯ ಸಹ ಸಂಚಾಲಕಿ (ಉದ್ಯೋಗ ಮತ್ತು ಐಟಿ ವಿಭಾಗ).
6. **ತುಳುಕೂಟ ಬೆಂಗಳೂರು, ತುಳುವರೆಂಕುಲು ಸಂಸ್ಥೆ** ಹಾಗೂ **ಕರ್ನಾಟಕ ಟೆಲಿವಿಷನ್ ಅಸೋಸಿಯೇಷನ್**‌ನ ಅಜೀವ ಸದಸ್ಯೆ
7. **2019–2022 – ಕರ್ನಾಟಕ ರಾಜ್ಯ ತುಳು ಸಾಹಿತ್ಯ ಅಕಾಡೆಮಿಯ ಸದಸ್ಯೆಯಾಗಿ** ಭಾಷಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಕ್ರಿಯ ಪಾತ್ರ.
8. **2019–2022 – ಕೃಷ್ಣ ಕಾವೇರಿ ಸೊಸೈಟಿಯ ನಿರ್ದೇಶಕಿಯಾಗಿ** ಆಡಳಿತಾತ್ಮಕ ಮತ್ತು ಅಭಿವೃದ್ಧಿ ಕಾರ್ಯಗಳಲ್ಲಿ ಭಾಗವಹಣೆ.
9. **ಕಳೆದ 26 ವರ್ಷಗಳಿಂದ** ಬಂಟರ ಸಂಘ ಬೆಂಗಳೂರಿನ **ಸಕ್ರಿಯ ಸದಸ್ಯೆಯಾಗಿ**, ಸಂಘದ ವಿವಿಧ ಕಾರ್ಯಕ್ರಮಗಳು, ಯೋಜನೆಗಳು ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ನಿರಂತರ ಪಾಲ್ಗೊಳ್ಳುವಿಕೆ.
10. ವಿವಿಧ ಸಾಮಾಜಿಕ, ಸಾಂಸ್ಕೃತಿಕ ಮತ್ತು ವೃತ್ತಿಪರ ಸಂಘ-ಸಂಸ್ಥೆಗಳಲ್ಲಿ ಪದಾಧಿಕಾರಿಯಾಗಿ ಸೇವೆ ಸಲ್ಲಿಸಿರುವ ಸಮೃದ್ಧ ಅನುಭವ.
11. **2024–2026 – ಬಂಟರ ಸಂಘ ಬೆಂಗಳೂರು ಉಪಾಧ್ಯಕ್ಷೆಯಾಗಿ** ಸೇವೆ ಸಲ್ಲಿಸಿ ಮಹಿಳಾ ಸಬಲೀಕರಣ ಹಾಗೂ ಸಂಘಟನಾ ಅಭಿವೃದ್ಧಿಗೆ ವಿಶೇಷ ಕೊಡುಗೆ.
12. **ಭಾರತೀಯ ಜನತಾ ಪಕ್ಷದ ಅಧಿಕೃತ ವಕ್ತಾರೆಯಾಗಿ**, ಕಳೆದ ಹಲವು ವರ್ಷಗಳಲ್ಲಿ 1,800ಕ್ಕೂ ಹೆಚ್ಚು ಟಿವಿ ನೇರ ಚರ್ಚೆಗಳಲ್ಲಿ ಪಕ್ಷವನ್ನು ಪ್ರತಿನಿಧಿಸಿರುವ ಅನುಭವ, ಸಾರ್ವಜನಿಕ ವಿಚಾರಗಳಲ್ಲಿ ಸ್ಪಷ್ಟ ಅಭಿಪ್ರಾಯ ಮತ್ತು ಪರಿಣಾಮಕಾರಿ ಸಂವಹನ ಕೌಶಲ್ಯದ ಪ್ರತಿಬಿಂಬ.



**ಅನುಭವ**
ನನ್ನ ಅಡಿಪಾಯ
**ಪಾರದರ್ಶಕತೆ**
ನನ್ನ ಬಲ
**ದೂರದೃಷ್ಟಿ**
ನನ್ನ ದಿಕ್ಕು
**ಒಗ್ಗಟ್ಟಿನ ಬಂಟರ ಸಂಘದ ನಿರ್ಮಾಣವೇ ನನ್ನ ಗುರಿ**
**ಸ್ಪಷ್ಟ - ನೇರ ಪಾರದರ್ಶಕ ಆಡಳಿತದ ಪ್ರಖರ ಸಂಕಲ್ಪ**



## ಸಮಾಜ ಸೇವೆಗೆ ಸಂದ ಪ್ರಶಸ್ತಿಗಳು ಮತ್ತು ಗೌರವಗಳು

1. 2018 – ಆರ್ಯಭಟ ಅಂತಾರಾಷ್ಟ್ರೀಯ ಪ್ರಶಸ್ತಿ.
2. 2019 – ತುಳುನಾಡ ಸೌಗಂಧಿಕ ಪ್ರಶಸ್ತಿ.
3. 2020 – "ಕರೋನಾ ವಾರಿಯರ್ಸ್ ಆಫ್ ಇಂಡಿಯಾ" ಪ್ರಶಸ್ತಿ (ಅರಬ್ ದೇಶದ ಚೇಂಬರ್ ಆಫ್ ಕಾಮರ್ಸ್ ವತಿಯಿಂದ).
4. 2020 – ಸ್ವಸ್ತಿಶ್ರೀ ರಾಜ್ಯ ಪ್ರಶಸ್ತಿ.
5. 2021 – ನಾರಿ ಶಕ್ತಿ ಪ್ರಶಸ್ತಿ.
6. 2021 – ಸಮಾಜ ಸೇವಾ ರತ್ನ ಪ್ರಶಸ್ತಿ.
7. 2021-22 – ಮಹಿಳಾ ವಾರಿಯರ್ ಪ್ರಶಸ್ತಿ.
8. 2022 – ಸಾಮಾಜಿಕ ಸೇವಾ ಕ್ಷೇತ್ರದಲ್ಲಿನ ವಿಶೇಷ ಕೊಡುಗೆಗಾಗಿ ಇಂಡಿಯನ್ ಎಂಪೈರ್ ಯೂನಿವರ್ಸಿಟಿ ವತಿಯಿಂದ ಗೌರವ ಡಾಕ್ಟರೇಟ್.
9. 2023 – ಅಚೀವರ್ಸ್ ಆಫ್ ಬೆಂಗಳೂರು ಅವಾರ್ಡ್ (ಟೈಮ್ಸ್ ಗ್ರೂಪ್ ವತಿಯಿಂದ).
10. 2024 – ಬೆಂಗಳೂರು ರತ್ನ ಪ್ರಶಸ್ತಿ (ವಿಜಯವಾಣಿ ಸಮೂಹ ಸಂಸ್ಥೆಯಿಂದ).
11. 2024 – ಸಮಾಜ ಸೇವಾ ರತ್ನ ಪ್ರಶಸ್ತಿ (ಕನ್ನಡ ಫಿಲಂ ಚೇಂಬರ್ (ರಿ) ವತಿಯಿಂದ).
12. 2024 – ಶೌರ್ಯ ಶಕ್ತಿ ಕರ್ನಾಟಕ ಪ್ರಶಸ್ತಿ. (ಭಾರತೀಯ ಸೇನೆಯ ವತಿಯಿಂದ )
13. 2025 – ನಾರಿ ಶಕ್ತಿ ಪ್ರಶಸ್ತಿ.
14. 11 ಮಾರ್ಚ್ 2026 – ಸಮಾಜ ಸೇವಾ ರತ್ನ ಪ್ರಶಸ್ತಿ.
15. 28 ಮಾರ್ಚ್ 2026 – ಉದ್ಯೋಗ ಯೋಗದಾನ ಪುರಸ್ಕಾರ ಪ್ರಶಸ್ತಿ, ಖ್ಯಾತ ಚಲನಚಿತ್ರ ನಟಿ Shilpa Shetty ಅವರಿಂದ ಪ್ರದಾನ.
16. 29 ಮಾರ್ಚ್ 2026 – ಮಹಿಳಾ ರತ್ನ ಪ್ರಶಸ್ತಿ, ಮಾಜಿ ಲೋಕಾಯುಕ್ತ ಹಾಗೂ ನ್ಯಾಯಮೂರ್ತಿ N. Santosh Hegde ಅವರಿಂದ ಪ್ರದಾನ.
17. 2026 – ಮಧ್ಯ ಕರ್ನಾಟಕ ಮತ್ತು ಕರಾವಳಿ ಕರ್ನಾಟಕ ವಿಭಾಗದ "ಬೆಸ್ಟ್ ಲೀಡರ್ ಅವಾರ್ಡ್" (ಕರ್ನಾಟಕ ಟಿವಿ ವತಿಯಿಂದ).
18. 2026 – ಸೌತ್ ಇಂಡಿಯಾ ವುಮೆನ್ ಅಚೀವರ್ಸ್ ಅವಾರ್ಡ್

ADVT.

ಮನವಿ Please Elect

**ಬಂಟರ ಸಂಘ ಬೆಂಗಳೂರು**
**ಆಡಳಿತ ಮಂಡಳಿ ಚುನಾವಣೆ-2026-29**

# ಸಿಎ ಕಿಶೋರ್ ಶೆಟ್ಟಿ
ಚಾರ್ಟರ್ಡ್ ಅಕೌಂಟಂಟ್

# CA Kishor Shetty
Chartered Accountant



ಕ್ರಮ ಸಂಖ್ಯೆ **7**

**ಆತ್ಮೀಯ ಸಮಾಜ ಬಾಂಧವರೇ,**

**ಬಂಟರ ಸಂಘ ಬೆಂಗಳೂರು** ಇದರ **ಆಡಳಿತ ಮಂಡಳಿ ಚುನಾವಣೆ** ದಿನಾಂಕ: 20-09-2026 ರಂದು ನಡೆಯಲಿದ್ದು ನಾನು **ಕಾರ್ಯಕಾರಿ ಸಮಿತಿ ಸ್ಥಾನಕ್ಕೆ** ಆಯ್ಕೆ ಬಯಸಿ ನಿಮ್ಮೆಲ್ಲರ ಆಶೀರ್ವಾದವನ್ನು ಕೋರುತ್ತಿದ್ದೇನೆ.

## ಕುಟುಂಬದ ಕಿರುಪರಿಚಯ

ತಂದೆ : ದಿ|| ಚಂದ್ರಶೇಖರ ಶೆಟ್ಟಿ (ಹುಬ್ಬಳ್ಳಿ) ಮಾನಂಬಳ್ಳಿ ಬಣಸಾಲೆಮನೆ
ತಾಯಿ : ದಿ|| ಹೇಮಲತಾ ಶೆಟ್ಟಿ-ವಂಡಾರು ತೆಂಕಬೆಟ್ಟು
ಮಾವ : ಸತೀಶ್ ಶೆಟ್ಟಿ ಸುಣ್ಣಾರಿ (ಹುಣ್ಣ್ಸಮಕ್ಕಿ)
ಅತ್ತೆ : ಉಷಾ ಶೆಟ್ಟಿ - ಶೀರೂರು ಕಲ್ಮನೆ
ಪತ್ನಿ : ಶಿಫಾಲಿ ಶೆಟ್ಟಿ (B.E, M.Tech)
ಮಕ್ಕಳು : ಈಶಿತಾ ಮತ್ತು ನೆಕ್ಸಾ

## ಶೈಕ್ಷಣಿಕ ಹಿನ್ನೆಲೆ

ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಿಂದ B.Com ಪದವಿ, Institute of Chartered Accountants of India (CA) ಪದವಿ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದಲ್ಲಿ L.L.B (Law) ಪದವಿ, ಹಾಗೂ Institute of Company Secretaries of India (CS) ಪರೀಕ್ಷೆಯಲ್ಲಿ ಉತ್ತೀರ್ಣನಾಗಿರುತ್ತೇನೆ.

## ವೃತ್ತಿ ಅನುಭವ

ನಾನು ಕಳೆದ ಹದಿನೈದು ವರ್ಷಗಳಿಂದ Income Tax, GST, Companies Act, Real Estate, Auditing and Accounting ವಿಷಯಗಳಲ್ಲಿ ಅನುಭವವನ್ನು ಹೊಂದಿರುತ್ತೇನೆ. ಗೃಹಿಣಿಯರಿಗೆ, ವ್ಯವಹಾರಸ್ಥರಿಗೆ, ವೃತಿಪರರಿಗೆ Financial Literacy (ಹಣಕಾಸಿನ ಸಾಕ್ಷರತೆ) ಎಂಬ ಕಾರ್ಯಾಗಾರವನ್ನು ನಡೆಸಿಕೊಟ್ಟಿರುತ್ತೇನೆ. PUC, B.Com, MBA, M.Com ವಿದ್ಯಾಭ್ಯಾಸದಲ್ಲಿರುವ ಮಕ್ಕಳಿಗೆ Carrier Counseling (ವೃತ್ತಿ ಸಮಾಲೋಚನೆ) ನಿರಂತರವಾಗಿ ಮಾಡುತ್ತಾ ಬಂದಿರುತ್ತೇನೆ. ಪ್ರಸ್ತುತ ಪದ್ಮನಾಭನಗರ, ಬೆಂಗಳೂರಿನಲ್ಲಿ ಚಾರ್ಟಡ್ ಅಕೌಂಟಂಟ್ ವೃತ್ತಿಯನ್ನು ಮಾಡುತ್ತಿದ್ದೇನೆ

## ಸಾಮಾಜಿಕ ಜೀವನ

- **ಬಂಟರ ಸಂಘ ಬೆಂಗಳೂರು**
  - « 2018-22 ಉಪ ಸಮಿತಿ ಮೆಂಬರ್
  - « 2022-24 ಕಾರ್ಯಕಾರಿ ಸಮಿತಿ ಯುತ್‌ವಿಂಗ್ ಚೇರ್‌ಪರ್ಸನ್
  - « 2022-24 ಆರ್.ಟಿ.ಬಿ, ಮಿನಿ ಹಾಲ್ ಬುಕ್ಕಿಂಗ್ ಪ್ರೊಸೆಸ್ಸ್ ಡಿಜಿಟಲೈಜೆಷನ್, ಆರ್.ಟಿ.ಬಿ ರೆವಿನ್ಯೂ ಅಡಿಟ್
  - « 2022-24 ಎನ್‌ಕ್ವೈರಿ ಕಮಿಟಿ ಮೆಂಬರ್
  - « 2022-24 ಫಿನಾನ್ಸ್ ಕಮಿಟಿ ಮೆಂಬರ್
  - « 2024-26 ಫಿನಾನ್ಸ್ ಕಮಿಟಿ ಮೆಂಬರ್
- Past President of BNI Quenton Chapter
- **ಕರ್ನಾಟಕ ರಾಜ್ಯ ಲೆಕ್ಕಿಗರ ಸಂಘ**
  - « ಸಾಂಸ್ಕೃತಿಕ ಸಮಿತಿ
  - « ಕಾರ್ಪೋರೆಟ್ ಲಾ ಸಮಿತಿ
  - « ಪ್ರಸರಣಾ ಸಮಿತಿ
  - « ಕ್ರೀಡಾ ಸಮಿತಿ
  - « ಕೌಶಲ್ಯ ಅಭಿವೃದ್ಧಿ ಸಮಿತಿ
  - « ಆದಾಯ ತೆರಿಗೆ ಸಮಿತಿ




| ಕ್ರಮ ಸಂಖ್ಯೆ | ಭಾವಚಿತ್ರ | ಹೆಸರು | |
|---|---|---|---|
| 7 |  | ಸಿಎ ಕಿಶೋರ್ ಶೆಟ್ಟಿ CA Kishor Shetty |  |



"ಬನ್ನಿ ಮತದಾನ ಮಾಡಿ, ದೂರದೃಷ್ಟಿ ಚಿಂತನೆಯ ಪ್ರಮಾಣಿಕ, ಸೇವಾಕಾಂಕ್ಷಿಯೊಬ್ಬ ಆಯ್ಕೆಯಾದರೆ ಅದು ನಾವು **ಬಂಟರ ಸಂಘಕ್ಕೆ** ಮಾಡುವ ಅತ್ಯಮೂಲ್ಯ ಸೇವೆಗಳಲ್ಲಿ ಒಂದೆನಿಸುತ್ತದೆ".

ಮೊಬೈಲ್
**97390 77064**

**ಸಮುದಾಯದ ಅಭಿವೃದ್ಧಿಗಾಗಿ ಸಮಗ್ರ ತಂಡದ ಆಯ್ಕೆ**
**TEAM - Dr. DEEPAK SHETTY**

ADVT.


ಸಮುದಾಯ ಬಾಂಧವರಲ್ಲಿ ಪ್ರೀತಿಯ ವಿಜ್ಞಾಪನೆಗಳು.
ಬೆಂಗಳೂರು ಬಂಟರ ಸಂಘದ 2026-2029 ಆಡಳಿತ ಮಂಡಳಿಗೆ ನಡೆಯಲಿರುವ ಚುನಾವಣೆಯಲ್ಲಿ
ನಾನು ಕಾರ್ಯಕಾರಿ ಸಮಿತಿ
(Executive Committee) ಸದಸ್ಯ ಸ್ಥಾನಕ್ಕೆ ಸ್ಪರ್ಧಿಸುತಿದ್ದೇನೆ.
ನಿಮ್ಮ ಅಮೂಲ್ಯವಾದ ಮತವನ್ನು ನನಗೆ ನೀಡಿ ಆಶೀರ್ವದಿಸಿ ಸಂಘದ ಸೇವೆಗೆ ಅವಕಾಶ ಮಾಡಿಕೊಡಬೇಕಾಗಿ ವಿನಮ್ರವಾಗಿ ಪ್ರಾರ್ಥಿಸಿಕೊಳ್ಳುತೇನೆ.
TEAM
Dr. DEEPAK SHETTY
ಇದು ನಿಮ್ಮ ಟೀಮ್!
ಪರಿಚಯ:
ತಂದೆ: ಜೆ ರತ್ನಾಕರ ಶೆಟ್ಟಿ , ನಿವೃತ್ತ ಮುಖ್ಯೋಪಾಧ್ಯಾಯರು ಅರೆಶಿರೂರು, ಜನ್ಮನೆ.
ತಾಯಿ: ಮಾಲತಿ R ಶೆಟ್ಟಿ , ತಗ್ಗರ್ಸೆ ಕಂಠದಮನೆ
ಪತ್ನಿ: ಪೂರ್ವ ಶೆಟ್ಟಿ , ಕಟ್ಕೇರಿ (VP Wellsfargo)
ಮಗಳು: ರಾಧ್ಯಾ N ಶೆಟ್ಟಿ
ಶಿಕ್ಷಣ ಮತ್ತು ಉದ್ಯೋಗ :
• ನಾನು ಹಣಕಾಸು (Finance) ವಿಷಯದಲ್ಲಿ MBA ಮಾಡಿದ್ದೇನೆ.
• Corporate Finance ಮತ್ತು Global Treasury ವಿಷಯದಲ್ಲಿ 18 ವರ್ಷಗಳಿಗೂ ಹೆಚ್ಚಿನ ವೃತ್ತಿಪರ ಅನುಭವ.
• Accenture ಮತ್ತು Pricewaterhouse Coopers (PWC) ಸೇರಿದಂತೆ ಪ್ರಮುಖ ಬಹುರಾಷ್ಟ್ರೀಯ ಕಂಪನಿಗಳಲ್ಲಿ (MNCs) ಕೆಲಸ ಮಾಡಿದ ಅನುಭವ.
• ಪ್ರಸ್ತುತ Celeros Flow Technology ಸಂಸ್ಥೆಯಲ್ಲಿ Global Treasury Director ಆಗಿ ಕಾರ್ಯನಿರ್ವಹಿಸುತ್ತಿದ್ದೇನೆ.
ಬಂಟರ ಸಂಘದಲ್ಲಿ ಭಾಗವಹಿಸುವಿಕೆ ಮತ್ತು ಕೊಡುಗೆ :
• ಕಳೆದ 12 ವರ್ಷಗಳಿಂದ ಬಂಟರ ಸಂಘದ ಸಕ್ರಿಯ ಸದಸ್ಯನಾಗಿದ್ದೇನೆ.
• ವಾರ್ಷಿಕ ಕ್ರೀಡಾಕೂಟಗಳನ್ನು ಆಯೋಜಿಸುವ ಮೂಲಕ ಕ್ರೀಡಾ ಸಮಿತಿಯ ಸದಸ್ಯರಾಗಿ 8 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದೇನೆ.
• 2022 ರಿಂದ 2024 ರವರೆಗೆ ಕ್ರೀಡಾ ಸಮಿತಿಯ ಸಂಚಾಲಕರಾಗಿ ಸೇವೆ ಸಲ್ಲಿಸಿದ್ದೇನೆ ಹಾಗು ಈ ಅವಧಿಯಲ್ಲಿ ಎಲ್ಲಾ ಕ್ರೀಡಾ ಚಟುವಟಿಕೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ.
"ಬಂಟ ಸಮಾಜದ ಅಭಿವೃದ್ಧಿಗೆ ನಿಮ್ಮ ಅಮೂಲ್ಯ ಮತ ನೀಡಿ."
Sr. No. 9
ನಿತ್ಯರಂಜನ್ ಶೆಟ್ಟಿ
ಕಾರ್ಯಕಾರಿ ಸಮಿತಿ ಸದಸ್ಯ ಅಭ್ಯರ್ಥಿ
ಕ್ರಮ ಸಂಖ್ಯೆ
ಹೆಸರು
ಭಾವಚಿತ್ರ
9
ನಿತ್ಯರಂಜನ್ ಶೆಟ್ಟಿ
Nithyaranjan Shetty
ADVT.


ಮನವಿ Please Elect
ಬಂಟರ ಸಂಘ ಬೆಂಗಳೂರು
ಆಡಳಿತ ಮಂಡಳಿ ಚುನಾವಣೆ-2026-29
ಪ್ರಸಾದ್ ಕುಮಾರ್ ಶೆಟ್ಟಿ
Prasad Kumar Shetty
ಕ್ರಮಸಂಖ್ಯೆ 10
TEAM
Dr. DEEPAK SHETTY
ಇದು ನಿಮ್ಮ ಟೀಮ್!
ಆತ್ಮೀಯ ಸಮಾಜ ಬಾಂಧವರೇ,
ಬಂಟರ ಸಂಘ ಬೆಂಗಳೂರು ಇದರ ಆಡಳಿತ ಮಂಡಳಿ ಚುನಾವಣೆ ದಿನಾಂಕ: 20-09-2026 ರಂದು ನಡೆಯಲಿದ್ದು ನಾನು ಕಾರ್ಯಕಾರಿ ಸಮಿತಿ ಸ್ಥಾನಕ್ಕೆ ಆಯ್ಕೆ ಬಯಸಿ ನಿಮ್ಮೆಲ್ಲರ ಆಶೀರ್ವಾದವನ್ನು ಕೋರುತ್ತಿದ್ದೇನೆ.
ಕುಟುಂಬದ ಕಿರುಪರಿಚಯ
ತಂದೆ : ದಿ|| ಚಂದ್ರಶೇಖರ ಶೆಟ್ಟಿ, ಚೋನಾಳಿ, ಸಿದ್ದಾಪುರ
ತಾಯಿ : ದಿ|| ಸುಶೀಲಾ ಶೆಟ್ಟಿ, ವಂಡಾರು ತೆಂಕಬೆಟ್ಟು
ಮಾವ : ದಿ|| ರಾಮಣ್ಣ ಶೆಟ್ಟಿ, ಮುಂದಾಡಿ ತೆಂಕಬೆಟ್ಟು
ಅತ್ತೆ : ದಿ|| ಸುಶೀಲಾ ಆರ್ ಶೆಟ್ಟಿ, ಗಿಳಿಯಾರು ಬಡಾಮನೆ
ಪತ್ನಿ : ಜಯಶ್ರೀ ಪಿ ಶೆಟ್ಟಿ, ಗಿಳಿಯಾರು ಬಡಾಮನೆ
ಮಕ್ಕಳು: ಗಗನ್‌ದೀಪ್ ಶೆಟ್ಟಿ (B.E), ಭುವನ್‌ದೀಪ್ ಶೆಟ್ಟಿ (Persuing MBBS)
ಶೈಕ್ಷಣಿಕ ಹಿನ್ನೆಲೆ
SSLC & PUC
ನ್ಯಾಷನಲ್ ಜೂನಿಯರ್ ಕಾಲೇಜ್, ಬಾರ್ಕೂರು
B.Com - ಮಂಗಳೂರು ಯೂನಿವರ್ಸಿಟಿ
ಎಸ್.ಎಂ.ಎಸ್. ಕಾಲೇಜ್, ಬ್ರಹ್ಮಾವರ
ವೃತ್ತಿ ಅನುಭವ
ಕಳೆದ ಎರಡುವರೆ ದಶಕಗಳಿಂದ ಬೆಂಗಳೂರಿನ ಸುಂಕದಕಟ್ಟೆಯಲ್ಲಿ ಸ್ವಂತ ಉದ್ದಿಮೆಯನ್ನು ಮಾಡಿಕೊಂಡು ಬಂದಿರುತ್ತೇನೆ.
ಸಾಮಾಜಿಕ ಜೀವನ
• ಬಂಟರ ಸಂಘ ಬೆಂಗಳೂರು
« ಉಪ ಸಮಿತಿ ಮೆಂಬರ್ « ಕಲ್ಚರಲ್ ಕಮಿಟಿ
« ಎಂಪ್ಲಾಯ್‌ಮೆಂಟ್ ಸೆಲ್ « 2024-26 ಪ್ರಾರ್ಥನಾ ಮಂದಿರದ ಸಂಚಾಲಕರು
ಸಂಘದ ಅಭಿವೃದ್ಧಿಯಲ್ಲಿ ಯುವಜನರ ಸಬಲೀಕರಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಕ್ರೀಯವಾಗಿ ಭಾಗವಹಿಸಿರುತ್ತೇನೆ.
ಸಂಘದ ಎಲ್ಲಾ ಸದಸ್ಯರ ಅಭಿಪ್ರಾಯ ಮತ್ತು ಅಭಿವೃದ್ಧಿಗೆ ಅಧ್ಯತೆ ನೀಡಿ ನಿಷ್ಠೇಯಿಂದ ಕಾರ್ಯನಿರ್ವಹಿಸುತ್ತೇನೆ.
ಕ್ರಮ ಸಂಖ್ಯೆ
ಭಾವಚಿತ್ರ
ಹೆಸರು
10
ಪ್ರಸಾದ್ ಕುಮಾರ್ ಶೆಟ್ಟಿ
VOTE
"ಬನ್ನಿ ಮತದಾನ ಮಾಡಿ, ದೂರದೃಷ್ಟಿ ಚಿಂತನೆಯ ಪ್ರಮಾಣಿಕ, ಸೇವಾಕಾಂಕ್ಷಿಯೊಬ್ಬ ಆಯ್ಕೆಯಾದರೆ ಅದು ನಾವು ಬಂಟರ ಸಂಘಕ್ಕೆ ಮಾಡುವ ಅತ್ಯಮೂಲ್ಯ ಸೇವೆಗಳಲ್ಲಿ ಒಂದೆನಿಸುತ್ತದೆ".
ಮೊಬೈಲ್ 9845720219
ಸಮುದಾಯದ ಅಭಿವೃದ್ಧಿಗಾಗಿ ಸಮಗ್ರ ತಂಡದ ಆಯ್ಕೆ TEAM - Dr. DEEPAK SHETTY
ADVT.

TEAM
Dr. DEEPAK SHETTY

# ಬಂಟರ ಸಂಘ, ಬೆಂಗಳೂರು | ಚುನಾವಣೆ 2026-29

ಸಂಘದ ವಿವಿಧ ಜವಾಬ್ದಾರಿಗಳನ್ನು ನಿಷ್ಠೆಯಿಂದ ನಿರ್ವಹಿಸಿ, ವಿಶೇಷವಾಗಿ ವೈದ್ಯಕೀಯ ಸಮಿತಿಯ ಅಧ್ಯಕ್ಷರಾಗಿ ಸಮಾಜಮುಖಿ ಸೇವೆಗೆ ನ್ಯಾಯ ಸಲ್ಲಿಸಿದ ಆತ್ಮತೃಪ್ತಿಯೊಂದಿಗೆ, ಮತ್ತಷ್ಟು ಸೇವೆ ಮಾಡುವ ಉತ್ಸಾಹದಿಂದ ನಿಮ್ಮ ಮುಂದೆ ನಿಂತಿದ್ದೇನೆ. ನಿಮ್ಮ ಅಮೂಲ್ಯ ಮತ ಮತ್ತು ಬೆಂಬಲವನ್ನು ನನಗೆ ನೀಡಿ ಹೆಚ್ಚಿನ ಅಂತರದಿಂದ ಗೆಲ್ಲಿಸಬೇಕಾಗಿ ವಿನಂತಿ.

- ಶ್ರೀ ಪ್ರಶಾಂತ ಶೆಟ್ಟಿ

ಕಾರ್ಯಕಾರಿ ಸದಸ್ಯ ಸ್ಥಾನದ ಅಭ್ಯರ್ಥಿ



**ಶ್ರೀ ಪ್ರಶಾಂತ ಶೆಟ್ಟಿ**

+91 91641 48290

**11**
ಕ್ರ.ಸಂ

## ಕಿರು ಪರಿಚಯ

ಜನ್ಮಸ್ಥಳ: ಮಂದಾರ್ತಿ, ಶಿರೂರು ಅಂತರ್ಸ್ ಮನೆ.
ತಂದೆ: ಬಿ. ರಾಮಣ್ಣ ಶೆಟ್ಟಿ , ಬೇಳೂರು ಕೋಣಬಗೆ
ಪತ್ನಿ: ಶೈಲಜಾ. ಪಿ. ಶೆಟ್ಟಿ, ತಡೆಕಲ್ಲು, ನೀಲವಾರ
ಶಿಕ್ಷಣ: ಮೈಕ್ರೋಬಯಾಲಜಿ - ಎಂ.ಇ.ಎಸ್. ಕಾಲೇಜು, ಬೆಂಗಳೂರು
ಉದ್ಯೋಗ: ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸೇವೆ

**ಸಂಘದ ಸೇವಾ ಪಯಣ**

- 2004 - ಯುವ ವಿಭಾಗದ ಜಂಟಿ ಕಾರ್ಯದರ್ಶಿ
- 2008-10 - ಉದ್ಯೋಗ ಸಮಿತಿ ಸಂಚಾಲಕ
- 2016- 18 - ವೈದ್ಯಕೀಯ ಸಮಿತಿ ಸಂಚಾಲಕ
- ಪ್ರಸಕ್ತ - ಕಾರ್ಯಕಾರಿ ಸಮಿತಿಯ ಸದಸ್ಯ ಹಾಗೂ ವೈದ್ಯಕೀಯ ಸಮಿತಿ ಅಧ್ಯಕ್ಷ

ADVT.

# ಬಂಟರ ಸಂಘದ ಚುನಾವಣೆ 2026-2029

**ಆತ್ಮೀಯ ಸಜ್ಜನ ಸಮಾಜ ಬಾಂಧವರೇ,**

ದಿನಾಂಕ 20-09-2026 ರ ಭಾನುವಾರ ನಡೆಯಲಿರುವ ಬೆಂಗಳೂರು ಬಂಟರ ಸಂಘದ ಚುನಾವಣೆಯಲ್ಲಿ ನಾನು **ಕಾರ್ಯಕಾರಿ ಸಮಿತಿ**ಗೆ ಸ್ಪರ್ಧಿಸುತ್ತಿದ್ದೇನೆ. ನಾನು ಹಡಾಳಿ ಹೆಬ್ಬಾಗಿಲು ಮನೆ ಗಿರಿಜಾ ಬಿ ಶೆಟ್ಟಿ ಮತ್ತು ಮಂಡಳ್ಳಿ ದೊಡ್ಡಮನೆ ಶ್ರೀಯುತ ಕೆ.ಬಿ. ಶೆಟ್ಟಿ ಕೈಯಾಣಿ ಇವರ ಮಗನಾಗಿ, ಕುಕ್ಕೆಹಳ್ಳಿ ಸಣ್ಣಬೀಡು ಶ್ರೀಯುತ ಸದಾನಂದ ಹೆಗ್ಡೆ ಹಾಗೂ ಪುತ್ತೂರು ದೊಡ್ಡಮನೆ ಯಶೋಧ ಹೆಗ್ಡೆಯವರ ಮಗಳಾದ ಸುನೀತಾ ಇವರನ್ನು ವಿವಾಹವಾಗಿ ಬೆಂಗಳೂರಿನ ನಾಗರಬಾವಿಯಲ್ಲಿ ವಾಸಿಸುತ್ತಿದ್ದೇನೆ.

ಬೆಂಗಳೂರಿನ ಪಟ್ಟೇಗಾರಪಾಳ್ಯ ದಲ್ಲಿರುವ **"ಕಿಚನ್ ಕ್ರಾಫ್ಟ್ಸ್"** ಎಂಬ ಉದ್ಯಮವನ್ನು ನಡೆಸುತ್ತಿರುತ್ತೇನೆ. ಪ್ರಾಥಮಿಕ ಹಾಗೂ ಫ್ರೌಢ ಶಿಕ್ಷಣ ವನ್ನು ನೆಲ್ಲಿಕಟ್ಟೆ ಮತ್ತು ಅಂಪಾರು ಹಾಗೂ ಪದವಿ ಶಿಕ್ಷಣವನ್ನು ಶ್ರೀ ಶಾರದಾ ಕಾಲೇಜು ಬಸ್ರೂರು ಇಲ್ಲಿ ಮುಗಿಸಿರುತ್ತೇನೆ. ಹಾಗೆಯೇ ನನ್ನ ಕಾಲೇಜು ದಿನಗಳಲ್ಲಿ ವಿದ್ಯಾರ್ಥಿ ಸಂಘದ ಅಧ್ಯಕ್ಷನಾಗಿ, ಮಂಗಳೂರು ವಿಶ್ವವಿದ್ಯಾನಿಲಯದ ಸರ್ವಕಾಲೇಜು ವಿದ್ಯಾರ್ಥಿ ಸಂಘದ ಉಪಾಧ್ಯಕ್ಷನಾಗಿ, ರಾಷ್ಟ್ರೀಯ ಸೇವಾ ಯೋಜನೆಯ (ಎನ್. ಎಸ್. ಎಸ್.) ಅಧ್ಯಕ್ಷನಾಗಿಯೂ, ಮಂಗಳೂರು ವಿಶ್ವವಿದ್ಯಾನಿಲಯ ಹಮ್ಮಿಕೊಂಡ ಏಡ್ಸ್ ಜನಜಾಗೃತ ಆಂದೋಲನದ ಮುಖ್ಯ ಪ್ರಚಾರಕರಾಗಿ ಸೇವೆ ಸಲ್ಲಿಸಿರುತ್ತೇನೆ.

ಹಾಗೆಯೇ ಸುಮಾರು 25 ವರ್ಷಗಳಿಂದ ಬಂಟರ ಸಂಘದ ಸದಸ್ಯನಾಗಿ ಹಲವಾರು ಉಪಸಮಿತಿಯ ಸದಸ್ಯನಾಗಿ ಸಂಘದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿರುತ್ತೇನೆ. 2024-26 ಸಾಲಿನ ಕ್ರೀಡಾಸಮಿತಿಯ ಚೇರ್‌ಪರ್ಸನ್ ಆಗಿದ್ದು, ತುಂಬಾ ಅಚ್ಚುಕಟ್ಟಾಗಿ ಕಾರ್ಯವನ್ನು ನಿರ್ವಹಿಸಿದ್ದೇನೆ ಎನ್ನುವ ತೃಪ್ತಿ ಇದೆ. ಇದರೊಂದಿಗೆ ಕೃಷಿಕನಾಗಿಯೂ ಕೃಷಿ ಕ್ಷೇತ್ರದಲ್ಲಿ ಆಸಕ್ತಿ ಹೊಂದಿದವನಾಗಿದ್ದೇನೆ. ನನ್ನ ಅನುಭವ ಹಾಗೂ ಅರ್ಹತೆಯ ಇತಿಮಿತಿಗಳನ್ನರಿತು ಸಂಘದ ಘನತೆ ಗೌರವ ಹಾಗೂ ದಾನಿಗಳ ಶ್ರಮಕ್ಕೆ ಯಾವುದೇ ಚ್ಯುತಿ ಬರದಂತೆ ಸಂಘದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುವ ಹಂಬಲದಿಂದ ತಮ್ಮೆಲ್ಲರ ಆಶೀರ್ವಾದ ಬಯಸುತ್ತೇನೆ.

ಇಂತೀ ನಿಮ್ಮ ಸೇವಾಕಾಂಕ್ಷಿ
**ಸುರೇಂದ್ರ ಶೆಟ್ಟಿ ಹೆಚ್**

Ph. : 9620386172



ಸಮುದಾಯದ ಅಭಿವೃದ್ಧಿಗಾಗಿ ಸಮಗ್ರ ತಂಡದ ಆಯ್ಕೆ

**SURENDRA SHETTY H**
**ಸುರೇಂದ್ರ ಶೆಟ್ಟಿ ಹೆಚ್**
ಸದಸ್ಯತ್ವ ಸಂಖ್ಯೆ : CL004308
ಕಾರ್ಯಕಾರಿ ಸಮಿತಿ ಸದಸ್ಯ ಸ್ಥಾನ

ಕ್ರಮ ಸಂಖ್ಯೆ
**15**

TEAM
Dr. DEEPAK SHETTY

ADVT.

# ಬಂಟರ ಸಂಘ ಬೆಂಗಳೂರು

## ಚುನಾವಣೆ - 2026-29

### ಕಾರ್ಯಕಾರಿ ಸಮಿತಿ ಸದಸ್ಯ ಸ್ಥಾನಕ್ಕೆ ಅಭ್ಯರ್ಥಿ

S.L NO:
**12**

20 SEP 2026
SUNDAY
9:00 AM - 5:00 PM

**ನಮಸ್ಕಾರ,**

ಮೂಲತಃ ಉಡುಪಿ ಜಿಲ್ಲೆ, ಬೈಂದೂರು ತಾಲೂಕಿನ ದೇವಲ್ಕುಂದ ನನ್ನ ಹುಟ್ಟೂರು. ನಾನು ಗಿಳಿಯಾರು ಬಡಮನೆ ಕಾಳಪ್ಪ ಶೆಟ್ಟಿ ಹಾಗೂ ಕೆಂಚನೂರು ಅಂಗಡಿ ಮನೆ ಪುಟ್ಟಯ್ಯ ಶೆಟ್ಟಿ ರವರ ಮೊಮ್ಮಗ, ಹಾಗೂ ದೇವಲ್ಕುಂದ ಕಂಬಳಗದ್ದೆ ಮನೆ ಕುಶಾಲ್ ಶೆಟ್ಟಿ ಮತ್ತು ದೇವಲ್ಕುಂದ ಬಾಗಲಾಡಿ ಮನೆ ರುದ್ರಮ್ಮ ಶೆಟ್ಟಿ ರವರ ಮಗ.

ನನ್ನ ಹುಟ್ಟೂರಿನಲ್ಲಿ ವಿದ್ಯಾಭ್ಯಾಸ ಮುಗಿಸಿ, ಬೆಂಗಳೂರಿನಲ್ಲಿ ನನ್ನ ಆಶ್ರಯ ಮತ್ತು ಬದುಕನ್ನು ಕಟ್ಟಿಕೊಂಡಿದ್ದೇನೆ. ಕಳೆದ 25 ವರ್ಷಗಳಿಂದ ಸಮಾಜ ಸೇವೆಯಲ್ಲಿ ಸಕ್ರಿಯನಾಗಿದ್ದು, ಬೆಂಗಳೂರಿನ ವಿವಿಧ ಭಾಗಗಳಲ್ಲಿ ಹೋಟೆಲ್ ಉದ್ಯಮಿಯಾಗಿ ನನ್ನದೇ ಆದ ಬದುಕನ್ನು ರೂಪಿಸಿಕೊಂಡಿದ್ದೇನೆ

ನಿಮ್ಮೆಲ್ಲರ ಪ್ರೀತಿ, ವಿಶ್ವಾಸ ಮತ್ತು ಆಶೀರ್ವಾದದಿಂದ ಬೆಂಗಳೂರು ಬಂಟರ ಸಂಘದ 2024-26 ರ ಚುನಾವಣೆಯಲ್ಲಿ ಕಾರ್ಯಕಾರಿ ಸಮಿತಿ ಸದಸ್ಯನಾಗಿ ಆಯ್ಕೆಯಾಗಿ, ಸೇವಾದಳ ಸಮಿತಿಯ ಚೇರ್‌ಪರ್ಸನ್ ಆಗಿ ಆ ಜವಾಬ್ದಾರಿಯನ್ನು ಪ್ರಾಮಾಣಿಕತೆ, ನಿಷ್ಠೆ ಮತ್ತು ಬದ್ಧತೆಯಿಂದ ನಿರ್ವಹಿಸಲು ಪ್ರಯತ್ನಿಸಿದ್ದೇನೆ.



ಸಂಘದ ಸದಸ್ಯರು ಅಥವಾ ಸಮುದಾಯದ ಯಾವುದೇ ವ್ಯಕ್ತಿ ನಿಧನ ಹೊಂದಿದಾಗ ಸ್ಥಳಕ್ಕೆ ಭೇಟಿ ನೀಡಿ ಅವರ ಕುಟುಂಬಕ್ಕೆ ಬೇಕಾದ ಸೌಲಭ್ಯಗಳನ್ನು ಒದಗಿಸಿದ್ದೇನೆ. ಅಪಘಾತ ಅಥವಾ ಸಹಜ ಸಾವಿನ ಸಂದರ್ಭದಲ್ಲಿಯೂ ನೂರಾರು ಮೃತದೇಹಗಳನ್ನು ಬೆಂಗಳೂರಿನಿಂದ ಅವರ ಹುಟ್ಟೂರಿಗೆ ನಾನೇ ಖುದ್ದಾಗಿ ಕುಟುಂಬಕ್ಕೆ ಹಸ್ತಾಂತರಿಸುವ ಸೇವೆಯನ್ನು ಮಾಡಿದ್ದೇನೆ.

ಬಂಟರ ಸಂಘದಲ್ಲಿ ಬಹುತೇಕ ಸದಸ್ಯರು ಹೋಟೆಲ್ ಮತ್ತು ಬೇಕರಿ-ಕಾಂಡಿಮೆಂಟ್ಸ್ ಉದ್ಯಮ ನಡೆಸುತ್ತಿರುವುದರಿಂದ, ಅವರಿಗೆ ಯಾವುದೇ ತೊಂದರೆ ಬಂದಾಗ ಸಹಾಯ ಮಾಡಲು ಕರ್ನಾಟಕ ರಾಜ್ಯ ಬೇಕರಿ, ಕಾಂಡಿಮೆಂಟ್ಸ್ ಮತ್ತು ಸಣ್ಣ ಉದ್ದಿಮೆದಾರರ ಒಕ್ಕೂಟವನ್ನು ರಚಿಸಿದ್ದೇನೆ.

ಕಳೆದ ವರ್ಷ ಸರ್ಕಾರ ಹೋಟೆಲ್, ಬೇಕರಿ ಮತ್ತು ಸಣ್ಣ ವ್ಯಾಪಾರಿಗಳಿಗೆ ವಿಧಿಸಿದ್ದ GST ಯನ್ನು ಸಂಪೂರ್ಣವಾಗಿ ಮನ್ನಾ ಮಾಡಲು ಹೋರಾಟ ನಡೆಸಿ, ನೀಡಲಾಗಿದ್ದ GST ನೋಟಿಸ್‌ಗಳನ್ನು ಹಿಂಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದ್ದೇನೆ. ಯಾರಿಗೇ ತೊಂದರೆ ಬಂದರೂ ಸಮಯವನ್ನು ಲೆಕ್ಕಿಸದೆ ಸ್ಥಳಕ್ಕೆ ಹೋಗಿ ಪರಿಶೀಲಿಸಿ, ಅವರಿಗೆ ನ್ಯಾಯ ಒದಗಿಸಿ ಸಮಸ್ಯೆ ಬಗೆಹರಿಸುತ್ತಾ ಬಂದಿದ್ದೇನೆ.

ಸೇವಾದಳ ಸಮಿತಿ ವತಿಯಿಂದ ಸಮುದಾಯದ ಮಹಿಳೆಯರು ಸ್ವಾವಲಂಬಿಗಳಾಗಿ ಬದುಕಲು ಹೊಲಿಗೆ ಯಂತ್ರಗಳನ್ನು ವಿತರಿಸಿದ್ದೇವೆ. ಹೋಟೆಲ್ ಮತ್ತು ಬೇಕರಿಗಳಲ್ಲಿ ಬೆಂಕಿ ಅವಘಡ ಸಂಭವಿಸಿ ನಷ್ಟವಾದಾಗ, ಮಾಲೀಕರಿಗೆ ನಷ್ಟ ಪರಿಹಾರ ಕೊಡಿಸುವಲ್ಲಿಯೂ ಸಹಾಯಹಸ್ತ ನೀಡಿದ್ದೇನೆ.

ಈಗಲೂ ಅದೇ ಸೇವಾ ಮನೋಭಾವದೊಂದಿಗೆ ಬಂಟರ ಸಂಘದ ಬೆಳವಣಿಗೆ ಮತ್ತು ಸಮುದಾಯದ ಸಮಗ್ರ ಅಭಿವೃದ್ಧಿಗಾಗಿ ಕೆಲಸ ಮಾಡುವ ಸಂಕಲ್ಪ ಹೊಂದಿದ್ದೇನೆ. ಯುವಜನರನ್ನು ಒಗ್ಗೂಡಿಸುವ ಕಾರ್ಯಕ್ರಮಗಳು ಹಾಗೂ ವಿವಿಧ ಸಂಘಟನಾ ಚಟುವಟಿಕೆಗಳನ್ನು ಯಶಸ್ವಿಯಾಗಿ ಆಯೋಜಿಸಿದ್ದೇನೆ.

ಸರಳತೆ, ನಿಷ್ಠೆ, ಪ್ರಾಮಾಣಿಕತೆ, ಸೇವಾ ಮನೋಭಾವ ಮತ್ತು ಎಲ್ಲರನ್ನು ಜೊತೆಯಾಗಿ ಕೊಂಡೊಯ್ಯುವ ಗುಣ ಹೊಂದಿರುವ ನಾನು, ಈ ಬಾರಿಯೂ ಸ್ವತಂತ್ರವಾಗಿ **ಬೆಂಗಳೂರು ಬಂಟರ ಸಂಘದ 2026-2029 ನೇ ಸಾಲಿನ ಕಾರ್ಯಕಾರಿ ಸಮಿತಿ ಸದಸ್ಯ ಸ್ಥಾನಕ್ಕೆ** ಸ್ಪರ್ಧಿಸುತ್ತಿದ್ದೇನೆ.

ವೈಯಕ್ತಿಕವಾಗಿ ನಿಮ್ಮೆಲ್ಲರನ್ನು ಭೇಟಿಯಾಗುವುದು ಕಷ್ಟಸಾಧ್ಯವಾದ್ದರಿಂದ, ಈ ಮನವಿಯನ್ನು ಪರಿಗಣಿಸಿ ನಿಮ್ಮ ಅಮೂಲ್ಯವಾದ **ಮತ, ಬೆಂಬಲ** ಮತ್ತು **ಆಶೀರ್ವಾದವನ್ನು** ವಿನಮ್ರವಾಗಿ ಕೋರುತ್ತೇನೆ.

ಇಂತಿ ನಿಮ್ಮ ವಿಶ್ವಾಸಿ,
**ಪ್ರತಾಪ್ ಶೆಟ್ಟಿ**
89046 42421

| ಕ್ರಮ ಸಂಖ್ಯೆ | ಹೆಸರು | ಭಾವಚಿತ್ರ | |
|---|---|---|---|
| 12 | ಪ್ರತಾಪ್ ಶೆಟ್ಟಿ<br>PRATHAP SHETTY |  |  |

**ಅಧಿಕ ಮತಗಳಿಂದ ಆಯ್ಕೆ ಮಾಡಿ**

ADVT.




ADVT.

## Auditorium Booking Status as on 31/8/2026

| Sl. No. | Booking Date | Prog. Date | Party Name | Booking Category Member / Non Member | Prog. Details |
|---|---|---|---|---|---|
| 1 | 05.08.2026 | 19.09.2026 | Telecom Employees Co-Op Housing Society Ltd | Non Member | Social service |
| 2 | 06.08.2026 | 30.08.2026 | Janahitha credit co-operative society ltd | Non Member | Social service |
| 3 | 10.08.2026 | 19.08.2026 | Ravindra Rai | Member | Uttarakriye |
| 4 | 10.08.2026 | 15.08.2026 | Kundapra Kannada Prathishtana Bangalore | Non Member | Coastal & Cultural |
| 5 | 12.08.2026 | 10.09.2026 | C Bhaskar Nayak | Non Member | Social service |
| 6 | 12.08.2026 | 18.08.2026 | Rajashekar Ganiger | Non Member | Social service |
| 7 | 25.08.2026 | 02.09.2026 | SIP Academy India Pvt. Ltd | Non Member | Social service |
| 8 | 27.08.2026 | 11.02.2027 | K Suresh Shetty | Member | Wedding Reception |
| 9 | 29.08.2026 | 09.09.2026 | Dr. Sukumar Shetty K | Member | Uttarakriye |
| 10 | 31.08.2026 | 21.11.2026 | Annapurna Education Trust | Non Member | Social service |
| 11 | 31.08.2026 | 19.12.2026 | Blue Bell Public School | Non Member | Social service |
| 12 | 31.08.2026 | 16.12.2026 | D Sudhamani | Non Member | Beegara oota |
| 13 | 31.08.2026 | 07.09.2026 | B L N Hegde | Member (Past President 2008-10) | Uttarakriye |

ಬಂಟರ ಸಂಘ ಬೆಂಗಳೂರು
BUNTS' SANGHA BANGALORE
ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ



# ಗಣೇಶ ಚತುರ್ಥಿ ಆಚರಣೆ

**ದಿನಾಂಕ: 14.09.2026 ಸೋಮವಾರ**

| | | |
|---|---|---|
| ಪೂರ್ವಾಹ್ನ 8.00 ಗಂಟೆಗೆ | : | ವಿಶೇಷ ಪಂಚಾಮೃತ ಅಭಿಷೇಕ |
| ಪೂರ್ವಾಹ್ನ 09.30 ಗಂಟೆಗೆ | : | ಸಂಘದ ಹಾಗೂ ಯಲಚಗುಪ್ಪೆ ಶಾಲೆಯ ಭಜನಾ ತರಗತಿಯ ಮಕ್ಕಳಿಂದ ಮತ್ತು ಭಜನಾ ತರಬೇತುದಾರರಿಂದ **ಭಜನಾ ಕಾರ್ಯಕ್ರಮ** |
| ಪೂರ್ವಾಹ್ನ 10.00 ಗಂಟೆಗೆ | : | ಗಣಪತಿ ಹೋಮ |
| ಪೂರ್ವಾಹ್ನ 10.30 ಗಂಟೆಗೆ | : | ಗಣಪತಿ ಪ್ರಾಣ ಪ್ರತಿಷ್ಠೆ, ಕಲ್ಪೋಕ್ತ ಪೂಜೆ |
| ಮಧ್ಯಾಹ್ನ 12.00 ಗಂಟೆಗೆ | : | ಮಹಾಮಂಗಳಾರತಿ ಮತ್ತು ಪ್ರಸಾದ ವಿತರಣೆ |
| ಮಧ್ಯಾಹ್ನ 1.00 ಗಂಟೆಗೆ | : | **ಅನ್ನ ಸಂತರ್ಪಣೆ** |
| ಮಧ್ಯಾಹ್ನ 2.00 ಗಂಟೆಗೆ | : | ಸಂಘದ ಯಕ್ಷಗಾನ ಸಮಿತಿಯ ವತಿಯಿಂದ ಸಂಘದ ಹವ್ಯಾಸಿ ಹಾಗೂ ಅತಿಥಿ ಕಲಾವಿದರಿಂದ **ಯಕ್ಷಗಾನ - ಗದಾಯುದ್ಧ** |
| ಸಂಜೆ 5.00 ಗಂಟೆಗೆ | : | ಸಂಘದ ಕುಣಿತ ಭಜನಾ ತರಗತಿಯ ಮಕ್ಕಳಿಂದ ಮತ್ತು ಭಜನಾ ತರಬೇತುದಾರರಿಂದ **ಕುಣಿತ ಭಜನೆ** |
| ಸಂಜೆ 6.30 ಗಂಟೆಗೆ | : | ಮಹಾಮಂಗಳಾರತಿ, ಪ್ರಸಾದ ವಿತರಣೆ ಮತ್ತು ಮೆರವಣಿಗೆಯೊಂದಿಗೆ ಗಣೇಶ ವಿಸರ್ಜನೆ |

ಈ ಎಲ್ಲಾ ಪೂಜಾಕಾರ್ಯಗಳಲ್ಲಿ ಭಕ್ತಾದಿಗಳು ತನು, ಮನ, ಧನ ಸಹಾಯದಿಂದ ಸಕುಟುಂಬ ಸಮೇತರಾಗಿ ಭಾಗವಹಿಸಿ ಶ್ರೀ ವರಸಿದ್ಧಿ ವಿನಾಯಕ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುತ್ತಾ ತಮಗೆ ಆದರದ ಸ್ವಾಗತವನ್ನು ಕೋರುವ

**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

**ಸಿ.ಎ. ಅಶೋಕ್ ಶೆಟ್ಟಿ ಎಂ.**
ಅಧ್ಯಕ್ಷರು

**ಶೋಭಾ ಶೇಖ**
ಚೇರ್‌ಪರ್ಸನ್, ಪ್ರಾರ್ಥನಾ ಮಂದಿರ ಸಮಿತಿ

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಪ್ರಾರ್ಥನಾ ಮಂದಿರ ಸಮಿತಿ ಸದಸ್ಯರು**

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : **ಶೋಭಾ ಶೇಖ, ಚೇರ್‌ಪರ್ಸನ್, ಪ್ರಾರ್ಥನಾ ಮಂದಿರ ಸಮಿತಿ. ಮೊ: 99018 85998**

ವಿ.ಸೂ: 'ಅಭಿಷೇಕ' ಮಾಡಿಸುವ ಭಕ್ತಾದಿಗಳು ರೂ. 151/-ನ್ನು, 'ಗಣಹೋಮ' ಮಾಡಿಸುವವರು ರೂ. 251/-ನ್ನು ಸಂಘದ ಕಛೇರಿ ಅಥವಾ ದೇವಸ್ಥಾನದಲ್ಲಿ ಪಾವತಿಸಿ ರಸೀದಿ ಪಡೆಯಬೇಕಾಗಿ ವಿನಂತಿ

# A Tryst with Destiny: My Char Dham Awakening


Dr. Naresh Shetty

**Some journeys are planned. Some are destined.**

The Char Dham Yatra had always been one of those distant dreams-something I hoped to do someday. This year, destiny called, and fourteen of us-family and friends-answered. We came from different walks of life, carrying different beliefs and expectations. Some among us were deeply religious, others quietly spiritual, and a few openly agnostic. Yet each of us carried an unspoken desire: to seek something beyond ourselves, to find meaning, forgiveness, gratitude, peace, or perhaps simply to feel the presence of the Divine.

The Himalayas welcomed us with their majestic beauty but also reminded us of their power. This was no ordinary holiday. The roads were daunting, the weather unpredictable, and the terrain often unforgiving. At times, fear travelled with us. Clouds would suddenly descend upon the mountains, helicopter schedules would change without notice, and every bend in the road seemed to remind us how small we truly are in the grand scheme of nature. Yet faith has a remarkable way of overcoming fear.

As we journeyed through Yamunotri, Gangotri, Kedarnath, and Badrinath, I realized that millions undertake this pilgrimage every year, despite the hardships. They come with hopes, prayers, gratitude, and burdens they wish to leave behind. Watching elderly pilgrims climb steep paths with unwavering determination was humbling. Their faith was stronger than any obstacle before them.

What made our journey special was not just the destinations but the companionship. Fourteen of us started together, but somewhere along the way, four strangers entered our story and became friends. Looking back, it felt less like coincidence and more like part of a larger divine plan. The mountains have a way of bringing people together, stripping away titles, achievements, and differences, leaving behind only our shared humanity. There were moments that words struggled to capture. Standing before Kedarnath, surrounded by towering snow-clad peaks, I felt a sense of insignificance and belonging at the same time. The sound of temple bells, the chants of pilgrims, the icy winds carrying centuries of faith-all combined into an experience that was deeply personal and profoundly moving.

I had embarked on this journey seeking the Divine in sacred shrines. Instead, I found traces of the Divine everywhere-in the kindness of strangers, in the laughter of friends, in the courage of fellow travellers, in the resilience of the human spirit, and in the silent grandeur of the mountains themselves.

The Char Dham Yatra taught me that faith is not the absence of fear. Faith is moving forward despite it. It is trusting when the path ahead is unclear. It is believing that there is a purpose even when we cannot see it. When we finally returned home, we were physically exhausted but spiritually renewed. We had travelled hundreds of kilometres through some of the most challenging terrain on earth, but the real journey had been inward. For me, Char Dham was never merely a pilgrimage. It became a journey of self-discovery, reflection, gratitude, and awakening. A reminder that the Divine is not always found at the destination; often, it reveals itself in the journey itself.

And as the memories of the Himalayas continue to linger, I know that a part of me still remains there-among the mountains, the rivers, the temples, and the faith of millions who continue to seek the unknown with hope in their hearts.

# Report on : Parent Orientation, Music Day & Father's Day Celebration

The Parent Orientation Programme, along with the Music Day and Father's Day celebrations, was held on 4th July 2026 from 8:30 a.m. to 12:30 p.m. The programme commenced with a grand welcome for the dignitaries. The Head Boys and Head Girls of the CBSE and ICSE wings, accompanied by the school band, warmly welcomed the distinguished chief guest, Shrimati Sivasri Skanda Prasad Tejasvi Surya, along with the management, Principal, and other heads of the institution.The event began with a graceful inaugural dance performed by the UKG and ICSE Primary students, followed by a soulful invocation song presented by the UKG students.




The UKG students then welcomed the chief guest and the members of the management. The Principal addressed the gathering and warmly welcomed the parents.The traditional lighting of the lamp ceremony marked the formal inauguration of the programme.

This was followed by the Parent Orientation session conducted by Mrs. Shilpa Ravikumar, Preprimary Coordinator who explained the school's vision, curriculum, and expectations for the academic year. The Convener and the Treasurer also addressed the gathering and shared valuable insights.




The chief guest then delivered an inspiring speech and delighted the audience by singing a beautiful song. She was later felicitated by the management as a token of gratitude and respect.The Teachers' Induction Programme was conducted by Mrs. Shilpa Ravikumar - Preprimary Coordinator.

Thereafter, the Music Day and Father's Day celebrations began. The UKG students presented a melodious songs for Music Day and performed a delightful dance dedicated to Father's Day.




The programme concluded with a heartfelt vote of thanks delivered by the UKG students.

The celebrations continued in the basement, where exciting Father's Day games were organized for the fathers. All the participants enthusiastically enjoyed the games. The winners were announced, and the Principal maam distributed prizes to them.



Refreshments were then served to all the parents.

The event concluded on a joyful note. It was a well-organized and memorable celebration that strengthened the bond between the school and parents while creating cherished memories for everyone present.




## ಸರ್ವ ಸದಸ್ಯರ ಗಮನಕ್ಕೆ :–

ಬಂಟರ ಸಂಘ ಬೆಂಗಳೂರು ವತಿಯಿಂದ "Bunts Sangha Bangalore" ಮೊಬೈಲ್ ಆ್ಯಪ್‌ನ್ನು ದಿನಾಂಕ 19.07.2026 ರಂದು ಅಧಿಕೃತವಾಗಿ ಬಿಡುಗಡೆ ಮಾಡಲಾಗಿದೆ. ಸಂಘದ ಎಲ್ಲಾ ಸದಸ್ಯರು ಈ ಮೊಬೈಲ್ ಆ್ಯಪ್‌ನ್ನು Google Play Store ಮೂಲಕ ಡೌನ್‌ಲೋಡ್ ಮಾಡಿಕೊಂಡು, ಇದರಲ್ಲಿರುವ ವಿವಿಧ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳುವಂತೆ ಈ ಮೂಲಕ ಮತ್ತೊಮ್ಮೆ ವಿನಮ್ರವಾಗಿ ವಿನಂತಿಸಿಕೊಳ್ಳುತ್ತೇವೆ.

ದಿನಾಂಕ 20.09.2026, ಭಾನುವಾರ ದಂದು ನಡೆಯಲಿರುವ ಚುನಾವಣೆಯ ಸಂದರ್ಭದಲ್ಲಿ, ಸದಸ್ಯತ್ವದ ಗುರುತಿನ ಚೀಟಿ (Membership Card) ಲಭ್ಯವಿಲ್ಲದ ಸದಸ್ಯರು ತಮ್ಮ ಮೊಬೈಲ್‌ನಲ್ಲಿ Bunts Sangha Bangalore Mobile App ಮೂಲಕ ತಮ್ಮ ಸದಸ್ಯತ್ವದ ವಿವರಗಳನ್ನು ನೀಡುವುದರೊಂದಿಗೆ ಮತದಾನ ಮಾಡಲು ಅನುಕೂಲವಾಗುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಸದಸ್ಯರ ಮಾಹಿತಿಯ ನವೀಕರಣ, ಸದಸ್ಯತ್ವದ ವಿವರಗಳ ವೀಕ್ಷಣೆ ಸೇರಿದಂತೆ ಸಂಘದ ವಿವಿಧ ಸೇವೆಗಳು ಹಾಗೂ ಮಾಹಿತಿಗಳನ್ನು ಸುಲಭವಾಗಿ ಪಡೆಯಲು ಈ ಮೊಬೈಲ್ ಆ್ಯಪ್ ಸಹಕಾರಿಯಾಗಲಿದೆ.

ಆದ್ದರಿಂದ, ಈ ಎಲ್ಲಾ ಸೌಲಭ್ಯಗಳನ್ನು ಮತ್ತು ಅನುಕೂಲಗಳನ್ನು ಗಮನದಲ್ಲಿಟ್ಟುಕೊಂಡು, ಬಂಟರ ಸಂಘದ ಪ್ರತಿಯೊಬ್ಬ ಸದಸ್ಯರೂ "Bunts Sangha Bangalore" ಮೊಬೈಲ್ ಆ್ಯಪ್‌ನ್ನು ಕಡ್ಡಾಯವಾಗಿ ಡೌನ್‌ಲೋಡ್ ಮಾಡಿಕೊಂಡು, ಸಕ್ರೀಯವಾಗಿ ಬಳಸುವಂತೆ ಈ ಮೂಲಕ ಆತ್ಮೀಯವಾಗಿ ವಿನಂತಿಸಿಕೊಳ್ಳುತ್ತೇವೆ.

ತಮ್ಮ ಸಹಕಾರ ಮತ್ತು ಸ್ಪಂದನೆಗೆ ಧನ್ಯವಾದಗಳು.

**ಸಹಿ/–**
**ಗೌರವ ಕಾರ್ಯದರ್ಶಿ**

# ಬಿ.ಎಸ್.ಆರ್.ಎನ್.ಎಸ್.ವಿ ಸ್ಪೋರ್ಟ್ಸ್ ಫೆಸ್ಟಿವಲ್: ಕ್ರಿಕೆಟ್ ಪಂದ್ಯಾವಳಿ ಯಶಸ್ವಿ ಸಮಾಪನ




ನಮ್ಮ ಶಾಲಾ ಅಂಗಳದಲ್ಲಿ ಇತ್ತೀಚೆಗೆ ಆಯೋಜಿಸಲಾಗಿದ್ದ ಬಹುನಿರೀಕ್ಷಿತ ಬಿ.ಎಸ್.ಆರ್.ಎನ್.ಎಸ್. ವಿದ್ಯಾನಿಕೇತನ II ಸ್ಪೋರ್ಟ್ಸ್ ಫೆಸ್ಟಿವಲ್ ಅಂತರ ಶಾಲಾ ಹಾಗೂ ಕಾಲೇಜುಗಳ ಕ್ರಿಕೆಟ್ ಪಂದ್ಯಾವಳಿಯು ಅತ್ಯಂತ ಸಂಭ್ರಮ ಮತ್ತು ಉತ್ಸಾಹದ ವಾತಾವರಣದಲ್ಲಿ ಯಶಸ್ವಿಯಾಗಿ ನೆರವೇರಿತು.

ಸಂಸ್ಥೆಯ ಆಡಳಿತ ಮಂಡಳಿಯವರ ಮಾರ್ಗದರ್ಶನ ಹಾಗೂ ಸಂಪೂರ್ಣ ಸಹಕಾರದೊಂದಿಗೆ, ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಅಜಿಲ್ ಅರಸಿಯವರು, ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ ಶೇಖರ್ ರೆಡ್ಡಿಯವರು, ದೈಹಿಕ ಶಿಕ್ಷಣ ಶಿಕ್ಷಕರಾದ ಶ್ರೀ ಮೋಹನ್‌ರವರು ಹಾಗೂ ಚಿತ್ರಕಲಾ ಶಿಕ್ಷಕರಾದ ಶ್ರೀ ಪ್ರಶಾಂತ್‌ರವರ ಕಲ್ಪನೆ ಮತ್ತು ಮಾರ್ಗದರ್ಶನದಲ್ಲಿ ಈ ಕ್ರೀಡಾ ಹಬ್ಬವನ್ನು ಅಚ್ಚುಕಟ್ಟಾಗಿ ಸಂಘಟಿಸಲಾಯಿತು. ಶಾಲಾ–ಕಾಲೇಜಿನ ಎಲ್ಲಾ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯವರ ಶ್ರಮ ಮತ್ತು ಸಹಕಾರ ಈ ಕೂಟದ ಯಶಸ್ಸಿಗೆ ಪ್ರಮುಖ ಕಾರಣವಾಯಿತು.

ವಿವಿಧ ಶಾಲಾ–ಕಾಲೇಜುಗಳಿಂದ ಆಗಮಿಸಿದ್ದ ಯುವ ಕ್ರೀಡಾಪಟುಗಳು ಪಂದ್ಯಾವಳಿಯುದ್ದಕ್ಕೂ ಅತ್ಯುತ್ತಮ ಕ್ರೀಡಾಸ್ಫೂರ್ತಿ ಹಾಗೂ ಕೌಶಲ್ಯವನ್ನು ಪ್ರದರ್ಶಿಸಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾದರು.

**ಪಂದ್ಯಾವಳಿಯ ಫಲಿತಾಂಶ:**

**ಅಂಡರ್–16 ವಿಭಾಗ (U–16)**

ರೋಚಕವಾಗಿ ನಡೆದ ಅಂಡರ್–16 ವಿಭಾಗದ ಅಂತಿಮ ಹಣಾಹಣಿಯಲ್ಲಿ ಅದ್ಭುತ ಪ್ರದರ್ಶನ ನೀಡಿದ ಬಂಟರ ಸಂಘ ಆರ್‌ಎನ್‌ಎಸ್ ವಿದ್ಯಾನಿಕೇತನ II ತಂಡವು ಚಾಂಪಿಯನ್ ಆಗಿ ಹೊರಹೊಮ್ಮಿದರೆ, ದ್ವಿತೀಯ ಸ್ಥಾನವನ್ನು ಮಹಾನಂಜನಾದ್ರಿ ಶಾಲೆ ತಾವರೆಕೆರೆ ತನ್ನದಾಗಿಸಿಕೊಂಡಿತು.

**ಅಂಡರ್–14 ಬಾಲಕರ ವಿಭಾಗ (U–14 Boy)**

ಕಠಿಣ ಸ್ಪರ್ಧೆಯಿಂದ ಕೂಡಿದ್ದ ಅಂಡರ್–14 ಬಾಲಕರ ವಿಭಾಗದ ಅಂತಿಮ ಪಂದ್ಯದಲ್ಲಿ ಮಹಾನಂಜನಾದ್ರಿ ಶಾಲೆ ತಾವರೆಕೆರೆ ತಂಡವು ಪ್ರಥಮ ಸ್ಥಾನ ಪಡೆದು ವಿಜೇತರಾಗಿ ಹೊರಹೊಮ್ಮಿತು. ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ I ವಿಜಯನಗರ ತಂಡವು ದ್ವಿತೀಯ ಸ್ಥಾನ ಪ್ರಶಸ್ತಿಗೆ ಭಾಜನವಾಯಿತು.

ಕ್ರೀಡಾಕೂಟವನ್ನು ಅತ್ಯಂತ ವ್ಯವಸ್ಥಿತವಾಗಿ ಆಯೋಜಿಸಿ ಯಶಸ್ವಿಗೊಳಿಸಿದ ಶಾಲಾ ಆಡಳಿತ ಮಂಡಳಿ, ಪ್ರಾಂಶುಪಾಲರು, ಮುಖ್ಯ ಶಿಕ್ಷಕರು, ದೈಹಿಕ ಶಿಕ್ಷಕರು, ಕಲಾ ಶಿಕ್ಷಕರು ಹಾಗೂ ಸಿಬ್ಬಂದಿವರ್ಗದವರಿಗೆ ಮತ್ತು ಪಂದ್ಯಾವಳಿಯಲ್ಲಿ ವಿಜೇತರಾದ ಹಾಗೂ ಭಾಗವಹಿಸಿದ ಎಲ್ಲಾ ಶಾಲೆಗಳ ಕ್ರೀಡಾಪಟುಗಳಿಗೆ ಶಾಲೆಯ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲಾಯಿತು.




THE LILY CASCADE
For Timeless Moments
Ph: 88671 98886



Siddharth Hegde
Partner, The Lily Cascade

ADVT.



# Congratulations

**Advocate Shweta Krishnappa**

## Appointment as Senior Panel Counsel for the Union of India

Advocate Shweta Krishnappa has been appointed, vide notification dated 18.06.2026, as Senior Panel Counsel for the Union of India by the Ministry of Law & Justice, Government of India, to represent the Union before the High Court of Karnataka, Bengaluru.

She has previously served the State of Karnataka as Government Pleader and Additional Government Advocate before the High Court of Karnataka.

This appointment fortifies her professional standing, commitment to public service, and contribution to the legal profession.

The Bunt community takes pride in her achievement and extends its best wishes for her continued success in serving the cause of justice and representing the Union of India before the courts.

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

## ಬೈಲಾ ತಿದ್ದುಪಡಿಯ ಬೈಲಾ ಸಂಖ್ಯೆ: III. ELECTION RULES and REGULATIONS ವಿಷಯದ ಬಗ್ಗೆ ಸ್ಪಷ್ಟೀಕರಣ

**ಮಾನ್ಯ ಸದಸ್ಯರೇ,**

ಸಂಘದ ಬೈಲಾಗೆ ತಿದ್ದುಪಡಿ ತರಲು ಬೈಲಾ ತಿದ್ದುಪಡಿ ಸಮಿತಿಯನ್ನು ದಿನಾಂಕ 31.01.2025ರಂದು ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ರಚಿಸಲಾಯಿತು. ಫೆಬ್ರವರಿ 2025 ಹಾಗೂ ಜೂನ್ 2025ರ ಸ್ನೇಹ ಚಿಂತನೆ ಮಾಸ ಪತ್ರಿಕೆಯಲ್ಲಿ ಸದಸ್ಯರ ಅಭಿಪ್ರಾಯಗಳನ್ನು ಆಹ್ವಾನಿಸಲಾಗಿದ್ದು, ಸದಸ್ಯರಿಂದ ಈ ಬಗ್ಗೆ ಪತ್ರಗಳನ್ನು ಸ್ವೀಕರಿಸಲಾಯಿತು. ದಿನಾಂಕ 28.06.2025ರಂದು ನಡೆಸಲಾದ ವಿಶೇಷ ಮಹಾಸಭೆಯಲ್ಲಿ ಶಾಲಾಡಳಿತ ಮಂಡಳಿಯ ಬಗ್ಗೆ ಚರ್ಚಿಸಿದಾಗ ವಿಶೇಷ ಮಹಾಸಭೆಯು ಬೈಲಾವನ್ನು ಅಗತ್ಯವಾಗಿ ತಿದ್ದುಪಡಿ ಮಾಡಲು ಸೂಚಿಸಿತು.

ಬೈಲಾ ತಿದ್ದುಪಡಿ ಸಮಿತಿಯು ಸದಸ್ಯರಿಂದ ಸ್ವೀಕರಿಸಲಾದ ಪತ್ರಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಒಟ್ಟು 9 ಸಭೆಗಳನ್ನು ನಡೆಸಿತು. ಕರಡು ಪ್ರತಿಯನ್ನು ಕಾರ್ಯಕಾರಿ ಸಮಿತಿಗೆ ಸಲ್ಲಿಸಿ, ಅಗತ್ಯ ಸಲಹೆಗಳನ್ನು ಪಡೆದು ಬೈಲಾ ತಿದ್ದುಪಡಿಯ ಅಂತಿಮ ಪ್ರತಿಯನ್ನು ದಿನಾಂಕ 28.03.2026ರಂದು ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅನುಮೋದಿಸಲಾಯಿತು. ನಂತರ ದಿನಾಂಕ 06.04.2026ರಂದು ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅಂತಿಮಗೊಳಿಸಲಾದ ವಿಶೇಷ ಮಹಾಸಭೆಯ ಸೂಚನಾ ಪತ್ರವನ್ನು ದಿನಾಂಕ 10.04.2026ರಂದು ಸಂಘದ ಎಲ್ಲಾ ಸದಸ್ಯರಿಗೆ ಕಳುಹಿಸಲಾಯಿತು. ದಿನಾಂಕ 10.04.2026ರಿಂದ 02.05.2026ರವರೆಗೆ ಸಂಘದ ಕಛೇರಿಗೆ ಯಾವುದೇ ಅಧಿಕೃತ ಆಕ್ಷೇಪಣೆ ಅಥವಾ ಅಭಿಪ್ರಾಯ ಸ್ವೀಕರಿಸಲಾಗಿಲ್ಲ.

ದಿನಾಂಕ 02.05.2026ರ ವಿಶೇಷ ಮಹಾಸಭೆಯಲ್ಲಿ ಬೇರೆ ಎಲ್ಲಾ ತಿದ್ದುಪಡಿಯೊಂದಿಗೆ ಬೈಲಾ ಸಂಖ್ಯೆ: III. ELECTION RULES and REGULATIONS ಶೀರ್ಷಿಕೆಯ ಉಪಸಂಖ್ಯೆ: (iii) (c) ಠೇವಣಿ ಕುರಿತು ಚರ್ಚಿಸುತ್ತಾ, ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳು ತಮ್ಮ ನಾಮಪತ್ರವನ್ನು ಹಿಂಪಡೆದರೆ ಅಥವಾ ಅವಿರೋಧವಾಗಿ ಆಡಳಿತ ಮಂಡಳಿಗೆ ಆಯ್ಕೆಯಾದರೆ ಠೇವಣಿಯನ್ನು ಹಿಂದಿರುಗಿಸುವುದು ಹಾಗೂ ಚುನಾವಣಾ ವೆಚ್ಚಕ್ಕಾಗಿ ಅಭ್ಯರ್ಥಿಗಳು ಸೋತರೂ ಗೆದ್ದರೂ ಠೇವಣಿಗಳನ್ನು **ಹಿಂದಿರುಗಿಸಲಾಗುವುದಿಲ್ಲ.** ಈ ನಡಾವಳಿಯನ್ನು ದಿನಾಂಕ 05.05.2026ರಂದು ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅನುಮೋದಿಸಿ, ಅಗತ್ಯ ದಾಖಲೆಗಳೊಂದಿಗೆ ದಿನಾಂಕ 16.05.2026ರಂದು ನೋಂದಣಾಧಿಕಾರಿಗಳ ಕಚೇರಿಗೆ ಸಲ್ಲಿಸಲಾಯಿತು. ದಿನಾಂಕ 29.05.2026ರಂದು ಶ್ರೀ ಗಣೇಶ್ ಶೆಟ್ಟಿ ಹಾಗೂ ಇತರ ಸದಸ್ಯರು ಹಾಗೂ ಶ್ರೀ ವಿಜಯಾನಂದ ಶೆಟ್ಟಿ ಇವರುಗಳು ಎರಡು ಪತ್ರಗಳಲ್ಲಿ ವಿಶೇಷ ಮಹಾಸಭೆಯಲ್ಲಿ ಕಾನೂನು ಬಾಹಿರವಾಗಿ ಸಂಘದ ಬೈಲಾದಲ್ಲಿನ ಕೆಲವು ಪ್ರಮುಖ ಅಂಶಗಳಿಗೆ ತಿದ್ದುಪಡಿಯನ್ನು ಮಾಡಿಕೊಂಡಿರುತ್ತಾರೆ ಎಂದು ಸಂಘಗಳ ಜಿಲ್ಲಾ ನೊಂದಾಣಾಧಿಕಾರಿಗಳ ಕಛೇರಿಗೆ ಸಲ್ಲಿಸಿದ ದೂರಿನ ಮೇರೆಗೆ, ಸದರಿ ವಿಚಾರಣೆಗೆ ಅವಶ್ಯಕ ದಾಖಲಾತಿಗಳು ಹಾಗೂ ಲಿಖಿತ ಹೇಳಿಕೆಗಳೊಂದಿಗೆ ದಿನಾಂಕ 05.06.2026ರಂದು ಹಾಜರಾಗಲು ಸೂಚಿಸಿರುತ್ತಾರೆ. ಶ್ರೀ ಗಣೇಶ್ ಶೆಟ್ಟಿಯವರಿಗೆ ಸಂಘದ ಕಛೇರಿಯಲ್ಲಿ ಈ ಬಗ್ಗೆ ವಿವರವನ್ನು ತಿಳಿಸಿದಾಗ ಅವರು ಸಂಘದ ಬೈಲಾ ತಿದ್ದುಪಡಿ ಮಾಡಿದ ರೀತಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ಬೈಲಾ ತಿದ್ದುಪಡಿಯು ಸಂಘಕ್ಕೆ ಅವಶ್ಯಕವಾಗಿದೆ ಎಂದು ದಿನಾಂಕ 30.05.2026ರಂದು ತಮ್ಮ ಆಕ್ಷೇಪಣಾ ಪತ್ರವನ್ನು ಹಿಂಪಡೆದರು. ನಂತರ ನೊಂದಾಣಾಧಿಕಾರಿಗಳ ಸೂಚನೆಯ ಮೇರೆಗೆ ದಿನಾಂಕ 03.06.2026ರಂದು ಅಗತ್ಯ ದಾಖಲೆಗಳು ಹಾಗೂ ವಿವರಣೆಗಳನ್ನು ಸಲ್ಲಿಸಲಾಯಿತು. ದಿನಾಂಕ 05.06.2026ರಂದು ದಾಖಲೆ ಪರಿಶೀಲಿಸಿ ವಿಚಾರಣೆ ನಡೆಸಿ ಆದೇಶ ಸಂಖ್ಯೆ ಡಿಆರ್‌ಬಿ–4/ಎಸ್‌ಒಆರ್ –2/02/2026–27 ಪ್ರಕಾರ ವಿಶೇಷ ಮಹಾಸಭೆಯ ಸೂಚನಾ ಪತ್ರದಲ್ಲಿ ನಮೂದಿಸಿರುವ ತಿದ್ದುಪಡಿ ಬೈಲಾ ಸಂಖ್ಯೆ: III. ELECTION RULES and REGULATIONS ಶೀರ್ಷಿಕೆಯ ಉಪಸಂಖ್ಯೆ: (iii) (c) ಯಲ್ಲಿ ಕೇವಲ Deposit ಎಂಬುದಾಗಿ ಇದ್ದು, ಇದು **Refundable deposit** ಎಂಬುದಾಗಿ ಪರಿಗಣಿಸಲಾಯಿತು. ಮೇಲಿನ ಆದೇಶದ ಪ್ರಕಾರ ಕಾನೂನುಬದ್ಧವಾಗಿ, ಮರುಪಾವತಿಸಬಹುದಾದ ಠೇವಣಿ ಎಂದು ಸರಿಪಡಿಸಿ ಬೈಲಾವನ್ನು ಎ.ಎಂ.ಆರ್ ಸಂಖ್ಯೆ/08/2026–27 ಅನ್ವಯ ದಿನಾಂಕ 05.06.2026ರಂದು ಸಂಘಗಳ ಜಿಲ್ಲಾ

ನೊಂದಾಣಾಧಿಕಾರಿಗಳ ಕಛೇರಿಯಲ್ಲಿ ನೊಂದಾಯಿಸಲಾಯಿತು. ದಿನಾಂಕ 05.06.2026ರಂದು ನೊಂದಾಯಿಸಲ್ಪಟ್ಟ ಬೈಲಾವನ್ನು ಹಾಗೂ ನೋಂದಾಣಾಧಿಕಾರಿಗಳ ಆದೇಶವನ್ನು ದಿನಾಂಕ 10.06.2026ರಂದು ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ತಿಳಿಸಲಾಯಿತು.

ದಿನಾಂಕ 15.06.2026ರಂದು ಚುನಾವಣಾಧಿಕಾರಿಗಳು ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಿದ್ದು, ಅದರಲ್ಲಿ ಠೇವಣಿಯನ್ನು ಚುನಾವಣಾ ಪ್ರಕ್ರಿಯೆ ಮುಗಿದ ನಂತರ ಹಿಂತಿರುಗಿಸಲಾಗುವುದೆಂದು ತಿಳಿಸಲಾಗಿತ್ತು. ಶ್ರೀ ವಿಜಯಾನಂದ ಶೆಟ್ಟಿ ಹಾಗೂ ಶ್ರೀ ಸಂತೋಷ್ ಶೆಟ್ಟಿಯವರು ನೊಂದಾಣಾಧಿಕಾರಿಗಳ ಆದೇಶ ಸಂಖ್ಯೆ ಡಿಆರ್‌ಬಿ–4/ಎಸ್‌ಒಆರ್–2/02/2026–27 ಪ್ರಶ್ನಿಸಿ, Writ Petition No. 20320/2026 ಅನ್ನು ದಿನಾಂಕ 01.07.2026ರಂದು ದಾಖಲಿಸಿ, ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ, ಈ ರಿಟ್ ಅರ್ಜಿ ಅಂತಿಮವಾಗಿ ಇತ್ಯರ್ಥವಾಗುವವರೆಗೆ, DRB –4/SOR–2/02/2026–27 ಅಡಿಯಲ್ಲಿ 05.06.2026ರಂದು ಹೊರಡಿಸಿರುವ ಆದೇಶವನ್ನು ಕಾಯ್ದಿರಿಸಿ, ಅದರ ಜಾರಿಗೆ ತಾತ್ಕಾಲಿಕ ತಡೆ ನೀಡುವಂತೆ ಮಾನ್ಯ ನ್ಯಾಯಾಲಯಕ್ಕೆ ಮನವಿಯನ್ನು ಮಾಡಿದ್ದಾರೆ.

ಈ ವಿಚಾರಗಳ ಬಗ್ಗೆ ಕಾನೂನು ತಜ್ಞರಿಂದ ಅಗತ್ಯ ಸಲಹೆಗಳನ್ನು ಪಡೆದ ನಂತರ ಈ ವಿಚಾರದ ಬಗ್ಗೆ ಇನ್ನೊಂದು ವಿಶೇಷ ಮಹಾಸಭೆಯ ಅಗತ್ಯವಿಲ್ಲವೆಂದು ತಿಳಿದು, ಚುನಾವಣೆಯನ್ನು ದಿನಾಂಕ 20.09.2026ಕ್ಕೆ ನಿಗದಿಪಡಿಸಲಾಗಿದೆ. ಠೇವಣಿಯು ಹಿಂತಿರುಗಿಸಲಾಗುವ ಠೇವಣಿಯೇ ಅಥವಾ ಹಿಂತಿರುಗಿಸಲಾಗದ ಠೇವಣಿಯೇ ಎಂಬ ವಿಷಯವನ್ನು ಮಾನ್ಯ ನ್ಯಾಯಾಲಯದ ಆದೇಶದಂತೆ ಅಂತಿಮವಾಗಿ ನಿರ್ಧರಿಸಲಾಗುವುದು. ಇದಕ್ಕೆ ಸಂಘದ ಎಲ್ಲಾ ಸದಸ್ಯರು ಸಹಕರಿಸಬೇಕಾಗಿ ವಿನಂತಿ. ಈ ಕುರಿತು ಎಲ್ಲಾ ಸದಸ್ಯರಿಗೆ ಮಾಹಿತಿ ನೀಡಲಾಗುತ್ತಿದ್ದು, ಹೆಚ್ಚಿನ ಮಾಹಿತಿಗಾಗಿ ಸಂಘದ ಅಧ್ಯಕ್ಷರು ಅಥವಾ ಗೌರವ ಕಾರ್ಯದರ್ಶಿಯವರನ್ನು ಸಂಪರ್ಕಿಸಬಹುದು.

ಸಹಿ/–
**ಗೌರವ ಕಾರ್ಯದರ್ಶಿ**

## ಬಂಟರ ಸಂಘ ಆರ್. ಎನ್. ಎಸ್. ವಿದ್ಯಾನಿಕೇತನ 2026–27ನೇ ಸಾಲಿನ ಅಂತರ್ ಶಾಲಾ–ಕಾಲೇಜು ಕ್ರೀಡೋತ್ಸವದ ವೈಭವ

ಬಂಟರ ಸಂಘ ಆರ್. ಎನ್. ಎಸ್. ವಿದ್ಯಾನಿಕೇತನ ಸಂಸ್ಥೆಯ ಆವರಣದಲ್ಲಿ 2026–27ನೇ ಶೈಕ್ಷಣಿಕ ಸಾಲಿನ ಅಂತರ್ ಶಾಲಾ ಮತ್ತು ಕಾಲೇಜುಗಳ ಕ್ರಿಕೆಟ್, ಥ್ರೋಬಾಲ್ ಹಾಗೂ ವಾಲಿಬಾಲ್ ಪಂದ್ಯಾವಳಿಗಳು ಜುಲೈ 3 ಮತ್ತು 4, 2026 ರಂದು ಅತ್ಯಂತ ವೈಭವದಿಂದ ಜರುಗಿದವು.

ಬೆಂಗಳೂರು ಬಂಟರ ಸಂಘದ ಅಧ್ಯಕ್ಷರಾದ ಸಿಎ. ಅಶೋಕ್ ಶೆಟ್ಟಿ ಎಂ.ರವರು ಹಾಗೂ ಗೌರವ ಕಾರ್ಯದರ್ಶಿಯವರಾದ ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿಯವರು ಕ್ರೀಡಾಕೂಟವನ್ನು ಉದ್ಘಾಟಿಸಿದರು. ಖಜಾಂಚಿಯವರಾದ ಶ್ರೀ ಅಶೋಕ್ ಕುಮಾರ್ ಶೆಟ್ಟಿ ಹೆಚ್. ಅವರು ಉಪಸ್ಥಿತರಿದ್ದು ಆಟಗಾರರನ್ನು ಪ್ರೋತ್ಸಾಹಿಸಿದರು.

**ವಿಜೇತರ ವಿವರ:**

**ಥ್ರೋಬಾಲ್ (ಬಾಲಕಿಯರು – ಜುಲೈ 3):**

ಅಂಡರ್–16 (ಶಾಲೆ): ವಿಜೇತರು: ನ್ಯಾಷನಲ್ ಹಿಲ್ ವ್ಯೂ ಶಾಲೆ । ರನ್ನರ್ಸ್: ಎಸ್.ವಿ.ಎನ್ ಕಾನ್ವೆಂಟ್, ಅಂಡರ್–18 (ಕಾಲೇಜು): ವಿಜೇತರು: ಎಸ್.ವಿ.ವಿ.ಎನ್ ಪಿ.ಯು ಕಾಲೇಜು । ರನ್ನರ್ಸ್: ಎಸ್.ಎಸ್.ಆರ್.ವಿ.ಎಮ್ ಪಿ.ಯು ಕಾಲೇಜು

**ವಾಲಿಬಾಲ್ (ಬಾಲಕರು – ಜುಲೈ 4):**

ಅಂಡರ್–16 (ಶಾಲೆ): ವಿಜೇತರು: ಎಸ್.ವಿ.ಎನ್ ಕಾನ್ವೆಂಟ್ । ರನ್ನರ್ಸ್: ಬಾಲವಿಕಾಸ ಶಾಲೆ

ಅಂಡರ್–18 (ಕಾಲೇಜು): ವಿಜೇತರು: ಎಸ್.ಡಿ.ಎಮ್ ಕಾಲೇಜು, ಉಜಿರೆ । ರನ್ನರ್ಸ್: ಶೇಷಾದ್ರಿಪುರಂ ಕಾಲೇಜು ಕಾಲೇಜಿನ ಪ್ರಾಂಶುಪಾಲರಾದ ಅಜಿಲ್ ಅರಸಿಯವರ ಹಾಗೂ ಶಾಲೆಯ ಮುಖ್ಯ ಶಿಕ್ಷಕರಾದ ಶೇಖರ್ ರೆಡ್ಡಿಯವರ ಮಾರ್ಗದರ್ಶನದಲ್ಲಿ ಹಾಗೂ ಕ್ರೀಡಾಕೂಟದ ಉಸ್ತುವಾರಿಗಳಾದ ದೈಹಿಕ ಶಿಕ್ಷಣದ ಶಿಕ್ಷಕರಾದ ಮೋಹನ್ ಮತ್ತು ಚಿತ್ರ ಕಲಾ ಶಿಕ್ಷಕರಾದ ಪ್ರಶಾಂತ್‌ರವರ ಶಿಸ್ತುಬದ್ಧ ನಿರ್ವಹಣೆಯಲ್ಲಿ, ಶಾಲಾ–ಕಾಲೇಜಿನ ಎಲ್ಲಾ ಶಿಕ್ಷಕ–ಸಿಬ್ಬಂದಿ ವರ್ಗದ ಜಂಟಿ ಸಹಯೋಗದೊಂದಿಗೆ ಈ ಕ್ರೀಡಾಕೂಟವು ಯಶಸ್ವಿಯಾಗಿ ಮುಕ್ತಾಯಗೊಂಡಿತು.

# ಬಂಟರ ಸಂಘ ವಿಜಯನಗರದಲ್ಲಿ ಗೀತಾಜ್ಞಾನಯಜ್ಞ
## ಭಗವದ್ಗೀತೆಯ ಬೆಳಕಿನಲ್ಲಿ ಕರ್ಮದ ರಹಸ್ಯ

ಚಿನ್ಮಯ ಮಿಷನ್ ಮತ್ತು ಬೆಂಗಳೂರು ಬಂಟರ ಸಂಘದ ಸಹಯೋಗದೊಂದಿಗೆ ಮಂಗಳೂರು ಕೇಂದ್ರದ ಪೂಜ್ಯ ಸ್ವಾಮಿ ಗಹನಾನಂದರು **'ಗೀತಾಜ್ಞಾನಯಜ್ಞ'** ಕಾರ್ಯಕ್ರಮವನ್ನು ಬಂಟರ ಸಂಘದ ಸಭಾಂಗಣದಲ್ಲಿ ದಿನಾಂಕ 02.08.2026 ರಿಂದ 09.08.2026 ರವರೆಗೆ ಕನ್ನಡದಲ್ಲಿ 'ಭಗವದ್ಗೀತೆಯ ಬೆಳಕಿನಲ್ಲಿ ಕರ್ಮದ ರಹಸ್ಯ' ಎಂಬ ವಿಷಯದ ಮೇಲೆ ಗೀತಾಜ್ಞಾನಯಜ್ಞ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಬಂಟರ ಸಂಘದ ಅಧ್ಯಕ್ಷರಾದ ಶ್ರೀ ಸಿಎ ಅಶೋಕ್ ಶೆಟ್ಟಿ ಎಂ. ರವರು ಯಜ್ಞವನ್ನು ಉದ್ಘಾಟಿಸಿದರು. ಕುಮಾರಿ ಸಿಂಚನಾ ಮತ್ತು ನಿತ್ಯಶ್ರೀಯವರ ಭಾವಪೂರ್ಣ ಪ್ರಾರ್ಥನೆ, ಶ್ರೀ ಚಂದ್ರಹಾಸ್ ರೈಯವರಿಂದ ಸ್ವಾಗತ ಹಾಗೂ ಪರಿಚಯ, ಚಿನ್ಮಯ ಮಿಷನ್ ಅಧ್ಯಕ್ಷರಾದ ಶ್ರೀ ಜಿ. ಎನ್. ಶೇಷಾದ್ರಿಯವರಿಂದ ಚಿನ್ಮಯ ಸಂಸ್ಥೆಯ ಚಟುವಟಿಕೆಗಳ ಪರಿಚಯ ಹಾಗೂ ಪೂಜ್ಯ ಗುರುದೇವರ ಸದೃಢ ಸಮಾಜ ನಿರ್ಮಾಣದ ದೂರದೃಷ್ಟಿಯ ವಿವರಣೆಯೊಂದಿಗೆ ಉದ್ಘಾಟನಾ ಕಾರ್ಯಕ್ರಮ ಸುಂದರವಾಗಿ ನೆರವೇರಿತು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಶ್ರೀಕಾಂತ್ ದೇಶಪಾಂಡೆಯವರು ಸಮರ್ಥವಾಗಿ ನಿರ್ವಹಿಸಿದರು. ಸಂಘದ ವತಿಯಿಂದ ಸ್ವಾಮೀಜಿಯವರನ್ನು ಹಿರಿಯ ಸದಸ್ಯರಾದ ಶ್ರೀ ಇರ್ಮಾಡಿ ಜಯಪ್ರಸಾದ್ ಶೆಟ್ಟಿಯವರ ಸಮ್ಮುಖದಲ್ಲಿ ಸನ್ಮಾನಿಸಲಾಯಿತು.

ಭಗವದ್ಗೀತೆ ಕೇವಲ ಪಠಿಸುವಂತಹ ಗ್ರಂಥವಲ್ಲ; ಜೀವನದಲ್ಲಿ ಅಳವಡಿಸಿಕೊಂಡು ಬದುಕಬೇಕಾದ ಜ್ಞಾನಸಂಪತ್ತು ಎಂಬುದನ್ನು ಪೂಜ್ಯ ಸ್ವಾಮೀಜಿಯವರು ಅನೇಕ ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಿದರು. ಗೀತೆಯ ಉದ್ದೇಶ ಹೊರಗಿನ ಜಗತ್ತನ್ನು ಬದಲಿಸುವುದಲ್ಲ, ನಮ್ಮೊಳಗಿನ ಜಗತ್ತನ್ನು ಪರಿವರ್ತಿಸುವುದು. ನಮ್ಮ ಅಂತ:ಕರಣದಲ್ಲಿ ಬದಲಾವಣೆ ಬಂದಾಗ ಅದರ ಪ್ರತಿಫಲ ಹೊರಜಗತ್ತಿನಲ್ಲಿಯೂ ಸಹಜವಾಗಿ ಕಾಣಿಸಿಕೊಳ್ಳುತ್ತದೆ. ಶಾಸ್ತ್ರಾಧ್ಯಯನ, ಸತ್ಸಂಗ, ಸದ್ವಿಚಾರ ಮತ್ತು ನಿಷ್ಕಾಮ ಸೇವೆಯಿಂದ ಮನಸ್ಸು ಶುದ್ಧಗೊಂಡು ಆತ್ಮಜ್ಞಾನಕ್ಕೆ ಯೋಗ್ಯವಾಗುತ್ತದೆ. ಕರ್ಮದ ನಿಜವಾದ ಸ್ವರೂಪವನ್ನು ಅರಿಯುವುದು ಈ ಯಜ್ಞದ ಮುಖ್ಯ ಉದ್ದೇಶವಾಗಿತ್ತು. ಕರ್ಮವು ವಿಶಾಲ ಸಾಗರದಂತಿದ್ದು, ಅದರ ಸ್ವರೂಪ ಮತ್ತು ಫಲವನ್ನು ಅರಿಯದೆ ಅದರಲ್ಲಿ ಮುಳುಗುವ ಸಾಧ್ಯತೆಯಿದೆ. ಆದುದರಿಂದ ಶಾಸ್ತ್ರಗಳು ಕರ್ಮತ್ಯಾಗವನ್ನಲ್ಲ, ಸಂಗತ್ಯಾಗವನ್ನು ಭೋದಿಸುತ್ತವೆ. ಕರ್ತವ್ಯಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸುತ್ತಲೇ ಅವುಗಳ ಫಲದ ಮೇಲಿನ ಅತಿಯಾದ ಆಸಕ್ತಿಯನ್ನು ತ್ಯಜಿಸುವುದೇ ಕರ್ಮಯೋಗದ ಮೂಲತತ್ವ.

ಆತ್ಮ– ಅನಾತ್ಮ ವಿವೇಕವನ್ನು ವಿವರಿಸುತ್ತಾ, ದೇಹ–ಮನಸ್ಸು–ಬುದ್ಧಿ ಜಡವಾದ ಉಪಾಧಿಗಳಾಗಿದ್ದು, ಅವುಗಳಿಗೆ ಚೈತನ್ಯವನ್ನು ನೀಡುವುದು ಆತ್ಮತತ್ವವೆಂದು ಸ್ವಾಮೀಜಿಯವರು ತಿಳಿಸಿದರು. ವಿದ್ಯುತ್ ಇಲ್ಲದೆ ಬಲ್ಬ್ ಬೆಳಗದಂತೆ, ಚೈತನ್ಯದ ಸಾನಿಧ್ಯವಿಲ್ಲದೆ ದೇಹ–ಮನಸ್ಸು–ಬುದ್ಧಿಗಳು ಕಾರ್ಯನಿರ್ವಹಿಸಲಾರವು. ಈ ವಿವೇಕವೇ ನಮ್ಮನ್ನು ಜೀವನದ ದು:ಖದಿಂದ ಮುಕ್ತಿಯತ್ತ ಕರೆದೊಯ್ಯುತ್ತದೆ. ಕರ್ಮವನ್ನು ಸಂಪೂರ್ಣವಾಗಿ ತ್ಯಜಿಸುವುದು ಎಂದಿಗೂ ಸಾಧ್ಯವಿಲ್ಲ. ಕರ್ಮವೇ ಬಂಧನಕ್ಕೆ ಕಾರಣವಾಗಬಹುದು; ಆದರೆ ಅದೇ ಕರ್ಮವನ್ನು ಸರಿಯಾದ ಮನೋಭಾವದಿಂದ ಮಾಡಿದಾಗ ಮುಕ್ತಿಯ ಸಾಧನವೂ ಆಗಬಹುದು. ಫಲವನ್ನು ಬಯಸದೇ, ಕರ್ತವ್ಯವನ್ನು ಈಶ್ವರಾರ್ಪಣಾ ಬುದ್ಧಿಯಿಂದ ನಿರ್ವಹಿಸಿ, ದೊರೆಯುವ ಫಲವನ್ನು ಪ್ರಸಾದಬುದ್ಧಿಯಿಂದ ಸ್ವೀಕರಿಸುವುದು ಮನಸ್ಸನ್ನು ಶುದ್ಧಗೊಳಿಸುತ್ತದೆ. ನಿತ್ಯ, ನೈಮಿತ್ತಿಕ, ಕಾಮ್ಯ, ಪ್ರಾಯಶ್ಚಿತ್ತ ಮುಂತಾದ ಕರ್ಮಗಳ ಸ್ವರೂಪವನ್ನು ವಿವರಿಸಿ, ನಿಷಿದ್ಧ ಕರ್ಮಗಳನ್ನು ತ್ಯಜಿಸಿ ನಿಯತ ಕರ್ಮಗಳನ್ನು ಧರ್ಮಬದ್ಧವಾಗಿ ನಿರ್ವಹಿಸುವುದು ಅತ್ಯಂತ ಅಗತ್ಯ.

ಮಾನವನ ಜೀವನವು ದೇವ, ಋಷಿ, ಪಿತೃ, ಭೂತ ಮತ್ತು ಮನುಷ್ಯ ಋಣಗಳಿಂದ ಕೂಡಿದೆ. ಸಮಾಜ, ಪ್ರಕೃತಿ, ಪೂರ್ವಜರು, ಋಷಿಗಳು ಮತ್ತು ಪರಮಾತ್ಮನಿಂದ ಪಡೆದಿರುವುದನ್ನು ಕೃತಜ್ಞತೆಯಿಂದ ಸ್ಮರಿಸಿ, ನಮ್ಮಲ್ಲಿ ಅಗತ್ಯಕ್ಕಿಂತ ಹೆಚ್ಚಿರುವ ಸಂಪತ್ತನ್ನು ಅರ್ಹರೊಂದಿಗೆ ಹಂಚಿಕೊಳ್ಳುವುದು ಕರ್ಮಯೋಗ. "ನಮಗೆ ದೊರೆತದ್ದು ಭಗವಂತನ ಕೊಡುಗೆ; ಅದನ್ನು ನಾವು ಹೇಗೆ ಬಳಸುತ್ತೇವೆ ಎಂಬುವುದು ಭಗವಂತನಿಗೆ ನಮ್ಮ ಕೊಡುಗೆ" ಎಂಬ ಮನೋಭಾವ ಕರ್ಮಯೋಗದ ಸುಂದರ ಸಾರ. ಜೀವನದಲ್ಲಿ ಎದುರಾಗುವ ಪರಿಸ್ಥಿತಿಗಳಿಗೆ ಪ್ರತಿಕ್ರಿಯಿಸುವ ಬದಲು ಸ್ಪಂದಿಸುವ ಗುಣವನ್ನು ಬೆಳೆಸಿಕೊಳ್ಳಬೇಕು. ಸಮಚಿತ್ತದಿಂದ ಕರ್ಮವನ್ನು ನಿರ್ವಹಿಸಿದಾಗ

ಮನಸ್ಸಿನ ಶಾಂತಿ ಉಳಿಯುತ್ತದೆ. ರೈತನು ಬೀಜ ಬಿತ್ತಿ ತನ್ನ ಕರ್ತವ್ಯವನ್ನು ಮಾಡಬಹುದೇ ಹೊರತು ಬೆಳೆ ಎಷ್ಟು ಬರುತ್ತದೆ ಎಂಬುದನ್ನು ಸಂಪೂರ್ಣವಾಗಿ ನಿಯಂತ್ರಿಸಲಾರನು.

ಗೃಹಸ್ಥ ಮತ್ತು ಸಂನ್ಯಾಸಾಶ್ರಮಗಳ ವಿವರಣೆ ನೀಡುತ್ತಾ ಬಾಹ್ಯವಾಗಿ ಕರ್ಮಗಳನ್ನು ತ್ಯಜಿಸುವುದೇ ಸಂನ್ಯಾಸವಲ್ಲ; ಫಲಾಪೇಕ್ಷೆಯನ್ನು ತ್ಯಜಿಸಿ ಕರ್ತವ್ಯವನ್ನು ನಿರ್ವಹಿಸುವ ಮನೋಭಾವವೇ ನಿಜವಾದ ಸಂನ್ಯಾಸದ ಲಕ್ಷಣ ಎಂದು ಸ್ಪಷ್ಟಿಪಡಿಸಿದರು. ಗೃಹಸ್ಥಾಶ್ರಮದಲ್ಲಿದ್ದರೂ ಕರ್ಮಯೋಗ, ಶಾಸ್ತ್ರಾಧ್ಯಯನ, ಸತ್ಸಂಗ ಮತ್ತು ಸೇವೆಯ ಮೂಲಕ ಚಿತ್ತಶುದ್ಧಿಯನ್ನು ಸಾಧಿಸಬಹುದು. ಆಶ್ರಮಕ್ಕಿಂತ ಸಾಧನೆಯೇ ಮುಖ್ಯ ಎಂಬುದನ್ನು ಸ್ವಾಮೀಜಿಯವರು ಸ್ಪಷ್ಟಪಡಿಸಿದರು. ಅಂತಿಮವಾಗಿ, ಸಂಕಲ್ಪದಿಂದ ಕಾಮ, ಕಾಮದಿಂದ ಕರ್ಮ ಮತ್ತು ಕರ್ಮದಿಂದ ರಾಗ–ದ್ವೇಷಗಳ ಚಕ್ರ ಹೇಗೆ ಮುಂದುವರಿಯುತ್ತದೆ ಎಂಬುದನ್ನು ವಿವರಿಸಿ, ಮನಸ್ಸಿನಲ್ಲಿ ಉದಯಿಸುವ ಸಂಕಲ್ಪಗಳನ್ನು ಜಾಗೃತಿಯಿಂದ ಗಮನಿಸಿ ಆರಂಭದಲ್ಲೇ ನಿಯಂತ್ರಿಸುವುದು ಸಾಧಕನ ಲಕ್ಷಣ. ಸಗುಣ ಮತ್ತು ನಿರ್ಗುಣ ಉಪಾಸನೆಯ ವಿವಿಧ ಮಾರ್ಗಗಳನ್ನು ವಿವರಿಸಿ, ಸಾಧಕರ ಸಾಮರ್ಥ್ಯಕ್ಕೆ ಅನುಗುಣವಾಗಿ ಈಶ್ವರಾರ್ಪಣಾ ಬುದ್ಧಿ, ಇಷ್ಟದೇವತಾ ಭಕ್ತಿ, ಧ್ಯಾನ ಮತ್ತು ಕರ್ಮಯೋಗದ ಮೂಲಕ ಚಿತ್ತಶುದ್ಧಿ ಹಾಗೂ ಆತ್ಮಜ್ಞಾನವನ್ನು ಪಡೆಯಲು ಸುಲಭವೆಂದು ವಿವರಿಸಿದರು.

ದಿನಾಂಕ 09.08.2026 ರಂದು ದೇವಿ ಸಮೂಹದ ಭಜನೆ, ಗುರುಸ್ತೋತ್ರ, ವ್ಯಾಸ ಅಷ್ಟೋತ್ತರ, ಗುರುಪಾದುಕಾ ಸ್ತೋತ್ರ ಹಾಗೂ ಆರತಿಯೊಂದಿಗೆ ವ್ಯಾಸ ಪೂಜೆಯ ಕಾರ್ಯಕ್ರಮ ಭಕ್ತಿಪೂರ್ವಕವಾಗಿ ಆಚರಿಸಲಾಯಿತು. ಎಲ್ಲಾ ದಿನಗಳಲ್ಲಿಯೂ ಶ್ರೋತೃಗಳು ಉತ್ತಮ ಸಂಖ್ಯೆಯಲ್ಲಿ ಭಾಗವಹಿಸಿ, ಭಗವದ್ಗೀತೆಯ ಕರ್ಮಯೋಗದ ಆಳವಾದ ಸಂದೇಶವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಪ್ರೇರಣೆಯನ್ನು ಪಡೆದರು. ಸ್ವಾಧ್ಯಾಯ ತರಗತಿಗಳ ಸದಸ್ಯರಾದ ಶ್ರೀ ಸತ್ಯನಾರಾಯಣ, ಶ್ರೀ ವಿಜಯ, ಶ್ರೀ ಪುರುಷೋತ್ತಮ್, ಶ್ರೀಮತಿ ಶಾಂತಲಾ ವಿಶ್ವನಾಥ್, ಶ್ರೀಮತಿ ಗೀತಾ ರಾವ್ ಮತ್ತು ಶ್ರೀಮತಿ ಜ್ಯೋತಿ ಸತ್ಯನಾರಾಯಣರವರು ಪ್ರತಿ ದಿನ ಪೂಜ್ಯ ಸ್ವಾಮೀಜಿಯವರ ಪ್ರವಚನ ಪೂರ್ವ 20 ನಿಮಿಷಗಳ ಕಾಲ ಭಗವದ್ಗೀತೆಯ ಆಯ್ದ ಶ್ಲೋಕಗಳ ಬಗ್ಗೆ ಅವರ ಚಿಂತನೆಯನ್ನು ಅತ್ಯಂತ ಸುಂದರವಾಗಿ ಹಂಚಿಕೊಂಡರು.

ದಿನಾಂಕ 08.08.2026 ಶನಿವಾರದಂದು ಮಕ್ಕಳಿಗೆ ವಿಶೇಷ ಬಾಲವಿಹಾರ ತರಗತಿ ಮತ್ತು ದಿನಾಂಕ 09.08.2026 ರಂದು ಯುವಕರಿಗೆ ವಿಶೇಷ ಯುವಕೇಂದ್ರ ತರಗತಿ ಏರ್ಪಡಿಸಲಾಯಿತು. ಸುಮಾರು 70 ಮಕ್ಕಳು ಮತ್ತು 40 ಯುವಕ ಯುವತಿಯರು ಭಾಗವಹಿಸಿ ಪ್ರಯೋಜನ ಪಡೆದರು. ಎನ್.ಸಿ.ಸಿ.ಯಲ್ಲಿ ವಿಶೇಷ ಪಾರಿತೋಷಕ ಹಾಗೂ ಭಾರತ ಮಟ್ಟದ ಶೂಟಿಂಗ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದು ರಾಜ್ಯಪಾಲರಿಂದ ಅತ್ಯುತ್ತಮ ಕ್ರೀಡಾಪಟುವಿನ ಪದಕ ಪಡೆದ ಚಿನ್ಮಯ ವಿದ್ಯಾಲಯದ ಪೂರ್ವ ವಿದ್ಯಾರ್ಥಿ ಚಿ। ಅಭಿನವ್‌ನನ್ನು ದಿನಾಂಕ 09.08.2026 ರಂದು ಪೂಜ್ಯ ಸ್ವಾಮೀಜಿಯವರು ಚಿನ್ಮಯ ಪ್ರತಿಭಾ ಪುರಸ್ಕಾರ ನೀಡಿ ಆಶೀರ್ವದಿಸಿದರು.

ಗೀತಾಜ್ಞಾನಯಜ್ಞದ ಸಮಾರೋಪ ಸಮಾರಂಭದಲ್ಲಿ ಸಂಘದ ಉಪಾಧ್ಯಕ್ಷರಾದ ಶ್ರೀ ಸಂತೋಷ್ ಶೆಟ್ಟಿ ಜಪ್ತಿ ಹಾಗೂ ಗೌರವ ಕಾರ್ಯದರ್ಶಿಗಳಾದ ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ ಇವರು ಬಂಟರ ಸಂಘದ ವತಿಯಿಂದ ಸ್ವಾಮೀಜಿಯವರಿಗೆ ಗೌರವಾರ್ಪಣೆ ನೆರವೇರಿಸುವುದರೊಂದಿಗೆ ಯಜ್ಞ ಕಾರ್ಯಕ್ರಮವು ಮುಕ್ತಾಯವಾಯಿತು.


## ಮನವಿ

**ಸರ್ವ ಸದಸ್ಯರ ಗಮನಕ್ಕೆ:–**



ಕಿರಣ್ ಕುಮಾರ್ ಶೆಟ್ಟಿ ಎಂ

ಶ್ರೀ ಕಿರಣ್ ಕುಮಾರ್ ಶೆಟ್ಟಿ ಎಂ. , ಸದಸ್ಯತ್ವ ಸಂಖ್ಯೆ ಸಿಎಲ್003158 ಆದ ನಾನು ಬೆಂಗಳೂರು ಬಂಟರ ಸಂಘದ ಚುನಾವಣೆ 2026–29 ನೇ ಸಾಲಿನ ಕಾರ್ಯಕಾರಿ ಸಮಿತಿ ಸದಸ್ಯ ಸ್ಥಾನಕ್ಕೆ ಅಭ್ಯರ್ಥಿ ಆಗಿ ನಾಮಪತ್ರ ಸಲ್ಲಿಸಿದ್ದೆ. ಈ ನಡುವೆ ನಾನು ಕೆಲಸದಲ್ಲಿದ್ದ ಕಂಪೆನಿಯು ನನ್ನನ್ನು ವಿದೇಶಕ್ಕೆ ಕೆಲಸದ ಮೇಲೆ ಎರಡು ವರ್ಷದ ಅವಧಿಗೆ ಅನಿರೀಕ್ಷಿತ ಆಗಿ ನಿಯುಕ್ತಿಗೊಳಿಸಿದೆ. ತುರ್ತು ವಿದೇಶಕ್ಕೆ ತೆರಳಬೇಕಿದ್ದ ಕಾರಣ ನಾನು ಚುನಾವಣೆ ಕಣದಲ್ಲಿ ಮುಂದುವರಿಯುವುದು ಅಸಾಧ್ಯ.

ಆದ್ದರಿಂದ ಮಾನ್ಯ ಸದಸ್ಯರಲ್ಲಿ ನನ್ನ ಕಳಕಳಿಯ ವಿನಂತಿ ಏನೆಂದರೆ, ನನ್ನ **ಕ್ರಮ ಸಂಖ್ಯೆ 06** ನ್ನು ಆಯ್ಕೆಗೆ ಪರಿಗಣಿಸಬಾರದಾಗಿ ನಿಮ್ಮಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ. ಚುನಾವಣೆ ಕಣದಿಂದ ಸ್ವಯಂ ನಿವೃತ್ತಿ ಆಗುತ್ತಿದ್ದೇನೆ. ಕ್ಷಮೆ ಇರಲಿ.

ಇಂತೀ ನಿಮ್ಮ ಪ್ರೀತಿಯ, **ಕಿರಣ್ ಕುಮಾರ್ ಶೆಟ್ಟಿ ಎಂ.**

ADVT.

# ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ ವಿದ್ಯಾರ್ಥಿನಿಯರ ವಸತಿ ನಿಲಯ ಮತ್ತು ಭೋಜನ ಶಾಲೆಯ ಉದ್ಘಾಟನಾ ಸಮಾರಂಭ

“ಒಂದು ಕಟ್ಟಡ ನಿರ್ಮಿಸುವುದು ಅಭಿವೃದ್ಧಿಯ ಸಂಕೇತವಾಗಬಹುದು; ಆದರೆ ಒಂದು ವಿದ್ಯಾರ್ಥಿಯ ಭವಿಷ್ಯವನ್ನು ನಿರ್ಮಿಸುವುದು – ಸಮಾಜ ನಿರ್ಮಾಣದ ಸಂಕೇತ.”



ಶಿಕ್ಷಣವು ವ್ಯಕ್ತಿಯ ಬದುಕನ್ನು ರೂಪಿಸುವ ಶಕ್ತಿಯಾಗಿದ್ದರೆ, ಅದಕ್ಕೆ ಸೂಕ್ತವಾದ ವಾತಾವರಣ, ವಸತಿ, ಮಾರ್ಗದರ್ಶನ ಮತ್ತು ಪ್ರೋತ್ಸಾಹವನ್ನು ಒದಗಿಸುವುದು ಸಮಾಜದ ಮಹತ್ತರ ಜವಾಬ್ದಾರಿಯಾಗಿದೆ. ಈ ಜವಾಬ್ದಾರಿಯನ್ನು ತನ್ನ ಸೇವಾ ಧ್ಯೇಯದ ಭಾಗವನ್ನಾಗಿಸಿಕೊಂಡಿರುವ ಬಂಟರ ಸಂಘ ಬೆಂಗಳೂರು, ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕಾಗಿ ಮತ್ತೊಂದು ಮಹತ್ವದ ಹೆಜ್ಜೆಯನ್ನು ಇಟ್ಟಿದೆ.





ಇದು ಕೇವಲ ನೂತನ ಕಟ್ಟಡದ ಉದ್ಘಾಟನೆಯಲ್ಲ; ಕನಸುಗಳ ಉದ್ಘಾಟನೆ, ಸಾಧ್ಯತೆಗಳ ಉದ್ಘಾಟನೆ ಮತ್ತು ವಿದ್ಯಾರ್ಥಿಗಳ ಭವಿಷ್ಯಕ್ಕೆ ಹೊಸ ಬಾಗಿಲು ತೆರೆಯುವ ಶುಭಾರಂಭ.

ಯಾವುದೇ ಶುಭಕಾರ್ಯವನ್ನು ದೇವರ ಸ್ಮರಣೆ ಮತ್ತು ಪ್ರಾರ್ಥನೆಯೊಂದಿಗೆ ಆರಂಭಿಸುವುದು ನಮ್ಮ ಸಂಸ್ಕೃತಿಯ ವೈಶಿಷ್ಟ್ಯ. ಇದೇ ಪರಂಪರೆಯನ್ನು ಮುಂದುವರಿಸಿಕೊಂಡು, ಜುಲೈ 18ರಂದು ವಾಸ್ತು ಪೂಜೆ ಹಾಗೂ ಸುದರ್ಶನ ಹೋಮ ಸೇರಿದಂತೆ ವಿವಿಧ ಧಾರ್ಮಿಕ ವಿಧಿವಿಧಾನಗಳು ಭಕ್ತಿಭಾವದಿಂದ ನೆರವೇರಿದವು.

“ಶುಭ ಸಂಕಲ್ಪಕ್ಕೆ ಪ್ರಾರ್ಥನೆಯ ಸ್ಪರ್ಶ ದೊರೆತಾಗ,

ಸೇವೆಯ ಪಯಣಕ್ಕೆ ಆಶೀರ್ವಾದದ ಬೆಳಕು ದೊರೆಯುತ್ತದೆ.”

ಜುಲೈ 19ರಂದು ನಡೆದ ಎರಡನೇ ದಿನದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿಯರ ವಸತಿ ನಿಲಯ ಮತ್ತು ಭೋಜನಶಾಲೆಯ ಉದ್ಘಾಟನೆ ನೆರವೇರಿತು. ಕರ್ನಾಟಕ ಸರಕಾರದ ಅಡ್ವೊಕೇಟ್ ಜನರಲ್ ಶ್ರೀ ಕೆ. ಶಶಿಕಿರಣ್ ಶೆಟ್ಟಿಯವರು ವಿದ್ಯಾರ್ಥಿನಿಯರ ವಸತಿ ನಿಲಯ ಮತ್ತು ಭೋಜನ ಶಾಲೆಯನ್ನು ಉದ್ಘಾಟಿಸಿದರು.

ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ಹಾಗೂ ಅಗತ್ಯ ಸೌಲಭ್ಯಗಳು ದೊರಕಬೇಕು ಎಂಬ ಆಶಯದಿಂದ ಪ್ರಾರಂಭವಾದ ಸಂಕಲ್ಪ ಯೋಜನೆಯನ್ನು ಶಾಶ್ವತವಾಗಿಸುವ ನಿಟ್ಟಿನಲ್ಲಿ “ವಿದ್ಯಾಸಂಕಲ್ಪ ನಿಧಿ”ಗೆ ಚಾಲನೆಯನ್ನು ನೀಡಲಾಯಿತು. ಈ ಮಹತ್ವದ ಯೋಜನೆಗೆ ಸಮಾಜದ ಉದಾರ ಮನಸ್ಸಿನ ದಾನಿಗಳ ಸಹಕಾರವೂ ಪ್ರಮುಖ ಬಲವಾಗಿದೆ. ದಾನಿಗಳ ಕೊಡುಗೆ, ಸಂಘದ ಸೇವಾ ಸಂಕಲ್ಪ ಮತ್ತು ಪದಾಧಿಕಾರಿಗಳ ಪರಿಶ್ರಮದ ಫಲವಾಗಿ ಈ ಯೋಜನೆಯು ಸಾಕಾರಗೊಂಡಿವೆ. ಸಂಘದ ಅಧ್ಯಕ್ಷರು ಈ ಯೋಜನೆಯ ಬಗ್ಗೆ ಮಾತನಾಡುತ್ತಾ, ಸಂಕಲ್ಪ ಯೋಜನೆಯಡಿಯಲ್ಲಿ ಪ್ರತೀ ವಿದ್ಯಾರ್ಥಿಗೆ ವರ್ಷಕ್ಕೆ ರೂ. 1,50,000/– ರಂತೆ ಪ್ರಥಮ ಮತ್ತು ದ್ವಿತೀಯ ಪಿಯುಸಿ ವಿದ್ಯಾಭ್ಯಾಸಕ್ಕೆ ಸರಾಸರಿ 60 ವಿದ್ಯಾರ್ಥಿಗಳಿಗೆ ವರ್ಷಂಪ್ರತಿ ಸುಮಾರು 1.8 ಕೋಟಿ ರೂಪಾಯಿಗಳನ್ನು ಭರಿಸುತ್ತಿದೆ. ಈ ಯೋಜನೆಯ ಪ್ರಯೋಜನವನ್ನು ನಿರಂತರವಾಗಿರಿಸುವ ನಿಟ್ಟಿನಲ್ಲಿ ವಿದ್ಯಾಸಂಕಲ್ಪ ನಿಧಿಯನ್ನು ಸ್ಥಾಪಿಸಿದ್ದು, ಪ್ರತೀ ವರ್ಷ ಗರಿಷ್ಠ 100 ಜನ ವಿದ್ಯಾರ್ಥಿಗಳು ಈ ಯೋಜನೆಯಡಿಯಲ್ಲಿ ವಿದ್ಯಾಭ್ಯಾಸ ಪಡೆಯುವಷ್ಟು ಮೊತ್ತವನ್ನು ಕ್ರೋಢಿಕರಿಸಿ ಠೇವಣಿ ಇಡುವ ಉದ್ದೇಶ ಹೊಂದಿದ್ದು, ಪ್ರಸ್ತುತ ರೂ. 1 ಕೋಟಿಯನ್ನು ದಾನಿಗಳಿಂದ ಸಂಗ್ರಹಿಸಿ ಉಳಿದ ರೂ. 4 ಕೋಟಿಯನ್ನು ಸಂಘದಿಂದ ನೀಡಿ ಒಟ್ಟು ರೂ. 5 ಕೋಟಿ ಮೊತ್ತವನ್ನು ಸ್ಥಿರ ಠೇವಣಿಯಾಗಿ ಇಡಲಾಗುವುದು

ಎಂದರು. ದಾನಿಗಳು ರೂ. 5 ಲಕ್ಷವನ್ನು ಒಂದು ಬಾರಿ ನೀಡಿದರೆ ಆ ನಿಧಿಯನ್ನು ಶಾಶ್ವತವಾಗಿ ಇಟ್ಟು, ಅದರ ಬಡ್ಡಿಯಿಂದ ಹಾಗೂ ಸಂಘದಿಂದ ಉಳಿದ ಹಣವನ್ನು ಪಾವತಿಸಿ ಪ್ರತೀ ವರ್ಷವೂ ಓರ್ವ ವಿದ್ಯಾರ್ಥಿಯ ವಿದ್ಯಾಭ್ಯಾಸದ ಖರ್ಚನ್ನು ಭರಿಸಲಾಗುವುದು ಎಂದರು. ಈ ನಿಟ್ಟಿನಲ್ಲಿ ವಿದ್ಯಾಸಂಕಲ್ಪ ನಿಧಿ ಯೋಜನೆಗೆ ಮೊದಲ ದೇಣಿಗೆಯಾಗಿ ಸಂಘದ ಅಧ್ಯಕ್ಷರಾದ ಸಿ.ಎ. ಅಶೋಕ್ ಶೆಟ್ಟಿ ಎಂ.ರವರು ತಮ್ಮ ಕೊಡುಗೆಯನ್ನು ಹೇಳಿದ ನಂತರ, ಸಭೆಯಲ್ಲಿದ್ದ ಗಣ್ಯರು ಸ್ವಯಂಪ್ರೇರಿತರಾಗಿ ವೇದಿಕೆಗೆ ಬಂದು ಈ ಯೋಜನೆಗೆ ತಮ್ಮ ಅಮೂಲ್ಯವಾದ ಕೊಡುಗೆಯನ್ನು ಘೋಷಿಸಿದರು. ಅವರುಗಳಲ್ಲಿ ಶ್ರೀ ಶ್ರೀನಾಥ್ ಹೆಗ್ಡೆ, ಶ್ರೀಮತಿ ಉಷಾ ಹರೀಶ್ ಪ್ರಸಾದ್ ಹೆಗ್ಡೆ, ಡಾ. ದೀಪಕ್ ಶೆಟ್ಟಿ, ಶ್ರೀ ಎಂ. ಮುರಲೀಧರ ಹೆಗ್ಡೆ, ಶ್ರೀ ಸುನೀಲ್ ಕುಮಾರ್ ಶೆಟ್ಟಿ ಜೆ, ಶ್ರೀ ರಾಜೇಶ್ ಶೆಟ್ಟಿ, ಶ್ರೀ ಕೊರ್ಗಿ ಭೋಜರಾಜ ಶೆಟ್ಟಿ, ಆನಗಳ್ಳಿ ಶ್ರೀ ಕರುಣಾಕರ ಹೆಗ್ಡೆ, ಶ್ರೀ ನಾಗರಾಜ ಶೆಟ್ಟಿ, ಶ್ರೀಮತಿ ಮಾಲಾ ಭಾಸ್ಕರ್ ಶೆಟ್ಟಿ, ಶ್ರೀ ಮಧುಕರ್ ಎಂ. ಶೆಟ್ಟಿ, ಶ್ರೀ ಟಿ. ಶಿವಾನಂದ ಶೆಟ್ಟಿ, ಶ್ರೀ ಜಗನ್ನಾಥ ಶೆಟ್ಟಿ ಹೆಚ್., ಡಾ. ಜಗದೀಶ್ ವಿ. ಶೆಟ್ಟಿ, ಶ್ರೀ ಉಮೇಶ್ ಶೆಟ್ಟಿ ಎಂ.ಬಿ., ಶ್ರೀ ಡಿ. ಚಂದ್ರಹಾಸ್ ರೈ. ಇವರೆಲ್ಲರೂ ದೇಣಿಗೆಯನ್ನು ನೀಡುವುದಾಗಿ ಭರವಸೆಯನ್ನು ನೀಡಿದರು. ಶ್ರೀ ಎ.ಎನ್. ಶೆಟ್ಟಿ, ಶ್ರೀ ಅಮರನಾಥ ಹೆಗ್ಡೆ ಹಾಗೂ ಶ್ರೀ ಹರೀಶ್ ಕುಮಾರ್ ಶೆಟ್ಟಿಯವರು ಈ ಯೋಜನೆಗೆ ಕೈ ಜೋಡಿಸಿರುತ್ತಾರೆ ಹಾಗೂ ಇನ್ನೂ ಹಲವಾರು ಸದಸ್ಯರನ್ನು ಸಂಪರ್ಕಿಸುವುದಾಗಿ ಅಧ್ಯಕ್ಷರು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿವಿಧ ಬಂಟರ ಸಂಘಗಳ ಪ್ರತಿನಿಧಿಗಳು ಈ ಯೋಜನೆಗೆ ತಮ್ಮ ಸಹಕಾರವನ್ನು ನೀಡುವ ಆಶಯವನ್ನು ವ್ಯಕ್ತಪಡಿಸಿದರು. ಇದಲ್ಲದೇ ಸಂಘದ ಅಧ್ಯಕ್ಷರು ಹಲವಾರು ದಾನಿಗಳನ್ನು ಈ ಮೊದಲೇ ಸಂಪರ್ಕಿಸಿದ್ದು, ಈ ಯೋಜನೆಯನ್ನು ಅತೀ ಶೀಘ್ರದಲ್ಲಿ ಜಾರಿಗೆ ತರಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.



ಇದೇ ಸಂದರ್ಭದಲ್ಲಿ ಸಂಘದ ಚಟುವಟಿಕೆಗಳು ಮತ್ತು ಸೇವಾ ಕಾರ್ಯಗಳನ್ನು ತಂತ್ರಜ್ಞಾನದ ಮೂಲಕ ಮತ್ತಷ್ಟು ಪರಿಣಾಮಕಾರಿಯಾಗಿ ತಲುಪಿಸುವ ನಿಟ್ಟಿನಲ್ಲಿ ಮೊಬೈಲ್ ಆ್ಯಪನ್ನು ಅನಾವರಣಗೊಳಿಸಲಾಯಿತು. ಈ ಆ್ಯಪ್ ವಿವರಗಳನ್ನು ಶ್ರೀ ಪ್ರಶಾಂತ್ ರೈಯವರು ಸಭೆಗೆ ತಿಳಿಸಿದರು.

ಇದಾದ ನಂತರ 'ಸಂಕಲ್ಪ' ಯೋಜನೆಯ ಸಾಕ್ಷ್ಯಚಿತ್ರವನ್ನು ವಿದ್ಯಾರ್ಥಿಗಳಾದ ಅಂಜಲಿ ಶೆಟ್ಟಿ ಮತ್ತು ವಂಶಿಕ ಶೆಟ್ಟಿ ಅವರು ಪ್ರಸ್ತುತಪಡಿಸಿದರು. ಸಂಕಲ್ಪದ ಉದ್ದೇಶ, ವಿದ್ಯಾರ್ಥಿಗಳಿಗೆ ದೊರೆಯುತ್ತಿರುವ ಶಿಕ್ಷಣ, ವಸತಿ, ಮಾರ್ಗದರ್ಶನ ಹಾಗೂ ಅವರ ಬದುಕಿನಲ್ಲಿ ಮೂಡಿರುವ ಪರಿವರ್ತನೆಯನ್ನು ಸಾಕ್ಷ್ಯ ಚಿತ್ರದ ಮೂಲಕ ಮನಮುಟ್ಟುವ ರೀತಿಯಲ್ಲಿ ಅನಾವರಣಗೊಳಿಸಲಾಯಿತು.

ಸಾಕ್ಷ್ಯ ಚಿತ್ರದ ನಂತರ ವಿದ್ಯಾರ್ಥಿಗಳ ಅನುಭವ ಹಂಚಿಕೆ ಮತ್ತು ಭಾಷಣಗಳು ಸಭಿಕರ ಮನಮುಟ್ಟಿದವು.





ಉದ್ಘಾಟನಾ ಸಮಾರಂಭದ ಸಭಾ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕರ್ನಾಟಕ ಸರಕಾರದ ಅಡ್ವೊಕೇಟ್ ಜನರಲ್ ಶ್ರೀ ಕೆ. ಶಶಿಕಿರಣ್ ಶೆಟ್ಟಿಯವರು ಹಾಗೂ ಅತಿಥಿಗಳಾಗಿ ನಮ್ಮ ಸಂಘದ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಎಂ. ಮುರಲೀಧರ ಹೆಗ್ಡೆಯವರು ಆಗಮಿಸಿದ್ದರು. ಖ್ಯಾತ ಉದ್ಯಮಿಗಳಾದ ಶ್ರೀ ರಾಜೇಶ್ ಶೆಟ್ಟಿ, ಸಂಘದ ಪದಾಧಿಕಾರಿಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಂಘದ ಖಜಾಂಚಿಯವರಾದ ಶ್ರೀ ಅಶೋಕ್ ಕುಮಾರ್ ಶೆಟ್ಟಿ ಹೆಚ್. ರವರು ಎಲ್ಲರನ್ನೂ ಸ್ವಾಗತಿಸಿದರು. ಸಂಘದ ಗೌರವ ಕಾರ್ಯದರ್ಶಿ ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿಯವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಸಿ.ಎ. ಅಶೋಕ್ ಶೆಟ್ಟಿ

ಎಂ.ರವರು ವಹಿಸಿದ್ದರು. ಗಣ್ಯರ ಉಪಸ್ಥಿತಿ, ಅರ್ಥಪೂರ್ಣ ಸಂದೇಶಗಳು ಹಾಗೂ ಸಮಾಜದ ಅಭಿವೃದ್ಧಿಯ ಕುರಿತಾದ ಚಿಂತನೆಗಳಿಂದ ಅರ್ಥಪೂರ್ಣಗೊಂಡಿತು. ಅತಿಥಿಗಳ ಪರಿಚಯವನ್ನು ಹಾಗೂ ಅವರ ಸಾಧನೆಗಳನ್ನು ಶ್ರೀ ರಮೇಶ್ ಜಿ. ಶೆಟ್ಟಿಯವರು ಹಾಗೂ ಶ್ರೀ ಪ್ರದೀಪ್‌ರಾಜ್ ಶೆಟ್ಟಿಯವರು ಸಭೆಗೆ ಪರಿಚಯಿಸಿದರು.

ಸಭಾ ಕಾರ್ಯಕ್ರಮದಲ್ಲಿ ಸಂಘದ ಮಾಜಿ ಅಧ್ಯಕ್ಷರುಗಳಾದ ಶ್ರೀ ಡಿ. ಚಂದ್ರಹಾಸ್ ರೈ ಮತ್ತು ಶ್ರೀ ಭಗವಾನ್‌ದಾಸ್ ರೈಯವರನ್ನು ಗೌರವಿಸಲಾಯಿತು. ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸುವಲ್ಲಿ ಸಹಕರಿಸಿದ ಪದಾಧಿಕಾರಿಗಳಿಗೆ, ಕಾರ್ಯಕಾರಿ ಸಮಿತಿ ಸದಸ್ಯರುಗಳಿಗೆ, ಪ್ರಸ್ತುತ ಸಾಲಿನ ಯೋಜನಾ ಸಮಿತಿಯ ಸದಸ್ಯರುಗಳಿಗೆ ಹಾಗೂ 2022–24ನೇ ಸಾಲಿನ ಯೋಜನಾ ಸಮಿತಿಯ ಸದಸ್ಯರುಗಳಿಗೆ ಸ್ಮರಣಿಕೆಯನ್ನು ನೀಡಿ ಗೌರವಿಸಲಾಯಿತು.

ಸಭಾ ಕಾರ್ಯಕ್ರಮದ ನಿರೂಪಣೆಯನ್ನು ಡಾ. ನಂದಿನಿ ಶೆಟ್ಟಿ ಅವರು ನಡೆಸಿಕೊಟ್ಟರು. ಅಚ್ಚುಕಟ್ಟಾದ ನಿರೂಪಣೆಯ ಮೂಲಕ ಕಾರ್ಯಕ್ರಮದ ಪ್ರತಿಯೊಂದು ಘಟ್ಟವನ್ನೂ ಸುಂದರವಾಗಿ ಜೋಡಿಸಿ, ಸಭಾ ಕಾರ್ಯಕ್ರಮಕ್ಕೆ ವಿಶೇಷ ಮೆರುಗು ನೀಡಿದರು.

ಸಭಾ ಕಾರ್ಯಕ್ರಮದ ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳ ನಿರೂಪಣೆಯನ್ನು ಅಂಜಲಿ ಶೆಟ್ಟಿ ಅವರು ನಡೆಸಿಕೊಟ್ಟರು. ತಮ್ಮ ಆತ್ಮವಿಶ್ವಾಸಭರಿತ ನಿರೂಪಣೆ, ಸರಳವಾದ ಮಾತಿನ ಶೈಲಿ ಹಾಗೂ ಕಾರ್ಯಕ್ರಮಕ್ಕೆ ತಕ್ಕ ಭಾವಪೂರ್ಣ ನಿರೂಪಣೆಯ ಮೂಲಕ ಸಾಂಸ್ಕೃತಿಕ ಸಂಜೆ ಮತ್ತಷ್ಟು ಆಕರ್ಷಕವಾಗುವಂತೆ ಮಾಡಿದರು.

ಗಣಪತಿ ನೃತ್ಯ, ತುಳುನಾಡ ವೈಭವ, 'ಮಲೆನಾಡಪ್ಪಿ ಮಲೆನಾಡು' ಗುಂಪು ಗಾಯನ, ಯಕ್ಷ ವೈಭವ, ಮಿಮಿಕ್ರಿ, ಯುಗಳ ಗಾಯನ, ವೇಗದ ಹೆಜ್ಜೆ, ರಾಮ ತಾನಂಗ ಶಿಲ್ಪ, ಸಾಂಸ್ಕೃತಿಕ ವೈವಿಧ್ಯತೆ, ನೃತ್ಯ ತರಂಗ, ಪಿಳ್ಳಿ ನಾಲಿಕೆ ಸೇರಿದಂತೆ ವಿವಿಧ ಕಲಾ ಪ್ರದರ್ಶನಗಳು ವಿದ್ಯಾರ್ಥಿಗಳ ಬಹುಮುಖ ಪ್ರತಿಭೆಯನ್ನು ಅನಾವರಣಗೊಳಿಸಿದವು. ಸಂಕಲ್ಪ ಯೋಜನೆಯ ಎಲ್ಲಾ ಮಕ್ಕಳು ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.

"ಒಂದು ಸಂಸ್ಥೆಯ ನಿಜವಾದ ಶಕ್ತಿ ಅದರ ಕಟ್ಟಡದ ಎತ್ತರದಲ್ಲಿಲ್ಲ;

ಅದು ಎಷ್ಟು ಜನರ ಬದುಕನ್ನು ಎತ್ತರಕ್ಕೆ ಕೊಂಡೊಯ್ಯುತ್ತದೆ ಎಂಬುದರಲ್ಲಿ ಅಡಗಿದೆ."

"ಇಂದು ಕಟ್ಟಿದ ಈ ಬುನಾದಿಯ ಮೇಲೆ ನಾಳೆಯ ಸಾಧಕರ ಭವಿಷ್ಯ ನಿರ್ಮಾಣವಾಗಲಿ."

ಜುಲೈ 18 ಮತ್ತು 19ರಂದು ನಡೆದ ಈ ಉದ್ಘಾಟನಾ ಸಮಾರಂಭವು ಬಂಟರ ಸಂಘ ಬೆಂಗಳೂರಿನ ಸೇವಾ ಪಯಣದಲ್ಲಿ ಮತ್ತೊಂದು ಸ್ಮರಣೀಯ ಅಧ್ಯಾಯವನ್ನು ದಾಖಲಿಸಿತು.

ಧಾರ್ಮಿಕ ವಿಧಿವಿಧಾನಗಳಿಂದ ಆರಂಭಗೊಂಡು, ವಿದ್ಯಾರ್ಥಿನಿಯರ ವಸತಿ ನಿಲಯ ಮತ್ತು ಭೋಜನಶಾಲೆಯ ಉದ್ಘಾಟನೆ, ಮೊಬೈಲ್ ಅಪ್ಲಿಕೇಶನ್ ಲಾಂಚ್, ಸಂಕಲ್ಪದ ಸಾಕ್ಷ್ಯಚಿತ್ರ, ಸಭಾ ಕಾರ್ಯಕ್ರಮ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳವರೆಗೆ ಸಾಗಿದ ಈ ಸಮಾರಂಭವು ಸಂಘದ ಒಗ್ಗಟ್ಟು, ಸಮಾಜದ ಸಹಕಾರ ಮತ್ತು ವಿದ್ಯಾರ್ಥಿಗಳ ಮೇಲಿನ ಕಾಳಜಿಯ ಸುಂದರ ಪ್ರತಿಬಿಂಬವಾಗಿ ಮೂಡಿಬಂತು.

ಕಾರ್ಯಕ್ರಮದಲ್ಲಿ ಸಂಘದ ಮಾಜಿ ಅಧ್ಯಕ್ಷರುಗಳು, ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರುಗಳು, ಪ್ರಸ್ತುತ ಸಾಲಿನ ಕಾರ್ಯಕಾರಿ ಸಮಿತಿ ಸದಸ್ಯರುಗಳು, ಹಿರಿಯರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಈ ಪವಿತ್ರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು, ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ಮೂಡಿಬಂತು.



## Bunts' Sangha R.N.S. Evening Degree College

# REPORT ON "SWAGATHA - THE CLASS OF ROOKIES' INCOMING PARTY 2026"

Bunts' Sangha R.N.S. Evening Degree College had organized "Swagatha – The Class of Rookies' Incoming Party 2026" on 1st August 2026 to warmly welcome the newly admitted students to the college. The programme was organized with the active support and encouragement of the Management, Principal, staff, and students.




The programme commenced with the lighting of the ceremonial lamp by Madan Principal, Smt. Shyamala Shetty along with the teaching staff and students, symbolizing knowledge, hope, and a bright beginning for the new students. The welcome address was delivered by the Principal, who warmly welcomed the first-year students and encouraged them to make the best use of academics, cultural, sports, and personality-development opportunities provided by the institution.

The senior students conducted various fun games and activities for the newly admitted students. The juniors participated enthusiastically and thoroughly enjoyed the programme, creating a friendly and lively atmosphere. The cultural programme included colourful performances such as Yakshagana, Classical dance, and Western dance, which were greatly appreciated by everyone.



As a gesture of goodwill and encouragement, the Management extended a token of welcome to the newly admitted students. A light dinner was also arranged for all the students who attended the programme.

The programme was anchored by Aditya, a final-year student, who conducted the proceedings confidently and kept the audience engaged. The vote of thanks was proposed by Sahana, a second-year B.Com student, who expressed gratitude to the Management, Principal, staff, and students for their support and cooperation.

The programme was conducted in a joyful, friendly, and disciplined atmosphere. The enthusiastic participation of both senior and junior students made the event memorable. Overall, "Swagatha – The Class of Rookies' Incoming Party 2026" was successfully completed, providing a positive and memorable beginning to the college journey of the newly admitted students.

# Bunts' Sangha R.N.S. Vidyaniketan - II
## LUMORA 2026 – A Celebration of Creativity, Talent and Culture

Bunts Sangha RNS 2 hosted Lumora 2026, a vibrant Monsoon Fest that celebrated the creativity, confidence, talent and collaborative spirit of our students. The fest was conducted over 29th, 30th and 31st July 2026, featuring a diverse range of exciting events and activities.




Under the guidance and encouragement of Principal Mrs. Azhil Arasi Ma'am, the fest was planned and conducted with great enthusiasm, providing students with meaningful opportunities to showcase their talents and explore their creativity.

The events included Fashion Show, Skit, Umbrella Painting, Street Play, Quiz, Best out of Waste, Jewellery Making, Mehandi, Hairstyling, Entrepreneur Pitch, Debate, Digital Poster Making, Group Dance, Song and more. Each event brought out the imagination, confidence, communication skills and competitive spirit of the participants.




The colourful Fashion Show, creative Umbrella Painting, thought-provoking Street Play and energetic Skit added vibrancy to the fest, while the Quiz and Debate encouraged students to demonstrate their knowledge, reasoning and communication abilities. The Entrepreneur Pitch and Digital Poster Making encouraged innovation and the effective use of technology.

The Valedictory Function was held on 1st August 2026. The programme commenced at 10:00 a.m. and was graced by the presence of our respected President, CA Ashok Shetty Sir, who inaugurated the occasion by lighting the ceremonial lamp.

The programme also featured captivating dance performances, a song and a pre-primary fancy dress performance, adding grace and energy to the celebrations.

Lumora 2026 was truly a celebration of creativity, confidence, collaboration and culture, leaving behind cherished memories and inspiring every student to Explore, Express and Excel.

# Bunts' Sangha R.N.S. Vidyaniketan
## CREATIVITY MEETS SUSTAINABILITY!

Bunts' Sangha RNS Vidyaniketan had the privilege of hosting the Inter-School KISA "Best out of waste-Turning waste into wonder" competition, on 11th August 2026 with enthusiastic participation from students across 65 schools. The event aimed to promote creativity, innovation, environmental awareness and responsible use of waste materials.



The competition provided students with an excellent platform to transform discarded and reusable materials into useful and attractive creations. The participants displayed remarkable imagination and craftsmanship while presenting their innovative ideas. The judges Narayan S Kumbar and Shilpashree K appreciated the creativity, uniqueness, usefulness and eco-friendly approach in the exhibits. The competition also highlighted the importance of 3Rs-Reduce, Reuse and Recycle.



The programme was conducted successfully with the support and the co-operation of the school management, principal, teachers, volunteers and the participating schools. Executive members of KISA-Ms. Padmashree (Principal of Vidya Soudha School, Peenya) and Ms.Devika (Principal and Secretary of VLS International School, Basaveshwar Nagar) witnessed this event. The event was an enriching experience for all and served as a meaningful reminder that waste can be transformed into something valuable through creativity and conscious effort.



The successful hosting of the KISA inter-school "Best out of waste" competition added another feather to the cap of Bunts' Sangha RNS Vidyaniketan, reinforcing its commitment to nurturing creativity, environmental responsibility and holistic development among young learners.

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

324, ಕಾರ್ಡ್ ರಸ್ತೆ, ವಿಜಯನಗರ, ಬೆಂಗಳೂರು–560040.
ಫೋನ್: 080–23399323 / 23399636
Email: buntsanghabangalore@yahoo.in

## ಆಡಳಿತ ಮಂಡಳಿಯ ಆಯ್ಕೆ ಚುನಾವಣೆ – 2026–29

**ಗೌರವಾನ್ವಿತ ಸದಸ್ಯರೇ,**

ಸಂಘದ ನೂತನ ಆಡಳಿತ ಮಂಡಳಿಯ ಆಯ್ಕೆ ಚುನಾವಣೆಯು ದಿನಾಂಕ 20.09.2026ರಂದು ಬೆಳಿಗ್ಗೆ 9.00 ಘಂಟೆಯಿಂದ ಸಂಜೆ 5.00 ಘಂಟೆಯವರೆಗೆ ನಡೆಯಲಿದೆ. ಈ ಚುನಾವಣೆಯ ಮತದಾನವು ಬಂಟರ ಸಂಘದ ಆವರಣ ಹಾಗೂ ಮುಲ್ಕಿ ಸುಂದರರಾಮ್ ಶೆಟ್ಟಿ ಸ್ಮಾರಕ ಎಮ್.ಎಸ್.ಆರ್.ಎಸ್. ನಗರ ಟ್ರಸ್ಟ್ ನಂ. 114/2, 9ನೇ ಮೈನ್, 7ನೇ ಕ್ರಾಸ್, ಮುಖ್ಯ ಉದ್ಯಾನವನದ ಹತ್ತಿರ, ಮುಲ್ಕಿ ಸುಂದರರಾಮ್ ಶೆಟ್ಟಿ ನಗರ, ಬಿಳೇಕಹಳ್ಳಿ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560076 ಇಲ್ಲಿ ಏಕಕಾಲದಲ್ಲಿ ನಡೆಯಲಿದೆ.

ನಮ್ಮ ದಾಖಲೆಗಳ ಪ್ರಕಾರ ಈ ಕೆಳಗಿನ ಪಿನ್‌ಕೋಡ್ ವ್ಯಾಪ್ತಿಯಲ್ಲಿ ಬರುವ ಸದಸ್ಯರು ಎಂ.ಎಸ್.ಆರ್.ಎಸ್. ನಗರದ ಮತಗಟ್ಟೆಯಲ್ಲಿ ಮಾತ್ರ ಮತದಾನ ಮಾಡಲು ಅರ್ಹರಾಗಿರುತ್ತಾರೆ.

560011, 560029, 560034, 560041, 560068, 560069, 560076, 560078, 560083, 560095, 560099, 560100, 560102, 560105, 562106, 562107, 560108, 560109, 560114.

ದಿನಾಂಕ 31.03.2025ರವರೆಗೆ ನೋಂದಾಯಿಸಲ್ಪಟ್ಟ ಸದಸ್ಯರು **(ಸದಸ್ಯತ್ವ ಸಂಖ್ಯೆ : ಪಿ.ಎಲ್.018856ರವರೆಗೆ)** ಮತದಾನದಲ್ಲಿ ಭಾಗವಹಿಸಲು ಅರ್ಹರಾಗಿದ್ದಾರೆ. ಸದಸ್ಯರು ತಮ್ಮ ಹೆಸರನ್ನು ಕಛೇರಿಯಲ್ಲಿ ತಮ್ಮ ಮತದಾರರ ಪಟ್ಟಿಯಲ್ಲಿ ಪರೀಕ್ಷಿಸಲು ಕೋರಲಾಗಿದೆ. ಸದಸ್ಯರಾಗಿದ್ದು ಅವರ ಹೆಸರು ಪಟ್ಟಿಯಲ್ಲಿ ಇಲ್ಲದಿದ್ದಲ್ಲಿ ಕೂಡಲೇ ದಾಖಲೆಗಳೊಂದಿಗೆ ಸಂಘದ ಕಛೇರಿಯನ್ನು ಸಂಪರ್ಕಿಸಲು ಕೋರಲಾಗಿದೆ.

ಮತದಾನಕ್ಕೆ ಸದಸ್ಯರ ಗುರುತು ಪತ್ರ (Membership ID Card)ವನ್ನು ತಪ್ಪದೇ ತರಬೇಕಾಗಿ ವಿನಂತಿ. ಈ ತನಕವೂ ತಮ್ಮ ಗುರುತಿನ ಚೀಟಿ ಪಡೆಯದ ಸದಸ್ಯ ಬಾಂಧವರು ಸಂಘದ ಕಛೇರಿಯನ್ನು ಸಂಪರ್ಕಿಸಿ ಕೂಡಲೇ ತಮ್ಮ ID card ಗಳನ್ನು ಪಡೆದುಕೊಳ್ಳುವಂತೆ ಈ ಮೂಲಕ ವಿನಂತಿಸುತ್ತಿದ್ದೇವೆ.

ಸಹಿ/–

**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

# ಭಾವಪೂರ್ಣ ಶ್ರದ್ಧಾಂಜಲಿ



## ಶ್ರೀ ಬಿ.ಎಲ್.ಎನ್. ಹೆಗ್ಡೆ.

**(ಬನ್ನಂಪಳ್ಳಿ ಲಕ್ಷ್ಮ ನಾರಾಯಣ ಹೆಗ್ಡೆ)**

**ಮಾಜಿ ಅಧ್ಯಕ್ಷರು, ಬಂಟರ ಸಂಘ ಬೆಂಗಳೂರು**

**ಜನನ: 10.07.1937** **ನಿಧನ: 25.08.2026**

ಬೆಂಗಳೂರು ಬಂಟರ ಸಂಘದ ಹಿರಿಯ ಸದಸ್ಯರು ಹಾಗೂ ಮಾಜಿ ಅಧ್ಯಕ್ಷರು, ನಮ್ಮೆಲ್ಲರಿಗೂ ಮಾರ್ಗದರ್ಶಕರಾಗಿದ್ದ ಶ್ರೀ ಬಿ.ಎಲ್.ಎನ್. ಹೆಗ್ಡೆಯವರು ದೈವಾಧೀನರಾಗಿರುವುದು ನಮ್ಮ ಬಂಟ ಸಮುದಾಯಕ್ಕೆ ತುಂಬಲಾರದ ನಷ್ಟವಾಗಿದೆ.

ತಮ್ಮ ಆತ್ಮಕ್ಕೆ ಚಿರಶಾಂತಿ ದೊರಕಲಿ ಹಾಗೂ ತಮ್ಮ ಕುಟುಂಬದವರಿಗೆ ದುಃಖವನ್ನು ಸಹಿಸುವ ಶಕ್ತಿಯನ್ನು ಪರಮಾತ್ಮನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇವೆ.

**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

**ಸಿಎ. ಅಶೋಕ್ ಶೆಟ್ಟಿ ಎಂ.**
ಅಧ್ಯಕ್ಷರು

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಸರ್ವ ಸದಸ್ಯರು**
**ಬಂಟರ ಸಂಘ ಬೆಂಗಳೂರು**

# ಶ್ರದ್ಧಾಂಜಲಿ

| | |
|---|---|
|  ಯು. ಕರುಣಾಕರ ಶೆಟ್ಟಿ ಸದಸ್ಯತ್ವ ಸಂಖ್ಯೆ: CL005548 | ಉಳಿಯರಗೋಳಿ ದಿ. ಬಿ. ತುಕ್ಕು ಶೆಟ್ಟಿ ಮತ್ತು ಕಾಪು ಕೋತ್ವಾಲ್‌ಗುತ್ತು ದಿ. ಗುಲಾಬಿ ಶೆಟ್ಟಿ ಇವರ ಪುತ್ರ ಯು. ಕರುಣಾಕರ ಶೆಟ್ಟಿಯವರು ದಿನಾಂಕ 24.07.2026 ರಂದು ತಮ್ಮ 74ನೇ ವಯಸ್ಸಿನಲ್ಲಿ ದೈವಾಧೀನರಾಗಿರುತ್ತಾರೆ. ಇವರು ತಮ್ಮ ಪತ್ನಿ ಮಂಗಳೂರು ಮಲಾರ್ ಬೀಡು ಶ್ರೀಮತಿ ಸಬಿತಾ ಕೆ. ಶೆಟ್ಟಿ, ಇಬ್ಬರು ಪುತ್ರಿಯರು, ಅಳಿಯಂದಿರು, ಓರ್ವ ಸಹೋದರಿ, ಮೂವರು ಸಹೋದರರು, ಕುಟುಂಬಸ್ಥರು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ. |
|  ವಿಜಯ ಪ್ರಕಾಶ್ ಹೆಗ್ಡೆ ಸದಸ್ಯತ್ವ ಸಂಖ್ಯೆ: CL000856 | ಉಡುಪಿ ತಾಲೂಕು ಒಂತಿಬೆಟ್ಟುಬೀಡು ದಿ. ಎನ್. ವಾದಿರಾಜ ಹೆಗ್ಡೆ ಮತ್ತು ಉಡುಪಿ ತಾಲೂಕು ಇರ್ಮಾಡಿ ದಿ. ಸರೋಜಿನಿ ವಿ. ಹೆಗ್ಡೆ ಇವರ ಪುತ್ರ ಹಾಗೂ ಉಡುಪಿ ತಾಲೂಕು ಕಾಪು ಕೋತಾಲ್‌ಗುತ್ತು ದಿ. ಶಾಂಭವಿ ವಿ ಹೆಗ್ಡೆ ಇವರ ಪತಿಯಾದ ವಿಜಯ ಪ್ರಕಾಶ್ ಹೆಗ್ಡೆಯವರು ದಿನಾಂಕ 31.07.2026 ರಂದು ತಮ್ಮ 86ನೇ ವಯಸ್ಸಿನಲ್ಲಿ ದೈವಾಧೀನರಾಗಿರುತ್ತಾರೆ. ಇವರು ಓರ್ವ ಪುತ್ರಿ, ಅಳಿಯ, ಮೂವರು ಸಹೋದರರು, ಮೂವರು ಸಹೋದರಿಯರು, ಕುಟುಂಬಸ್ಥರು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ. |
|  ರವೀಂದ್ರ ರೈ ಸದಸ್ಯತ್ವ ಸಂಖ್ಯೆ: CL002282 | ಇಚ್ಲಂಪಾಡಿ ದಿ. ನಾರಾಯಣ ರೈ ಮತ್ತು ಪೆರ್ವೊಡಿ ಬೀಡು ದಿ. ಲಕ್ಷ್ಮಿ ರೈ ಇವರ ಪುತ್ರ ರವೀಂದ್ರ ರೈಯವರು ದಿನಾಂಕ 07.08.2026 ರಂದು ತಮ್ಮ 80ನೇ ವಯಸ್ಸಿನಲ್ಲಿ ದೈವಾಧೀನರಾಗಿರುತ್ತಾರೆ. ಇವರು ತಮ್ಮ ಪತ್ನಿ ಉಡುಪಿ ಜಿಲ್ಲೆ ಪೆರ್ಡೂರು ಶ್ರೀಮತಿ ಪ್ರತಿಮಾ ಪಿ.ರೈ, ಓರ್ವ ಪುತ್ರ, ಸೊಸೆ, ಮೊಮ್ಮಗ, ಇಬ್ಬರು ಸಹೋದರರು, ಓರ್ವ ಸಹೋದರಿ, ಕುಟುಂಬಸ್ಥರು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ. |
|  ಪದ್ಮಶೇಖರ್ ಶೆಟ್ಟಿ ಕೆ.ಪಿ. ಸದಸ್ಯತ್ವ ಸಂಖ್ಯೆ: CL006819 | ಬೆಜ್ಜದಗುತ್ತು ಉಜಾರ್ ಬಂಬ್ರಾನ ದಿ. ಕೊರಗಪ್ಪ ಶೆಟ್ಟಿ ಪಿ. ಮತ್ತು ಕಂಬಾರ್‌ಗುತ್ತು ಉಜಾರ್ ಬಂಬ್ರಾನ ದಿ. ಅಕ್ಕಮ್ಮ ಕೆ. ಶೆಟ್ಟಿ ಇವರ ಪುತ್ರ ಪದ್ಮಶೇಖರ್ ಶೆಟ್ಟಿ ಕೆ. ಪಿ. ಯವರು ದಿನಾಂಕ 09.08.2026 ರಂದು ತಮ್ಮ 58ನೇ ವಯಸ್ಸಿನಲ್ಲಿ ದೈವಾಧೀನರಾಗಿರುತ್ತಾರೆ. ಇವರು ತಮ್ಮ ಪತ್ನಿ ಕಾಸರಗೋಡು ಶಿರಿಬಾಗಿಲು ಶ್ರೀಮತಿ ವಿಶಾಲ ಪಿ. ಶೆಟ್ಟಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಓರ್ವ ಸಹೋದರ, ಓರ್ವ ಸಹೋದರಿ, ಕುಟುಂಬಸ್ಥರು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ. |
|  ಬಿ.ಎಲ್.ಎನ್. ಹೆಗ್ಡೆ (ಬನ್ನಂಪಳ್ಳಿ ಲಕ್ಷ್ಮಿ ನಾರಾಯಣ ಹೆಗ್ಡೆ) ಸದಸ್ಯತ್ವ ಸಂಖ್ಯೆ: CL000349 | ಬೆಂಗಳೂರು ಬಂಟರ ಸಂಘ ಮಾಜಿ ಅಧ್ಯಕ್ಷರು, ಮೊದಲ್ತಾವು ಕುಟುಂಬದ ದಿ. ದುಗ್ಗಪ್ಪ ಶೆಟ್ಟಿ ಮತ್ತು ಬನ್ನಂಪಳ್ಳಿ ಕುಟುಂಬದ ದಿ. ಕಾವೇರಿ ಹೆಗ್ಡೆ ಇವರ ಪುತ್ರ ಬನ್ನಂಪಳ್ಳಿ ಲಕ್ಷ್ಮಿ ನಾರಾಯಣ ಹೆಗ್ಡೆ (ಬಿ.ಎಲ್.ಎನ್. ಹೆಗ್ಡೆ) ಯವರು ದಿನಾಂಕ 25.08.2026 ರಂದು ತಮ್ಮ 89ನೇ ವಯಸ್ಸಿನಲ್ಲಿ ದೈವಾಧೀನರಾಗಿರುತ್ತಾರೆ. ಇವರು ತಮ್ಮ ಪತ್ನಿ ಸೌಕೂರು ಕುಟುಂಬದ ಶ್ರೀಮತಿ ಕೌಸಲ್ಯ ಎಲ್.ಎನ್. ಹೆಗ್ಡೆ, ಓರ್ವ ಪುತ್ರಿ, ಇಬ್ಬರು ಪುತ್ರರು, ಅಳಿಯ, ಸೊಸೆಯಂದಿರು, ಆರು ಮೊಮ್ಮಕ್ಕಳು, ಕುಟುಂಬಸ್ಥರು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ. |
|  ಡಾ.ಕೆ. ಸುಕುಮಾರ್ ಶೆಟ್ಟಿ ಸದಸ್ಯತ್ವ ಸಂಖ್ಯೆ: CL001902 | ಸಾಗು ದೊಡ್ಡಮನೆ ದಿ. ಭೋಜ ಶೆಟ್ಟಿ ಮತ್ತು ಕುಬೆವೂರು ದಿ. ಸವಿತಾ ಶೆಟ್ಟಿ ಇವರ ಪುತ್ರ ಹಾಗೂ ಸಚರ ಪರಾರಿ ದಿ. ಇಂದಿರಾ ಎಸ್. ಶೆಟ್ಟಿ ಇವರ ಪತಿಯಾದ ಡಾ. ಕುಬೆವೂರು ಸುಕುಮಾರ್ ಶೆಟ್ಟಿಯವರು ದಿನಾಂಕ 26.08.2026 ರಂದು ತಮ್ಮ 86ನೇ ವಯಸ್ಸಿನಲ್ಲಿ ದೈವಾಧೀನರಾಗಿರುತ್ತಾರೆ. ಇವರು ಮೂವರು ಪುತ್ರರು, ಸೊಸೆಯಂದಿರು, ಇಬ್ಬರು ಸಹೋದರಿಯರು, ಕುಟುಂಬಸ್ಥರು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ |
|  ಹೇಮಲತಾ ಎಸ್. ಶೆಟ್ಟಿ ಸದಸ್ಯತ್ವ ಸಂಖ್ಯೆ: CL001295 | ಕೆದಿಂಜೆ ಕೂಟಾಯಿ ದಿ. ಆನಂದ ಶೆಟ್ಟಿ ಮತ್ತು ಎಲ್ಲೂರುಗುತ್ತು ದಿ. ಸುಮತಿ ಎಸ್. ಶೆಟ್ಟಿ ಇವರ ಪುತ್ರಿ ಹೇಮಲತಾ ಎಸ್. ಶೆಟ್ಟಿಯವರು ದಿನಾಂಕ 28.08.2026 ರಂದು ತಮ್ಮ 74ನೇ ವಯಸ್ಸಿನಲ್ಲಿ ದೈವಾಧೀನರಾಗಿರುತ್ತಾರೆ. ಇವರು ತಮ್ಮ ಪತಿ ಪಳ್ಳಿ ಶಂಕರ್ ಶೆಟ್ಟಿ ಎಸ್., ಇಬ್ಬರು ಪುತ್ರಿಯರು, ಅಳಿಯ, ಓರ್ವ ಮೊಮ್ಮಗ, ಕುಟುಂಬಸ್ಥರು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ. |

**"ಸಹಕಾರ ಮಾಣಿಕ್ಯ"**

# ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ.

ESTD: 1994

ಕೇಂದ್ರ ಕಛೇರಿ: 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್,
ಮಂಗಳೂರು-575 003. ಫೋನ್: 2492275

Website: www.ramakrishnacredit.com E-mail: ho@ramakrishnacredit.com



ಶ್ರೀ ಕೆ. ಜೈರಾಜ್ ಬಿ. ರೈ
ಅಧ್ಯಕ್ಷರು

**30.06.2026ಕ್ಕೆ ರೂ.721 ಕೋಟಿ ಠೇವಣಿ, ರೂ.641 ಕೋಟಿ ಸಾಲದೊಂದಿಗೆ ರೂ.1362 ಕೋಟಿ ಮೀರಿದ ವ್ಯವಹಾರ**

ಅವಿಭಜಿತ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ವ್ಯಾಪ್ತಿಯಲ್ಲಿ 31 ಶಾಖೆಗಳನ್ನು ಹೊಂದಿ ಕಾರ್ಯಾಚರಿಸುತ್ತಿರುವ ಮಂಗಳೂರಿನ ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ., 2026-27ನೇ ಸಾಲಿನ ಮೊದಲ ತ್ರೈಮಾಸಿಕ ಅವಧಿ 30.06.2026ರ ಅಂತ್ಯಕ್ಕೆ ರೂ.721 ಕೋಟಿ ಠೇವಣಿ ಮತ್ತು ರೂ.641 ಕೋಟಿ ಸಾಲದೊಂದಿಗೆ ರೂ.1362 ಕೋಟಿ ಒಟ್ಟು ವ್ಯವಹಾರವನ್ನು ದಾಖಲಿಸಿರುವುದು.

**ಜೂನ್ 2025ಕ್ಕೆ ಹೋಲಿಸಿದಲ್ಲಿ ಜೂನ್ 2026ಕ್ಕೆ ಆಗಿರುವ ಪ್ರಗತಿಯ ಪಕ್ಷಿನೋಟ (ರೂ. ಲಕ್ಷಗಳಲ್ಲಿ)**

| ಕ್ರ.ಸಂ. | ಕಾರ್ಯ ವಿಭಾಗ | ಜೂನ್ 2025ಕ್ಕೆ ಇದ್ದಂತೆ | ಜೂನ್ 2026ಕ್ಕೆ ಇದ್ದಂತೆ | ಹೆಚ್ಚಳ (ರೂ) | ಶೇಕಡಾವಾರು ವೃದ್ಧಿ |
|---|---|---|---|---|---|
| 01 | ಠೇವಣಾತಿಗಳು | ₹ 606 Cr. | ₹ 721 Cr. | ₹ 115 ಕೋಟಿ | 19% |
| 02 | ಸಾಲ ಮತ್ತು ಮುಂಗಡ | ₹ 521 Cr. | ₹ 641 Cr. | ₹ 120 ಕೋಟಿ | 23% |
| 03 | ಒಟ್ಟು ವ್ಯವಹಾರ | ₹ 1127 Cr. | ₹ 1362 Cr. | ₹ 235 ಕೋಟಿ | 21% |
| 04 | ನಿವ್ವಳ ಲಾಭ | ₹ 2.63 Cr. | ₹ 3.74 Cr. | ₹ 1.11 ಕೋಟಿ | 42% |
| 05 | ನಿವ್ವಳ ಅನುತ್ಪಾದಕ ಆಸ್ತಿ | 0% | 0% | | |

30.06.2025ಕ್ಕೆ ಇದ್ದ ವ್ಯವಹಾರವನ್ನು 30.06.2026ರ ವ್ಯವಹಾರಕ್ಕೆ ಹೋಲಿಸಿದಾಗ

1 ಠೇವಣಾತಿಯಲ್ಲಿ ರೂ.115 ಕೋಟಿ ಹೆಚ್ಚಳ (ಶೇ.19 ವೃದ್ಧಿ)
2 ಸಾಲ ಮತ್ತು ಮುಂಗಡದಲ್ಲಿ ರೂ.120 ಕೋಟಿ ಹೆಚ್ಚಳ (ಶೇ.23 ವೃದ್ಧಿ).
3 ಒಟ್ಟು ವ್ಯವಹಾರದಲ್ಲಿ ರೂ.235 ಕೋಟಿ ವೃದ್ಧಿ. (ಶೇ.21 ವೃದ್ಧಿ)
4 ನಿವ್ವಳ ಅನುತ್ಪಾದಕ ಆಸ್ತಿ (Net NPA) 0%.
5 ನಿವ್ವಳ ಲಾಭದಲ್ಲಿ ರೂ.1.11 ಕೋಟಿ ಹೆಚ್ಚಳ (ಶೇ.42 ವೃದ್ಧಿ)

ಸ್ಥಾಪನೆಯಾದನಿಂದ ನಿರಂತರ ಡಿವಿಡೆಂಡನ್ನು ನೀಡುತ್ತಾ ಬಂದ ಸೊಸೈಟಿ, 2024-25ನೇ ಸಾಲಿಗೆ ಶೇ.25 ಡಿವಿಡೆಂಡನ್ನು ನೀಡಿದ್ದು, ಕಳೆದ ಏಳು ವರ್ಷಗಳಿಂದ ಗರಿಷ್ಠ 25% ಡಿವಿಡೆಂಡನ್ನು ನೀಡುತ್ತಿದೆ.

ಸಂಘದ ನಿವ್ವಳ ಅನುತ್ಪಾದಕ ಆಸ್ತಿಯು ಕಳೆದ 18 ವರ್ಷಗಳಿಂದ ಶೂನ್ಯ ಪ್ರಮಾಣದಲ್ಲಿದ್ದು, ಸಾಲ ಮರುಪಾವತಿಯು ಉತ್ತಮವಾಗಿರುತ್ತದೆ.

31.03.2027ಕ್ಕೆ ಒಟ್ಟು ವ್ಯವಹಾರದ ಗುರಿ ರೂ.1515 ಕೋಟಿಯಾಗಿದ್ದು, ಅದನ್ನು ತಲುಪಲು ಸರ್ವ ಪ್ರಯತ್ನ ಮಾಡಲಾಗಿದೆ ಹಾಗೂ ಸಂಘವು ಸ್ಥಾಪನೆಯಾದಂದಿನಿಂದ, ಸಂಘದ ಮೇಲೆ ಪ್ರೀತಿ ವಿಶ್ವಾಸವನ್ನಿಟ್ಟು, ಸಂಘದ ಈ ಎಲ್ಲಾ ಪ್ರಗತಿ ಸಾಧನೆಗಳಿಗೆ ಕಾರಣಕರ್ತರಾಗಿ, ನಮಗೆ ಅಚಲವಾದ ಬೆಂಬಲವನ್ನು ನೀಡುತ್ತಿರುವ, ಎಲ್ಲಾ ಸದಸ್ಯ ಬಾಂಧವರಿಗೆ, ಮಾರ್ಗದರ್ಶನ ನೀಡುತ್ತಿರುವ ಸಂಘದ ಆಡಳಿತ ಮಂಡಳಿಯ ಎಲ್ಲಾ ನಿರ್ದೇಶಕರುಗಳಿಗೆ, ಶಾಖಾ ಸಲಹಾ ಸಮಿತಿ ಅಧ್ಯಕ್ಷರು ಮತ್ತು ಸಮಿತಿ ಸದಸ್ಯರುಗಳಿಗೆ ಹಾಗೂ ಪ್ರಾಮಾಣಿಕ ಸೇವೆಯನ್ನು ಸಲ್ಲಿಸುತ್ತಿರುವ ಸಿಬ್ಬಂದಿ ವೃಂದಕ್ಕೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಆಡಳಿತ ಮಂಡಳಿ**

**ಲಕ್ಷ್ಮಿ ಜಯಪಾಲ ಶೆಟ್ಟಿ**
**ಉಪಾಧ್ಯಕ್ಷರು**

**ಕೆ. ಜೈರಾಜ್ ಬಿ. ರೈ**
**ಅಧ್ಯಕ್ಷರು**

**ನಿರ್ದೇಶಕರುಗಳು**

**ಶ್ರೀಮತಿ ಎ. ರತ್ನಕಾಂತಿ ಶೆಟ್ಟಿ, ಸರ್ವಶ್ರೀ ಕೆ. ಸೀತಾರಾಮ ರೈ ಸವಣೂರು, ಡಾ। ಕೆ. ಸುಭಾಶ್ಚಂದ್ರ ಶೆಟ್ಟಿ, ಪಿ. ಶಿವರಾಮ ಅಡ್ಯಂತಾಯ, ಸಿಎ ಎಚ್. ಆರ್. ಶೆಟ್ಟಿ, ವಿಠಲ ಪಿ. ಶೆಟ್ಟಿ, ಯಂ. ರಾಮಯ ಶೆಟ್ಟಿ, ಅರುಣ್ ಕುಮಾರ್ ಶೆಟ್ಟಿ, ಪಿ.ಬಿ. ದಿವಾಕರ ರೈ, ರವೀಂದ್ರನಾಥ ಜಿ. ಹೆಗ್ಡೆ, ಕುಂಬ್ರ ದಯಾಕರ ಆಳ್ವ, ಬೆಳ್ಳಿಪಾಡಿ ಪ್ರಸಾದ್ ಕೌಶಲ್ ಶೆಟ್ಟಿ, ಅರಿಯಡ್ಕ ಚಿಕ್ಕಪ್ಪ ನ್ಯಾಕ್ ಮತ್ತು ಡಾ। ಬಿ. ಸಂಜೀವ ರೈ**

**ಮಹಾಪ್ರಬಂಧಕರು ಶ್ರೀ ಗಣೇಶ್‌ಜಿ.ಕೆ.**

ADVT.




## From 14th November to 23rd November 2026

- **Sightseeing:**
- Visit Ba Dinh Square - the Biggest Square in Hanoi
- Visit the Hoani Kiem Lake & enjoy the water Puppet Show
- Enjoy 1 Nt in 5 Star Halong Bay Cruise- Enjoy all Cruise activities
- Visit Bay Mau Coconut Forest by Basket Boat
- Enjoy the Cable Car to the Summit of mountains
- Visit Ba Na hills with many different attractions - Funicular Ride, Le Jardin D'Amour Lin Ung Pagoda, Thick Ca Buddhist Statue etc.
- Enjoy city tour of Hochi minh city
- Visit Ho Chi Minh Mausoleum, Fish pond & one pillar pagoda
- Visit to War Remnants Museum, Reunification palace, Ben Thanh market etc
- Enjoy visit to Cu Chi Tunnels, My Tho - the Homeland of coconut factories, Vin Trang Pagoda









**COST INCLUSIONS :** To & Fro Economy class air tickets from Mumbai to Hanoi, Hanoi to Da Nong, Da Nong to Saigon & Saigon to Mumbai, 1 nt Accommodation in Hanoi with early check in for previous night, 1 nt in 5 star Halong Bay Cruise, 3 Nts in Da Nang, 3 Nts in Hochimin city, all lunches and dinners in Indian / local restaurants, all sight seeing by 40 seater A/C coach. *Cost does not include : All expenses of personal nature*

Please note that the rates are subject to change based on the prevailing USD exchange rate (ROE) at the time of your final payment. The current rates have been calculated using a USD exchange rate of Rs. 97.

## Cost : Rs. 142000/- plus 2% TCS (Refundable)- Ex Mumbai

For any further details please contact:

IATA Approved

Canara Tours & Travels Pvt. Ltd
....... good people to travel with

**Mr. S. B. Shetty - 9820510043** E-mail : sbshetty@canaratravels.com
**Mr. T. T. Mada – 9820632934**
2, Srishti Complex, Opp. L & T Gate No.7, Saki Vihar Rd., Powai, Mumbai-72. **Tel. : (022) 42215000**
Website : www.canaratravels.com
**Mr. Mohan - Mob No. 9980248449**
G/3, Inland Ornate Opp. Ocean Pearl, Navabharath Circle, Kodialbail, Mangalore-575003 Tel.: 0824-4258505/06
**Mr. Prabhat Shetty - 9481950340** (Manipal)

ADVT.

ಸ್ಥಾಪನೆ: 1997

ದೂರವಾಣಿ : 080-23393444
ಮೊಬೈಲ್ : 87220 06082

# ವಿಜಯ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಲಿ.,
# Vijaya Souharda Credit Co Operative Society Ltd.,

ನಂ.5, ಎಸ್.ಜೆ. ಎಲಿಗೆನ್ಸ್, 4ನೇ ಮಹಡಿ, ಚಂದ್ರ ಲೇಔಟ್ ಮುಖ್ಯ ರಸ್ತೆ, ಇನ್‌ಕಮ್ ಟ್ಯಾಕ್ಸ್ ಬಡಾವಣೆ, ವಿಜಯನಗರ ಬೆಂಗಳೂರು - 560040.
E-mail : vijaya_souharda@yahoo.in, vijayasouharda@rediffmail.com

ಸಹಕಾರಿಯು ಸುಸ್ಥಿರ ಬೆಳವಣಿಗೆಯತ್ತ ಸಾಗುತ್ತಿದ್ದು, 28 ಸಂವತ್ಸರಗಳನ್ನು ಮುಗಿಸಿರುವುದು ಸಂತೋಷದಾಯಕ. ನಮ್ಮ ಸಹಕಾರಿಯು ನಿಶ್ಚಿತ ಠೇವಣಿಗಳಿಗೆ ಆಕರ್ಷಕ ಬಡ್ಡಿ ದರವನ್ನು ನೀಡಲಾಗುತ್ತಿದೆ. ಷೇರುದಾರರಿಗೆ ಆಕರ್ಷಣೀಯ ಡಿವಿಡೆಂಡ್ ನೀಡುತ್ತಿದ್ದೇವೆ. ಸಹಕಾರಿಯ ಸದಸ್ಯರಾಗುವ ಮೂಲಕ ವಿವಿಧ ಠೇವಣಿ, ಸಾಲ ಸೌಲಭ್ಯವನ್ನು ಪಡೆದುಕೊಳ್ಳಬಹುದು. ಪಿಗ್ಮಿ ಸಂಗ್ರಹಣಾ ವ್ಯವಸ್ಥೆ ಕಲ್ಪಿಸಲಾಗಿದೆ. ಹೊಸದಾಗಿ 01.09.2024 ರಿಂದ ಆವರ್ತ ಠೇವಣಿ(ಖ.ಆ)ಯನ್ನು ಪ್ರಾರಂಭಿಸಿದ್ದು ಹಣ ತೊಡಗಿಸಿದವರಿಗೆ ವಾರ್ಷಿಕ 7% ಬಡ್ಡಿ ನೀಡಲಾಗುವುದು. ಸದಸ್ಯರು ಇವುಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಕೋರಲಾಗಿದೆ.

## ಸಾಲಗಳು

- ಜಾಮೀನು ಸಾಲ : ರೂ. 50,000.00 ದಿಂದ 2,00,000.00 ದವರೆಗೆ 24 ತಿಂಗಳಿನಿಂದ 36 ತಿಂಗಳವರೆಗೆ
- ವಾಹನ ಸಾಲ : 1 ಲಕ್ಷದಿಂದ 10 ಲಕ್ಷ – 24 ತಿಂಗಳಿನಿಂದ 36 ತಿಂಗಳವರೆಗೆ
- ವ್ಯಾಪಾರ ಸಾಲ : 1 ಲಕ್ಷದಿಂದ 20 ಲಕ್ಷ
- ಗೃಹ ನಿರ್ಮಾಣ ಸಾಲ ಮತ್ತು ನಿವೇಶನ ಖರೀದಿ ಸಾಲ : 1 ಲಕ್ಷದಿಂದ 60 ಲಕ್ಷ – 120 ತಿಂಗಳು ಗರಿಷ್ಠ ಅವಧಿ

**ಸಾಲದ ಬಡ್ಡಿ ದರ : 2 ಲಕ್ಷದವರೆಗೆ 13%, 2 ಲಕ್ಷ ಮೇಲ್ಪಟ್ಟು 12%**

2016–17 ರಿಂದ 2019–20 ರವರೆಗೆ ಸತತವಾಗಿ 15% ಹಾಗೂ 2020–2021 ರಲ್ಲಿ 12% ಮತ್ತು 2021 ರಿಂದ 2024 ರವರೆಗೆ 13% 2025 12%

ಸಹಕಾರಿಯ ಪ್ರಗತಿಗೆ ಕೈ ಜೋಡಿಸಿ ಸಹಕಾರಿ ಕ್ಷೇತ್ರದಲ್ಲಿ ಅದ್ಭುತ ಸಾಧನೆಗೆ ನೆರವಾಗಿ.

**ವ್ಯವಹಾರದ ವೇಳೆ :**

| | ಬೆಳಿಗ್ಗೆ | ಸಾಯಂಕಾಲ |
|---|---|---|
| ಸೋಮವಾರದಿಂದ ಶುಕ್ರವಾರದವರೆಗೆ | 9–30 ರಿಂದ 1–30 | 2–00 ರಿಂದ 6–00 |
| ಶನಿವಾರ | 9–30 ರಿಂದ 1–30 | ರಜಾ |
| ಭಾನುವಾರ | ವಾರದ ರಜಾ ದಿನ | |

**2026 – 2031ರ ಸಾಲಿನ ಆಡಳಿತ ಮಂಡಳಿಯ ನಿರ್ದೇಶಕರು**

ಶ್ರೀ ಬಿ. ಸಂತೋಷ್ ಕುಮಾರ್ ಶೆಟ್ಟಿ
ಶ್ರೀ ಕೆ. ಪ್ರಮೋದ್ ಚಂದ್ರ ಭಂಡಾರಿ
ಶ್ರೀ ರವೀಂದ್ರನಾಥ್ ಮಾರ್ಲ
ಶ್ರೀಮತಿ ಹೀರಾ ಅನೂಪ್ ಹೆಗ್ಡೆ
ಶ್ರೀ ಡಿ. ಚಂದ್ರಹಾಸ್ ರೈ
ಶ್ರೀ ಟಿ. ಎನ್ ಶಿವಾನಂದ್ ಶೆಟ್ಟಿ
ಶ್ರೀಮತಿ ಮಂಜುಳಾ ಎಸ್. ಶೆಟ್ಟಿ

ಕಾರ್ಯದರ್ಶಿ : ಶ್ರೀಮತಿ ಶೋಭ ಆರ್.
**ಸ್ಥಾಪಕ ಅಧ್ಯಕ್ಷರು : ದಿ. ಡಾ|| ಐ. ವಿ. ಶೆಟ್ಟಿ**

ಶ್ರೀ ಇರ್ಮಾಡಿ ಜಯಪ್ರಸಾದ್ ಶೆಟ್ಟಿ
**ಅಧ್ಯಕ್ಷರು**

ಶ್ರೀ ಹೆಚ್. ಶ್ರೀಧರ್ ಹೆಗ್ಡೆ
**ಉಪಾಧ್ಯಕ್ಷರು**

ADVT.


ಬಂಟರ ಸಂಘ, ಬೆಂಗಳೂರು
ಚುನಾವಣೆ 2026-'29
TEAM
Dr. DEEPAK SHETTY
ಇದು ನಿಮ್ಮ ಟೀಮ್!
01 DR.DEEPAK SHETTY
PRESIDENT
01 MADHUKAR SHETTY.M
VICE PRESIDENT
02 SOUMYAPRIYA HEGDE
VICE PRESIDENT
ELECTION DATE
20
SEPT 2026
9AM TO 5PM
01 AMARNATH SHETTY
HONORARY SECRETARY
02 SUREKHA SHETTY
JOINT SECRETARY
01 RAMITH B SHETTY
TREASURER
ಆಡಳಿತಕ್ಕೆ ಬೇಕಾದ ಸಮರ್ಥ ಟೀಮ್
ಅಭಿವೃದ್ಧಿಗೆ ಬೇಕಾದ ಸಮಗ್ರ ದೃಷ್ಟಿಯ ಥೀಮ್
ಎರಡನ್ನೂ ಹೊಂದಿರುವ ಏಕೈಕ ತಂಡ
ಡಾ.ದೀಪಕ್ ಶೆಟ್ಟಿ ಟೀಮ್
ಸಂಪೂರ್ಣ ತಂಡಕ್ಕೆ ನಿಮ್ಮೆಲ್ಲರ ಅಮೂಲ್ಯ
ಮತದ ಬೆಂಬಲ ಇರಲಿ ಎಂದು ವಿನಂತಿಸುವ
ಶ್ರೀ ಶಿವಾನಂದ ಶೆಟ್ಟಿ
ಮ್ಯಾನೇಜಿಂಗ್ ಡೈರೆಕ್ಟರ್
ತೊಂಬತ್ತು ಇನ್‌ಪ್ರಾ ಪ್ರೈವೇಟ್ ಲಿಮಿಟೆಡ್

ADVT.

REGISTERED KA/BGW-1589/2A21-2A23 RNI No. : KARBIL/2005/16402, Date of Publication 07-08-2026.
Licenced post without prepayment License No.PMG BG /WPP-219/2A21-2023, Total No.of Pages 56+4=60
Licensed to post at Bengaluru PSO, Mysuru Road, Bengaluru - 560026, on 10th or 12th of every Month




ADVT.

Printed and Published by : Sri Vijay J Shetty Halady. on behalf of Bunts' Sangha Bengaluru.
# 324, Bunts' Sangha Complex, Chord Road, Vijayanagar, Bengaluru - 560 040. Editor : Ravindra Shetty.
Printed at Poornima Printers, # 3 & 4, Sy. No. 51 / 14, Chowdeshwarinagar, Pipe Line Road, Laggere, Bengaluru - 58.
Phone : 080 - 23359588 | 23351210